ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್., ಪದವಿಗೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಕೆ.ಎಂ. ರೂಪ

ನೋಂ.ಸಂ: ೧೫೦೧೦೧೦೩೦೦೯-೨

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೫-೧೬

ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ

(ಎಂ.ಫಿಲ್., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ಕೆ.ಎಂ. ರೂಪ

ನೋಂ.ಸಂ: ೧೫೦೧೦೧೦೩೦೦೭

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೫-೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಕೆ.ಎಂ. ರೂಪ ಇವರು ಸಿದ್ಧಪಡಿಸಿ ಸಾದರಪಡಿಸಿದ **'ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ'** ಎಂಬ ಶೀರ್ಷಿಕೆಯ ಸಂಶೋಧನ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್., ಪದವಿಗಾಗಿ ಸಲ್ಲಿಸಿರುತ್ತಾರೆ. ಪ್ರಸ್ತುತ ಸಂಪ್ರಬಂಧವನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 30/7/16

ಡಾ. ರಹಮತ್ ತರೀಕೆರೆ
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

'ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ' ಎಂಬ ಶೀರ್ಷಿಕೆಯ ಸಂಶೋಧನ ಸಂಪ್ರಬಂಧವನ್ನು ಪ್ರಾಧ್ಯಾಪಕರಾದ **ಡಾ. ರಹಮತ್ ತರೀಕೆರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್., ಪದವಿಗಾಗಿ ಸಲ್ಲಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

K.m. Roopa

ಸ್ಥಳ : ವಿದ್ಯಾರಣ್ಯ
ದಿನಾಂಕ: 30-7-16

ಕೆ.ಎಂ. ರೂಪ
ಸಂಶೋಧನ ವಿದ್ಯಾರ್ಥಿನಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ ೧ : ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ ೧–೬

ಅಧ್ಯಾಯ ೨ : ಸವಿತಾ ನಾಗಭೂಷಣ ಅವರ ಸಂಕ್ಷಿಪ್ತ ಪರಿಚಯ ೭–೧೩

* ಬಾಲ್ಯಜೀವನ ಮತ್ತು ಶಿಕ್ಷಣ
* ವೃತ್ತಿ ಜೀವನ
* ಪ್ರೇರಣೆ ಮತ್ತು ಪ್ರಭಾವ
* ಪ್ರಶಸ್ತಿಗಳು
* ಸವಿತಾ ನಾಗಭೂಷಣರ ಕೃತಿಗಳು

ಅಧ್ಯಾಯ ೩ : ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಆತ್ಮ ವಿಮರ್ಶೆ ಅಥವಾ ವೈಯಕ್ತಿಕ ಅನುಭವಗಳ ಅಭಿವ್ಯಕ್ತಿ ೧೪–೨೮

* ಸ್ತ್ರೀವಾದಿ ನೆಲೆಗಳು

ಅಧ್ಯಾಯ ೪ : ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಪ್ರಕೃತಿ ಮತ್ತು ಮನುಷ್ಯ ಸಂಬಂಧದ ನೆಲೆಗಳು ೨೯–೪೫

ಅಧ್ಯಾಯ ೫ : ಸವಿತಾ ನಾಗಭೂಷಣ ಅವರ ಸಾಮಾಜಿಕ ಗ್ರಹಿಕೆಯ ನೆಲೆಗಳು ೪೬–೭೪

* ಲಿಂಗ ಅಸಮಾನತೆ

ಅಧ್ಯಾಯ ೬ : ಸವಿತಾ ನಾಗಭೂಷಣ ಅವರ ಧಾರ್ಮಿಕ ಗ್ರಹಿಕೆಯ ನೆಲೆಗಳು ೭೫– ೮೫

ಅಧ್ಯಾಯ ೭ : ಸಮಾರೋಪ ೮೬–೯೨

* ಅಧ್ಯಯನದ ಫಲಿತಗಳು
* ಪ್ರಾಥಮಿಕ ಆಕರಗಳು
* ಪೂರಕ ಆಕರಗಳು

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ:

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾಟಕ, ಕಾದಂಬರಿ, ಸಣ್ಣಕಥೆ ಹಾಗೂ ಕಾವ್ಯ ಪ್ರಕಾರಗಳು ತಮ್ಮದೇ ಆದ ಚಾಪು ಮೂಡಿಸಿವೆ. ಇವುಗಳಲ್ಲಿ ನಾಟಕ ಪ್ರಕಾರವು ಪ್ರದರ್ಶನ ಅಥವಾ ರಂಗ ಪ್ರಯೋಗದ ಮೂಲಕ ಅಭಿವ್ಯಕ್ತಿಸಿ, ಸಮಾಜಿಕ ಪ್ರಜ್ಞೆಯನ್ನು ಮೂಡಿಸುತ್ತ ಬಂದಿದೆ. ಕಾದಂಬರಿ ಹಾಗೂ ಸಣ್ಣಕತೆಗಳು ಒಂದು ವಸ್ತು, ಸನ್ನಿವೇಶವನ್ನು ನಿರೂಪಣ ವಿಧಾನದ ಮೂಲಕ ಸರೆಹಿಡಿಯುತ್ತ ಬಂದಿವೆ. ಇಲ್ಲಿನ ನಿರೂಪಣ ವಿಧಾನವು ವಿವರಣಾತ್ಮಕವಾಗಿರುತ್ತದೆ. ಆದರೆ ಕಾವ್ಯ ಪ್ರಕಾರವು ಈ ಮೇಲಿನ ಮೂರು ಪ್ರಕಾರಗಳಿಗಿಂತ ಭಿನ್ನವಾಗಿರುತ್ತದೆ. ಇಲ್ಲಿ ದೀರ್ಘ ವಿವರಣೆಗೆ ಅವಕಾಶವಿಲ್ಲ. ಕವಿಯು ಅಥವಾ ಕವಿಯತ್ರಿಯರು ತಮ್ಮಲ್ಲಿನ ಉಪಮಾ ಮತ್ತು ರೂಪಕ ವಿಧಾನದಿಂದ ಕಾವ್ಯ ರಚನೆಗೆ ತೊಡಗುತ್ತಾರೆ. ಈ ಕಾವ್ಯ ಪ್ರಕಾರಕ್ಕೆ ಅಲ್ಪದಲ್ಲಿ ಕಲ್ಪವನ್ನು ಸೆರೆಹಿಡಿಯುವ ವಿಶೇಷ ಗುಣವಿದೆ. ಈ ಕಾವ್ಯ ಪ್ರಕಾರದಲ್ಲಿ ಕವಿಗಳು ಮಣ್ಣಿನ ವಾಸನೆ, ಸಮಕಾಲೀನ ಪ್ರಜ್ಞೆ, ತಮ್ಮ ತುಡಿತ ಮಿಡಿತಗಳನ್ನು ವಿಭಿನ್ನ ರೂಪಕಗಳ ಮೂಲಕ ಅಭಿವ್ಯಕ್ತಿಸುತ್ತ ಬಂದಿದ್ದಾರೆ. ಕನ್ನಡ ಕಾವ್ಯದ ಇತಿಹಾಸದಲ್ಲಿ ಪ್ರಾಚೀನ ಕಾಲದ ಹಳೆಗನ್ನಡದಿಂದ ಹಿಡಿದು ಇತ್ತೀಚಿನ ಸಮಕಾಲೀನದವರೆಗೂ ಅನೇಕ ಕಾವ್ಯ ಪ್ರಯೋಗಗಳು ನಡೆದಿವೆ. ಇಂತಹ ವೈವಿಧ್ಯಪೂರ್ಣವಾದ ಕಾವ್ಯ ಪ್ರಯೋಗಗಳು ಪಂಪ, ಬಸವಣ್ಣ, ಕುಮಾರವ್ಯಾಸ ಮೊದಲಾದ ಕವಿಗಳ ಕಾಲದಲ್ಲಿ ಮಾತ್ರವಲ್ಲದೆ ಇಪ್ಪತ್ತನೆಯ ಶತಮಾನದಲ್ಲಿಯೂ ಅನೇಕ ಪ್ರಯೋಗಗಳು ನಡೆದಿವೆ. ಈ ಶತಮಾನದಲ್ಲಿ ಸೃಜನಶೀಲ ಚಟುವಟಿಕೆಗೆ ಪ್ರೇರಣೆಯಾಗಿ ಸಾಮಾಜಿಕ, ರಾಜಕೀಯ, ರಂಗದಲ್ಲಾದ ಬದಲಾವಣೆಗಳನ್ನು ನಾವು ನೋಡಬಹುದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಲೇಖಕಿಯರು ಕಾವ್ಯ ಪ್ರಕಾರವನ್ನು ತಮ್ಮ ಪ್ರಧಾನ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡಿದ್ದಾರೆ. ಕನ್ನಡ ಕಾವ್ಯ ಕ್ಷೇತ್ರದ ಏಕಮುಖವಾದ ಪುರುಷ ಪ್ರಜ್ಞೆಯ ಪ್ರವಾಹದ ದಿಕ್ಕನ್ನು ಒಂದಿಷ್ಟು ಬೇರೆಯ ಕಡೆಗೆ ಬದಲಿಸುವ ಪ್ರಯತ್ನವನ್ನು ಮಹಿಳಾ ಲೇಖಕಿಯರು ಕೈಗೊಂಡಿದ್ದಾರೆ. ವಿಮರ್ಶಕರು ಗುರುತಿಸುವಷ್ಟು ವ್ಯಾಪಕವಾಗಿ ಲೇಖಕಿಯರು ಕಾವ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಹಿಳಾ ಲೇಖಕಿಯರು ಈ ಕ್ಷೇತ್ರವನ್ನು ಆಯ್ದುಕೊಳ್ಳುವುದಕ್ಕೆ ಕಾರಣವೂ ಇದೆ. ಪುರುಷನಂತೆ ನೇರವಾಗಿ ಅಭಿವ್ಯಕ್ತಿಸಲಾಗದ ಕೆಲವು ಸಂವೇದನೆಗಳನ್ನು ಕಾವ್ಯದ ರೂಪಕ ಭಾಷೆಯ ಮೂಲಕ ಅಭಿವ್ಯಕ್ತಿಸಲು ಕಾವ್ಯವನ್ನು ಆಯ್ದುಕೊಂಡಿದ್ದಾರೆ. ಕನ್ನಡ ಕಾವ್ಯದಲ್ಲಿ ಸ್ತ್ರೀವಾದಿ ಧೋರಣೆಯ ಮೂಲಕ ಹೊಸದೊಂದು ಛಾಪು ಮೂಡಿಸಿದವರು ಮಹಿಳಾ ಲೇಖಕಿಯರು. ಏಕೆಂದರೆ ಇದುವರೆಗೆ ನೋಡದ ತಮ್ಮ ಅಂತರಂಗದ ಎಲ್ಲ ಸ್ತರಗಳನ್ನು ಹೊರಗೆಳೆದು ಎಳೆಎಳೆಯಾಗಿ ಬಿಡಿಸಿಡುತ್ತಿದ್ದಾರೆ. ಕಾವ್ಯ ಈ ತಲೆಮಾರಿನವರ ಪ್ರಿಯವಾದ ಮಾಧ್ಯಮವಾಗಿದ್ದು, ಮಹಿಳಾ ಸಾಹಿತ್ಯದ ಎಲ್ಲಾ ಧೋರಣೆಗಳೂ ಸಮರ್ಥವಾಗಿ ಈ ಮಾಧ್ಯಮದಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು.

ನವೋದಯ ಸಾಹಿತ್ಯದಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧವಾಗಿ ಧ್ವನಿ ಎತ್ತುವುದಕ್ಕೆ ಅವಕಾಶವಿರಲಿಲ್ಲ. ಹೀಗಾಗಿ ಈ ಘಟ್ಟದ ಸಾಹಿತ್ಯದಲ್ಲಿ ಆವೇಶ, ವಿಡಂಬನೆ, ಬಂಡಾಯಗಳು ಕಂಡು ಬರುವುದಿಲ್ಲ. ಇಲ್ಲಿ ಸಾಹಿತ್ಯ ಕೃಷಿ ಮಾಡಿರುವ ಲೇಖಕಿಯರು ಉನ್ನತ ವರ್ಗದಿಂದ ಬಂದವರಾಗಿದ್ದು, ಸಾಮಾಜಿಕ ಬಂಧದೊಳಗೆ ತಮ್ಮ ಸಂವೇದನೆಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಎಪ್ಪತ್ತರ ದಶಕದ ನಂತರದ ರೂಪಗೊಂಡ ಸ್ತ್ರೀವಾದಿ ಸಾಹಿತ್ಯವು ಮಹಿಳಾ ಲೇಖಕರಿಗೆ ಮುಕ್ತತೆಯನ್ನು ಕಲ್ಪಿಸಿಕೊಟ್ಟಿತು. ಆದರೆ ಈ ಕಾಲದ ಕಾವ್ಯ ಪ್ರಕಾರದ ತುಡಿತವನ್ನು ಕುರಿತ ಗಿರಡ್ಡಿ ಗೋವಿಂದರಾಜು ಅವರು ಗ್ರಹಿಕೆ ಹೀಗಿದೆ; 'ತನ್ನ ಕಾಲದ ಸಾಮಾಜಿಕ ಸ್ಥಿತಿಯ ಚಿತ್ರಣಕ್ಕೆ ಬೇಕಾದ ವ್ಯಂಗ್ಯ, ಕಟಕಿ, ಆತ್ಮವಿಮರ್ಶೆಗೆ ಯೋಗ್ಯವಾದ ತಾಂತ್ರಿಕ ಉಪಕರಣಗಳನ್ನು ಸಾಧಿಸಿಕೊಂಡು ಹೊಸ ವಸ್ತುಗಳನ್ನು ಕಾವ್ಯ ತಂದಿತು' ಎಂಬುದಾಗಿ ತಿಳಿಸುತ್ತಾರೆ. ಇಂತಹ ಅಂಶಗಳನ್ನು ಕ್ರೂಢೀಕರಿಸಿ ಕನ್ನಡ ಕಾವ್ಯದ ಕೃಷಿ ಮಾಡಬೇಕೆಂಬ ತುಡಿತ ಹೊದಿರುವವರಲ್ಲಿ ಸವಿತಾ ನಾಗಭೂಷಣ ಅವರು ಪ್ರಮುಖರಾಗಿದ್ದಾರೆ. ಇದುವರೆಗೆ ತುಳಿತಕ್ಕೆ ಒಳಗಾದ ಎಲ್ಲ ದುರ್ಬಲ, ನಿರಕ್ಷರಿ, ನಿರ್ಗತಿಕ ನಿಮ್ನ ವರ್ಗದ ಹಾಗೂ ಎಲ್ಲ ಮಹಿಳೆಯರ ಮೌನ ಸ್ಫೋಟಗೊಂಡು ಉದ್ಭವಿಸಿದ ಚಳುವಳಿಗಳಿಂದಾಗಿ ತಮ್ಮ ಅಸ್ಮಿತೆಯನ್ನು ಸ್ಥಾಪಿಸುವುದಕ್ಕಾಗಿ ಎತ್ತಿದ ಧ್ವನಿಗಳ ದಾಖಲೆಯಿಂದಾಗಿ ಸಾಹಿತ್ಯವು ಸಾರ್ವತ್ರಿಕತೆ ಸಾಧಿಸಿತು.

ಸವಿತಾ ನಾಗಭೂಷಣ ಅವರು ಕನ್ನಡ ಕಾವ್ಯ ಪರಂಪರೆಯನ್ನು ಹೊಸ ರೀತಿಯಲ್ಲಿ ನೋಡುವ ಬಗೆ, ಅವರ ಆಲೋಚನಾ ಕ್ರಮ, ಕಾವ್ಯಗಳಲ್ಲಿರುವ ಪ್ರಕೃತಿಯ ಕುರಿತ ಪ್ರತಿಸ್ಪಂದನೆ

ಹಾಗೂ ಧರ್ಮ, ಜಾತಿ ಕುರಿತ ಚಿಂತನೆ, ಹೀಗೆ ಹತ್ತಾರು ಅಂಶಗಳನ್ನು ತಮ್ಮ ಕಾವ್ಯದಲ್ಲಿ ಪ್ರಸ್ತುತಪಡಿಸಿದ್ದಾರೆ. ಕೌಟುಂಬಿಕ ಜೀವನ ಶೈಲಿ, ಸಾಮಾಜಿಕ, ರಾಜಕೀಯ, ಆರ್ಥಿಕ ಸಂರಚನೆಗಳಂತಹ ಅಂಶಗಳನ್ನು ಹಾಗೂ ಸಮಾಜವು ಮಹಿಳೆಯ ಬದುಕನ್ನು ಹೇಗೆ ರೂಪಿಸಿದೆ ಎಂಬುದರ ಬಗ್ಗೆ ತಾತ್ವಿಕ ನೆಲೆಗಟ್ಟನ್ನು ತಮ್ಮ ಕಾವ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ವೇದಗಳ ಕಾಲದಿಂದ ಆರಂಭಿಸಿ ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೂ ಸಮಾಜದಲ್ಲಿ ಹೆಣ್ಣನ್ನು ಕುರಿತ ದೃಷ್ಟಿಕೋನ ಸಾಂಪ್ರದಾಯಿಕವಾಗಿರುವಂತೆಯೇ, ಮಹಿಳೆಯರು ಲಿಖಿತವಾದ ಸಾಹಿತ್ಯಿಕ ಲೋಕದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಇಷ್ಟೆಲ್ಲಾ ದೀರ್ಘಕಾಲದ ಮೌನ ಮುರಿತು ಏಕಾಏಕಿ ಧ್ವನಿ ಬಂದವರಂತೆ ಕಾವ್ಯಲೋಕದಲ್ಲಿ ತಮ್ಮದೇ ಛಾಪನ್ನು ಸಂಖ್ಯೆ ಮತ್ತು ಗುಣ ಎರಡರಲ್ಲೂ ಎದ್ದು ಕಾಣುವಂತಹ ಕಾವ್ಯದ ಬೆಳವಣಿಗೆಯನ್ನು ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗುವುದು.

ಈ ನೆಲೆಯಲ್ಲಿ 'ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ' ಎಂಬ ಶೀರ್ಷಿಕೆಯ ವಿಭಿನ್ನ ಆಯಾಮಗಳನ್ನು ಶೋಧಿಸುವ ಪ್ರಯತ್ನದಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ:

ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ ಎಂಬ ವಿಷಯದ ಅಧ್ಯಯನಕ್ಕೆ ಇರುವ ಉದ್ದೇಶಗಳನ್ನು ಈ ಕೆಳಗಿನಂತೆ ಕಂಡುಕೊಳ್ಳಬಹುದಾಗಿದೆ.

- ಇಪ್ಪತ್ತನೆಯ ಶತಮಾನದಲ್ಲಿ ಕಾವ್ಯವನ್ನು ಬರೆಯಲು ತೊಡಗಿದ ಸವಿತಾ ನಾಗಭೂಷಣ ಅವರು ಪರಂಪರೆ ಮತ್ತು ಸಂಸ್ಕೃತಿಯನ್ನು ಗ್ರಹಿಸಿದ ನೆಲೆಯಲ್ಲಿ ಕಾವ್ಯವನ್ನು ಕಟ್ಟುವ ಪ್ರಯತ್ನ ಮಾಡಿದ್ದಾರೆ. ಕಾವ್ಯ ರಚನೆಯಲ್ಲಿ ತೊಡಗಿದ ಇವರು ಚರ್ಚೆ, ವಾಗ್ವಾದ ಮತ್ತು ಪ್ರತಿಭಟನೆಗಳನ್ನು ಸಮೀಪದಿಂದ ವೀಕ್ಷಿಸಿ, ಇದರ ಸಾರವನ್ನು ಗ್ರಹಿಸಿಕೊಂಡು ಅವರದೇ ಆದ ಹೋರಾಟದ ನೆಲೆಯಲ್ಲಿ ಕಾವ್ಯ ಕಟ್ಟುವ ಕೆಲಸ ಮಾಡಿದ್ದಾರೆ. ಇವರ ಹೋರಾಟದ ತಾತ್ವಿಕ ನೆಲೆಗಳನ್ನು ಅಧ್ಯಯನ ಮಾಡುವುದು ಇದರ ಪ್ರಮುಖ ಉದ್ದೇಶ.
- ಸವಿತಾ ನಾಗಭೂಷಣ ಅವರು ಯುದ್ಧ, ಹಸಿವು, ಮೃತ್ಯು, ಜಾಗತೀಕರಣದ ಹೊಸ್ತಿಲಲ್ಲಿ ನಿಂತಿರುವ ರೈತರ ಸ್ಥಿತಿಗತಿ, ಮೌಢ್ಯತೆ ಹಾಗೂ ಇತರೆ ಹತ್ತಾರು ವಿಷಯಗಳನ್ನು ತಮ್ಮ ಕವನ ಸಂಕಲನಗಳಲ್ಲಿ ಪ್ರಸ್ತುತಪಡಿಸಿದ್ದಾರೆ ಸಾಮಾಜಿಕ ಅಸಮಾನತೆಯ ಕುರಿತ ಲೇಖಕಿಯ ತಾತ್ವಿಕ ಧೋರಣೆಗಳನ್ನು ಚರ್ಚೆಗೆ ಗುರಿಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ
- ಸವಿತಾ ನಾಗಭೂಷಣ ಅವರ ಕವನಗಳು ವಿಚಾರದಿಂದ ತುಂಬಿದ್ದು, ಅವರ ವಿಚಾರಗಳು ಸಾಮಾನ್ಯ ಓದುಗನಿಗೂ ಅರ್ಥವಾಗುವ ರೀತಿಯಲ್ಲಿ ಕಾವ್ಯದ ಮೂಲಕ ವ್ಯಕ್ತವಾಗಿವೆ.

ಅಲ್ಲದೇ ಸಾಮಾನ್ಯ ಜನರ ಬದುಕು ಕಾವ್ಯದ ವಸ್ತುವಾಗಿರಬೇಕು ಎಂಬುದು ಅವರ ನಿಲುವು. ಇಂತಹ ಅಂಶಗಳನ್ನು ವರ್ತಮಾನದ ವಿದ್ಯಮಾನಗಳಿಗೆ ಪೂರಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಉದ್ದೇಶವನ್ನು ಈ ಕಿರುಪ್ರಬಂಧ ಹೊಂದಿದೆ.

- ಸವಿತಾ ನಾಗಭೂಷಣ ಅವರು ಸ್ತ್ರೀವಾದಿ ಧೋರಣೆಗಳನ್ನು ಸಾಂಸ್ಕೃತಿಕ ನೆಲೆಗಟ್ಟಿನಿಂದ ಆರಂಭಿಸುತ್ತಾರೆ. ಸಾಮಾಜಿಕ ಅಸಮಾನತೆಯ ನೆಲೆಯಲ್ಲಿ ಹೆಣ್ಣಿನ ಶೋಚನೀಯ ಬದುಕನ್ನು ಅನಾವರಣಗೊಳಿಸುವ ಮೂಲಕ ಸ್ತ್ರೀ ಅಸ್ಮಿತೆಗಾಗಿ ತುಡಿಯುವ ಇವರ ಕಾವ್ಯಗಳ ಆಯಾಮಗಳನ್ನು ಅಧ್ಯಯನಕ್ಕೆ ಗುರಿಪಡಿಸುವುದು ಪ್ರಸ್ತುತ ಪ್ರಬಂಧ ಉದ್ದೇಶವಾಗಿದೆ.
- ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಕಂಡುಬರುವ ಮನುಷ್ಯ ಮತ್ತು ಪ್ರಕೃತಿ ನಡುವಿನ ಸಂಬಂಧದ ನೆಲೆಗಳನ್ನು ವಿಶ್ಲೇಷಣೆಗೆ ಗುರಿಪಡಿಸುವುದು ಪ್ರಸ್ತುತ ಪ್ರಬಂಧ ಉದ್ದೇಶವಾಗಿದೆ.
- ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಕಂಡುಬರುವ ನಿರೂಪಣಾ ಶೈಲಿ, ಭಾಷಾ ವೈಶಿಷ್ಟ್ಯತೆ, ರಚನಾ ವಿನ್ಯಾಸ ಮತ್ತು ಪ್ರತಿಮ ರೂಪಕಗಳನ್ನು ಗುರುತಿಸುವುದು ಮತ್ತು ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ಮಹತ್ವ:

'ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ' ಎಂಬ ವಿಷಯವು ಮೇಲಿನ ಉದ್ದೇಶಗಳನ್ನು ಒಳಗೊಂಡಿದೆ. ಈ ಅಧ್ಯಯನವು ತನ್ನದೆ ಆದ ಮಹತ್ವವನ್ನು ಒಳಗೊಂಡಿದೆ. ಸವಿತಾ ನಾಗಭೂಷಣ ಅವರ ಕವನಗಳಲ್ಲಿ ವ್ಯಕ್ತವಾಗಿರುವ ಪ್ರಕೃತಿ ಮತ್ತು ಪರಿಸರ, ರಾಷ್ಟ್ರೀಯ ಮತ್ತು ಸಾಮಾಜಿಕ ಪ್ರಜ್ಞೆಗಳ ವಿಶ್ಲೇಷಣೆ, ಧರ್ಮದ ಕುರಿತ ಚಿಂತನೆ ಹಾಗೂ ಸ್ತ್ರೀವಾದಿ ನೆಲೆಯ ಸಮಾನತೆಯ ತುಡಿತಗಳಂತಹ ಉಪಯುಕ್ತ ಅಂಶಗಳನ್ನು ಅವರ ಕಾವ್ಯದಲ್ಲಿ ನಿರೂಪಿಸಲಾಗಿದೆ. ಮತ್ತೆ ಇವರ ಕಾವ್ಯಗಳಲ್ಲಿ ಕಂಡುಬರುವ ವಿಭಿನ್ನ ಆಯಾಮಗಳ ಕುರಿತು ವಿಶ್ಲೇಷಣೆ ಮಾಡುವುದು ಹಾಗೂ ಇವರ ಅಭಿವ್ಯಕ್ತಿಯಲ್ಲಾದ ಪಲ್ಲಟಗಳನ್ನು ಗುರುತಿಸುವುದು ಈ ಕಿರುಪ್ರಬಂಧ ಮಹತ್ವವಾಗಿದೆ.

ಮಹಿಳಾ ಲೇಖಕಿಯರು ತಮ್ಮ ಅಸ್ಮಿತೆಯ ಹುಡುಕಾಟದ ನೆಲೆಯಲ್ಲಿ ವ್ಯಕ್ತವಾದ ಸಂವೇದನೆಗಳನ್ನು ಕವನಗಳ ವ್ಯಕ್ತಪಡಿಸಿದ್ದಾರೆ. ಇಂತಹ ಸಂವೇದನೆಗಳನ್ನು ವಿಶ್ಲೇಷಣೆ ಮಾಡುವುದು ಮತ್ತು ವರ್ತಮಾನದ ತಲ್ಲಣಗಳೊಂದಿಗೆ ಇವುಗಳನ್ನು ಮುಖಾಮುಖಿಯಾಗಿಸುವುದು ಪ್ರಸ್ತುತ ಪ್ರಬಂಧದ ಮಹತ್ವವಾಗಿದೆ.

ಸವಿತಾ ನಾಗಭೂಷಣ ಅವರ ಕಾವ್ಯಗಳ ಮೂಲಕ ಮಹಿಳೆಯರ ತಲ್ಲಣಗಳನ್ನು ವಿಶ್ಲೇಷಣೆ ಮಾಡಲಾಗುವುದು. ಇದರಿಂದ ಮಹಿಳಾ ಲೇಖಕಿಯರ ಸಮಾಜಿಕ ಕಳಕಳಿಯನ್ನು ತಿಳಿಯಲು ಸಹಕಾರಿಯಾಗುತ್ತದೆ. ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಯನ್ನು ಗುರುತಿಸಿದಂತಾಗುತ್ತದೆ. ಮಹಿಳೆಯರು ಕೂಡ ಪುರುಷರಂತೆ ಸಾಹಿತ್ಯದ ಮೂಲಕ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿರುವುದನ್ನು ತಿಳಿಯುವುದು ಈ ಕಿರು ಪ್ರಬಂಧದ ಮಹತ್ವಗಳಲ್ಲೊಂದಾಗಿದೆ.

ಅಧ್ಯಯನದ ವಿಧಾನ

ಯಾವುದೇ ಅಧ್ಯಯನಕ್ಕೆ ಎರಡು ನೆಲೆಗಳು ಇರುತ್ತವೆ. ಒಂದು ಗ್ರಂಥಗಳ ಮೂಲಕ ಆಕರಗಳನ್ನು ವಿಶ್ಲೇಷಿಸುವುದು, ಇನ್ನೊಂದು ಕ್ಷೇತ್ರಕಾರ್ಯದ ಮೂಲಕ ಆಕರಗಳನ್ನು ಸಂಗ್ರಹಿಸುವುದು. ಪ್ರಸ್ತುತ ಅಧ್ಯಯನವು ಗ್ರಂಥಗಳ ಮೂಲಕ ಆಕರಗಳನ್ನು ಸಂಪ್ರಹಿಸಿ ವಿಶ್ಲೇಷಣೆ ಮಾಡುವುದಾಗಿದೆ. ಈ ಸಂದರ್ಭದಲ್ಲಿ ಹೆಚ್ಚಿನ ಮಾಹಿತಿಗಾಗಿ ಕವಿಯತ್ರಿಯಾದ ಸವಿತಾ ನಾಗಭೂಷಣ ಅವರನ್ನು ಸಂದರ್ಶನ ಮಾಡಿ ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಅಗತ್ಯವಿದ್ದಲ್ಲಿ ಇತರೆ ಲೇಖಕಿಯರೊಂದಿಗೆ ತೌಲನಿಕ ಅಧ್ಯಯನ ಕ್ರಮವನ್ನು ಕೈಗೊಳ್ಳಲಾಗುವುದು. ಕಾವ್ಯವನ್ನು ವಿಶ್ಲೇಷಿಸುವ ವಿಧಾನವನ್ನು ಇಲ್ಲಿ ಕೈಗೊಳ್ಳಲಾಗುವುದು.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಸೀಮಿತ ನೆಲೆಯಲ್ಲಿ ಗುರುತಿಸಿಕೊಳ್ಳಲಾಗಿದೆ. ಸವಿತಾ ನಾಗಭೂಷಣ ಅವರ ಎಲ್ಲಾ ಕವನ ಸಂಕಲನಗಳನ್ನು ಇಲ್ಲಿ ವಿಶ್ಲೇಷಣೆಗೆ ಗುರಿಪಡಿಸಲಾಗಿದೆ. ಆದ್ದರಿಂದ ಇವರ ಒಟ್ಟಾರೆ ಕವನ ಸಂಕಲನಗಳ ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲಾಗಿದೆ.

ಅಧ್ಯಾಯ – ಎರಡು

ಸವಿತಾ ನಾಗಭೂಷಣ ಅವರ ಸಂಕ್ಷಿಪ್ತ ಪರಿಚಯ

ಅಧ್ಯಾಯ – ೨

ಸವಿತಾ ನಾಗಭೂಷಣ ಅವರ ಸಂಕ್ಷಿಪ್ತ ಪರಿಚಯ

ಬಾಲ್ಯಜೀವನ ಮತ್ತು ಶಿಕ್ಷಣ

ಸವಿತಾ ನಾಗಭೂಷಣ ಅವರು ೧೯೬೧ ಮೇ ೧೧ರಂದು ಚಿಕ್ಕಮಂಗಳೂರಿನಲ್ಲಿ ಜನಿಸಿದರು. ಇವರ ತಂದೆ, ದಯಾನಂದ ಪೈ, ತಾಯಿ ಸರಸ್ವತಿ. ಇವರು ತಮ್ಮ ಬಾಲ್ಯವನ್ನು ಶಿವಮೊಗ್ಗದಲ್ಲಿ ಕಳೆದರು. ಸವಿತಾರವರು ತಮ್ಮ ಬಾಲ್ಯದ ದಿನಗಳಿಂದಲೂ ಬ್ರಾಹ್ಮಣ ಹಾಗೂ ಲಿಂಗಾಯತ ಸಮುದಾಯಗಳ ನಡುವೆ ಬೆಳೆದು ಬಂದಿದ್ದರು. ಇದಕ್ಕೆ ಕಾರಣ ಇವರ ತಂದೆಯವರು ಸರ್ಕಾರಿ ನೌಕರರಾಗಿದ್ದು, ಇವರು ಕಾರ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ಹೆಚ್ಚಾಗಿ ಈ ಸಮುದಾಯದ ಜನರೇ ಹೆಚ್ಚಾಗಿರುವ ಕಾರಣ ಈ ಉನ್ನತ ವರ್ಗಗಳ ನಡುವೆಯೇ ಬೆಳೆದುಬಂದರು. ಸವಿತಾ ಅವರು ಕೊಂಕಣಿ ಸಮುದಾಯದವರಾಗಿದ್ದು, ಇವರ ಮನೆ ಭಾಷೆ ಕೊಂಕಣಿಯಾಗಿತ್ತು. ಈ ಕಾರಣದಿಂದ ಬಹುತೇಕವಾಗಿ ಹೊರಗಿನ ಜನತೆಯೊಂದಿಗೆ ಸಂಬಂಧವು ಕಡಿಮೆಯಾಗಿತ್ತು. ಸವಿತಾರವರ ಹತ್ತಿರದ ಸಂಬಂಧಿಗಳನ್ನು ಹೊರತುಪಡಿಸಿದರೆ ಉಳಿದವರೊಂದಿಗೆ ಹತ್ತಿರದ ಬಾಂಧವ್ಯವಿರಲಿಲ್ಲ. ಇವರ ತಂದೆಯವರು ಸರ್ಕಾರಿ ನೌಕರರಾದ ಕಾರಣ ಊರಿಂದ ಊರಿಗೆ ವರ್ಗಾವಣೆಯಾಗುತ್ತಿದ್ದರು. ಇದರಿಂದಾಗಿ ವಿಭಿನ್ನ ಸಾಮಾಜಿಕ ಸನ್ನಿವೇಶಗಳು, ವಿಭಿನ್ನ ವಾತಾವರಣ ಹಾಗೂ ವಿಭಿನ್ನ ಜನರ ಜೀವನ ಕ್ರಮಗಳ ಪರಿಚಯ ಇವರಿಗೆ ಇತ್ತು. ಇವರ ತಂದೆಯವರು ಹೆಚ್ಚು ಸೇವೆಯನ್ನು ಮಲೆನಾಡಿನ ಭಾಗದಲ್ಲಿಯೇ ನಿರ್ವಹಿಸಿರುವ ಕಾರಣ ಇವರಿಗೆ ಮಲೆನಾಡಿನ ಪ್ರಕೃತಿ ಸೌಂದರ್ಯದ ಸೊಬಗಿನ ಸಂಪೂರ್ಣ ಪರಿಚಯವಿತ್ತು.

ಸವಿತಾ ಅವರ ತಂದೆ ತಾಯಿಗೆ ನಾಲ್ಕು ಜನ ಮಕ್ಕಳು. ಇದರಲ್ಲಿ ಸವಿತಾ ಅವರೇ ಪ್ರಥಮ ಪುತ್ರಿ, ಇವರಿಗೆ ಬಾಲ್ಯ ಶಿಕ್ಷಣವು ಮಲೆನಾಡಿನ ಪ್ರದೇಶಗಳಲ್ಲಿಯೇ ಲಭಿಸಿದೆ. ತಮ್ಮ

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಶಿವಮೊಗ್ಗದಲ್ಲಿಯೇ ಪೂರೈಸಿದರು. ನಂತರ ಬಿ.ಕಾಂ ಪದವಿಯನ್ನು ಶಿವಮೊಗ್ಗದಲ್ಲಿಯೇ ಪಡೆದರು. ಕೌಟುಂಬಿಕ ಒತ್ತಡದ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಹಲವಾರು ಸಮಸ್ಯೆಗಳು ಎದುರಾದವು. ಈ ಕಾರಣದಿಂದ ಜೀವನಕ್ಕಾಗಿ ವೃತ್ತಿಯನ್ನು ಮಾಡುತ್ತಲೇ ಶಿವಮೊಗ್ಗದಲ್ಲಿ ಸಂಜೆ ಕಾಲೇಜಿನ ಸೌಲಭ್ಯ ಪಡೆದುಕೊಂಡು ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಕುಟುಂಬದಲ್ಲಿನ ಬಡತನದ ನಡುವೆಯೂ ದಿಟ್ಟತನವನ್ನು ಪ್ರದರ್ಶಿಸಿ ತಮ್ಮ ಬದುಕನ್ನು ರೂಪಿಸಿಕೊಂಡ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಬಾಲ್ಯ ಜೀವನದಿಂದಲೂ ಹಲವಾರು ಸಮಸ್ಯೆಗಳ ನಡುವೆಯೇ ಬದುಕಿ ಬಂದಿದ್ದರು. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವ ಸನ್ನಿವೇಶ, ಘಟನೆಗಳನ್ನು ನೋಡಿಯೂ ಅವುಗಳಿಂದ ಪಾಠ ಕಲಿತಿದ್ದರು. ಇವೆಲ್ಲವುಗಳ ಸಾರವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವ ಇವರ ಬರಹಗಳಲ್ಲಿ ಗುರುತಿಸಬಹುದಾಗಿದೆ.

ವೃತ್ತಿ ಜೀವನ:

ಸವಿತಾ ನಾಗಭೂಷಣ ಅವರು ತಮ್ಮ ಕುಟುಂಬದ ಬಡತನದ ಕಾರಣದಿಂದ ೧೮ನೇ ವಯಸ್ಸಿಗೆ ಅಂಚೆ ಇಲಾಖೆಯಲ್ಲಿ ನೌಕರಿಯನ್ನು ಪಡೆದರು. ೧೯೭೭ರಿಂದ ಸುಮಾರು ೨೦ ವರ್ಷಗಳ ಕಾಲ ಅಂಚೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದರು. ಈ ಅವಧಿಯಲ್ಲಿ ಅಂಚೆ ಇಲಾಖೆಯ ಅಧೀಕ್ಷಕರಾಗಿಯೂ ಚಿತ್ರದುರ್ಗದಲ್ಲಿ ಕಾರ್ಯನಿರ್ವಹಿಸಿದರು. ಈಗ ತಮ್ಮ ಬಾಳ ಸಂಗಾತಿಯಾದ ಡಿ.ಎಸ್. ನಾಗಭೂಷಣ ಅವರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ. ಸವಿತಾ ಅವರ ಬಾಳಸಂಗಾತಿಯಾದ ಡಿ.ಎಸ್. ನಾಗಭೂಷಣ ಅವರು ಕೂಡ ಸಾಹಿತ್ಯಾಸಕ್ತರು ಹಾಗೂ ಲೇಖಕರು. ಇವರು ಕೂಡ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ಇವರ ಸಹಕಾರದಿಂದಲೂ ಸವಿತಾರವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಸಹಕಾರ ದೊರೆಕಿದೆ.

ಪ್ರೇರಣೆ ಮತ್ತು ಪ್ರಭಾವ:

ಸವಿತಾ ನಾಗಭೂಷಣ ಅವರ ಸಾಹಿತ್ಯದ ಮೇಲೆ ವಿಭಿನ್ನ ಪರಿಸರ, ವಿಭಿನ್ನ ವ್ಯಕ್ತಿಗಳು, ಹಲವಾರು ಸಾಹಿತ್ಯ ಪಂಥ ಹಾಗೂ ವಾದಗಳ ಪ್ರಭಾವವಿರುವುದು ಕಂಡುಬರುತ್ತದೆ. ಸವಿತಾ ಅವರು ಬಾಲ್ಯದ ದಿನಗಳಿಂದಲೂ ವಿಭಿನ್ನವಾದ ಪರಿಸರವನ್ನು ಕಂಡು ಅನುಭವಿಸಿದವರು. ಮಲೆನಾಡಿನ ಸೊಬಗು ಇವರ ಕಾವ್ಯಕ್ಕೆ ಸೂಕ್ತ ಪ್ರೇರಣೆ ನೀಡುವುದು ಕಂಡುಬರುತ್ತದೆ. ಹಾಗೆಯೇ ಬಡತನದ ಬದುಕಿನಲ್ಲಿ ಬೆಳೆದುಬಂದ ಇವರಿಗೆ ಜೀವನದಲ್ಲಿ ಹಲವಾರು ಸಮಸ್ಯೆಗಳು ಎದುರಾಗಿವೆ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಜಾತೀಯತೆ, ಮೇಲು-ಕೀಳು, ಬಡವ-ಶ್ರೀಮಂತರ

ಶೋಷಣೆ ಮುಂತಾದ ಸಾಮಾಜಿಕ ಸನ್ನಿವೇಶಗಳಿಂದ ಪ್ರಭಾವಿತರಾಗಿ ಕಾವ್ಯಕೃಷಿಗೆ ಮುಂದಾಗಿರುವುದು ತಿಳಿದುಬರುತ್ತದೆ.

ಸವಿತಾ ಅವರು ಪಿಯುಸಿ ಓದುವಾಗ ಸಾಹಿತ್ಯ ಲೋಕಕ್ಕೆ ಓದುಗರಾಗಿ ಪ್ರವೇಶಿಸಿದರು. ಈ ವೇಳೆಯಲ್ಲಿ ಹಲವಾರು ಕತೆ, ಕಾದಂಬರಿಗಳನ್ನು ಓದತೊಡಗಿದರು. ಸಾಮಾಜಿಕ ಅಸಮಾನತೆಯನ್ನು ಕಣ್ಣಾರೆ ಕಂಡಿದ್ದ ಸವಿತಾ ಅವರಿಗೆ ಮುಲ್ಕ್‌ರಾಜ್ ಆನಂದರ 'ಅನ್‌ಟಚಬಲ್' ಕೃತಿಯನ್ನು ಓದಿದ ತರುವಾಯದಲ್ಲಿ ಸಮಾಜದ ವಾಸ್ತವ ಚಿತ್ರಣದ ಅರಿವಾಯಿತು. ಈ ಕೃತಿಯ ಪ್ರವೇಶದಿಂದಾಗಿ ಮೇಲು ಜಾತಿಯವರು ಕೆಳಜಾತಿಯ ಜನರನ್ನು ಪ್ರಾಣಿಗಳಿಗಿಂಥ ಕನಿಷ್ಠವಾಗಿ ಕಾಣುವಂತಹ ಸ್ಥಿತಿಯ ಅನುಭವವಾಯಿತು. ಇವರಲ್ಲಿ ಮೂಡಿದ ಸಾಮಾಜಿಕ ಪ್ರಜ್ಞೆಯಿಂದ ಈ ಅಸಮಾನತೆಗೆ ಕಾರಣವನ್ನು ಹಾಗೂ ಇದಕ್ಕೆ ಪರಿಹಾರ ಕಂಡುಕೊಳ್ಳುವ ನೆಲೆಯಲ್ಲಿ ತಮ್ಮ ಶೋಧವನ್ನು ಮುಂದುವರಿಸಿದರು. ತಮ್ಮಲ್ಲಿ ಮೂಡಿದ ಸಂವೇದನೆಗಳನ್ನು ಸಾಹಿತ್ಯದ ಮೂಲಕ ಹೊರಹಾಕುವ ಪ್ರಯತ್ನಕ್ಕೆ ಮುಂದಾದರು. ಹೀಗೆ ಪ್ರಾರಂಭವಾದ ಸಾಹಿತ್ಯ ಕೃಷಿಯ ಫಲವಾಗಿ ಕಾಲೇಜು ಹಂತದಲ್ಲಿಯೇ ಕಾಲೇಜಿನ ಸಂಚಿಕೆಯೊಂದಕ್ಕೆ 'ಚಂದ್ರನನ್ನು' ಕುರಿತಂತೆ ಪದ್ಯವನ್ನು ಬರೆದರು. ಇದರ ಜಾಡುಹಿಡಿದು ಹೊರಟ ಸವಿತಾ ಅವರು ೧೯೮೨ರಲ್ಲಿ 'ನನ್ನೂರಿನ ತುಂಗೆಯ ಪ್ರವಾಹ' ಎಂಬ ಕವಿತೆಯನ್ನು ಪ್ರಜಾವಾಣಿಯಲ್ಲಿ ಪ್ರಕಟವಾದ ನಂತರ ಇವರಲ್ಲಿ ಉತ್ಸಾಹವೊಂದು ಒಡಮೂಡಿತು. ಇದರ ಪ್ರತಿಫಲವಾಗಿ ತಮ್ಮ ಬರವಣಿಗೆಯನ್ನು ಮುಂದುವರೆಸಿದರು. ೧೯೮೩ರ ಸೆಪ್ಟೆಂಬರ್‌ನಲ್ಲಿ ಆಕಾಶವಾಣಿ ಭದ್ರಾವತಿಯಲ್ಲಿ ತಮ್ಮ ಕವನಗಳನ್ನು ಸಾದರಪಡಿಸಿದರು. ಇವುಗಳಿಂದ ಉತ್ತಮ ಪ್ರತಿಕ್ರಿಯೆಗಳು ಬರಲಾರಂಭಿಸಿದವು.

ಸವಿತಾ ಅವರು ಕವಿತೆಯ ಜೊತೆಜೊತೆಯಲ್ಲಿಯೇ ಸಣ್ಣ ಕಥೆಗಳನ್ನು ಬರೆಯುವ ಹವ್ಯಾಸ ತೊಡಗಿಸಿಕೊಂಡರು. ಇದರಲ್ಲಿ ಕೆಲವು ಪ್ರಕಟವಾದವು ಮತ್ತೆ ಕೆಲವು ಪ್ರಕಟಣೆಗೊಳ್ಳಲಿಲ್ಲ. ಈ ಹಂತದಲ್ಲಿ ತಮ್ಮ ಬರವಣಿಗೆಯನ್ನು ಸ್ವಲ್ಪ ಕುಂಟಿತಗೊಳಿಸಿದರು. ಆದರೆ 'ತುಷಾರ, ಕಲ್ಪನೆ, ಮಯೂರ' ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳಿಗೆ ಬಹುಮಾನಕ್ಕೆ ಆಯ್ಕೆಯಾದವು. ಇದರಿಂದ ಸವಿತಾ ಅವರಲ್ಲಿ ಹೊಸ ಉತ್ಸಹವೊಂದು ತಲೆದೂರಿತ್ತು. ಸಾಮಾಜಿಕ ಅಸಮಾನತೆ, ಲಿಂಗತಾರತಮ್ಯ, ಶೋಷಣೆಯಂತಹ ಅಮಾನವೀಯ ಕೃತ್ಯಗಳನ್ನು ವಸ್ತುವಾಗಿಟ್ಟುಕೊಂಡು ವಿಮರ್ಶಾತ್ಮಕ ನೆಲೆಯಲ್ಲಿ ತಮ್ಮ ಸಾಹಿತ್ಯ ಕೃಷಿಯನ್ನು ಮುಂದುವರಿಸಿದರು.

ಇವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರೆಯಲು ಹಲವಾರು ವ್ಯಕ್ತಿಗಳು ಹಾಗೂ ಸಾಮಾಜಿಕ ಸನ್ನಿವೇಶಗಳು ಪ್ರಭಾವ ಬೀರಿರುವುದಾಗಿ ತಿಳಿದುಬರುತ್ತದೆ. ವಚನಗಳು, ಝೆನ್, ಬುದ್ಧಿಸಂ, ರಮಣಮಹರ್ಷಿಗಳ ಆಧ್ಯಾತ್ಮಿಕ ಒಳನೋಟಗಳು ಇವರ ಮೇಲೆ ಪ್ರಭಾವ

ಬೀರಿರುವುದಾಗಿ ತಿಳಿದುಬರುತ್ತದೆ. ಹಾಗೆಯೇ ಸತ್ಯಜಿತ್‌ರೇ, ಕುರೋಸಾವಾ, ಭೀಮಸೇನ ಜೋಷಿ ಮುಂತಾದವರು ಇವರ ಕಾವ್ಯಕ್ಕೆ ಪ್ರೇರಕ ಶಕ್ತಿಯಾಗಿ ಕಂಡುಬರುತ್ತಾರೆ. ಹಾಗೆಯೇ ಸಾಹಿತಿಗಳಾದ ಕುವೆಂಪು, ಮಾಸ್ತಿ, ಕಾರಂತರ ಬರಹಗಳು ನೇರ ಪ್ರಭಾವ ಬೀರಿರುವುದಾಗಿ ತಿಳಿದುಬರುತ್ತದೆ. ಸವಿತಾ ಅವರ ಮೇಲೆ ಬಸವಣ್ಣನ ವಚನಗಳ ಸರಳತೆ ಹಾಗೂ ಬದ್ಧತೆ, ಅಕ್ಕನ ವಚನಗಳ ಭಾವ ತೀವ್ರತೆ, ನೇರನಡೆ, ಅಮೃತ ಪ್ರೀತಮರ ಕವನಗಳ ಉನ್ಮಾದತೆಯು ಹೆಚ್ಚು ಪ್ರಭಾವ ಬೀರಿರುವುದಾಗಿ ಸವಿತಾ ಅವರೇ ಹೇಳಿಕೊಂಡಿದ್ದಾರೆ. ಇವರು ಕವನಗಳನ್ನು ಬರೆಯಲು ತೊಡಗಿದಾಗ ಕೆ.ಎಸ್. ನಿಸಾರ್ ಅಹಮದ್, ಕೆ.ವಿ. ತಿರುಮಲೇಶ್, ಎಚ್.ಎಸ್. ವೆಂಕಟೇಶಮೂರ್ತಿ, ಎಚ್.ಎಸ್. ಶಿವಪ್ರಕಾಶ್, ಸಿದ್ಧಲಿಂಗಯ್ಯ ಮುಂತಾದವರ ಕವನಗಳನ್ನು ಮುಂದಿಟ್ಟುಕೊಂಡು ಅವರು ಕಾವ್ಯ ಬರೆಯಲು ತೊಡಗಿರುವುದಾಗಿ ತಿಳಿದುಬರುತ್ತದೆ. ಜೀವನದ ದೈನಂದಿನ ಒತ್ತಡಗಳನ್ನು ಹಗುರ ಮಾಡಿಕೊಳ್ಳಲು ಕಾವ್ಯ ಅವಶ್ಯಕ ಎಂಬುದು ಸವಿತಾ ಅವರ ಅಭಿಪ್ರಾಯವಾಗಿದೆ. ಈ ಕಾರಣದಿಂದ ಕನ್ನಡದ ಹೆಸರಾಂತ ಕವಿಗಳ ಮಾರ್ಗವನ್ನು ಅನುಸರಿಸಿದರು. ಇವರು ಮೊದಲು ಇಂಗ್ಲೀಷಿನಲ್ಲಿ 'ಮೈ ವಿಂಡೊ ಕಂಪನಿಯನ್' ಎನ್ನುವ ಕವಿತೆಯನ್ನು ಬರೆದರು. ಇದು ನವ್ಯ ಕಾಲದ ಆಶಯಗಳಿಗೆ ಪೂರಕವಾಗಿದೆ. ಇವರು ನವ್ಯಕಾಲದ ಪತ್ರಿಕೆಗಳಿಗೆ ಚಿತ್ರಕಲ್ಪನೆ ಮುಂತಾದ ವಿಭಾಗಗಳಿಗೆ ತಮ್ಮ ಕವಿತೆಗಳನ್ನು ಕಳುಹಿಸುತ್ತಿದ್ದರು. ಸವಿತಾ ಅವರು ಗದ್ಯ ಸಾಹಿತ್ಯಕ್ಕಿಂತ ಕವಿತೆಗಳನ್ನು ಹೆಚ್ಚು ಇಷ್ಟಪಡುತ್ತಿದ್ದರು. ಇದಕ್ಕೆ ಕಾರಣವೇನೆಂದರೆ, ಅದು ಮಿಂಚಿನತರಹ ಒಂದು ಕ್ಷಣದ ಸಂಚಾರಿ ಭಾವವನ್ನು ಸೆರೆಹಿಡಿಯಬಲ್ಲುದು ಎಂಬುದು ಇವರ ಅಭಿಪ್ರಾಯವಾಗಿತ್ತು.

ಸವಿತಾ ಅವರು ಚಿಕ್ಕ ಹುಡುಗಿಯಾಗಿದ್ದಾಗಲೇ ಸುಳ್ಳಿನ ಸರಮಾಲೆಯನ್ನು ಹೆಣೆಯುವಷ್ಟು ಚತುರಳಾಗಿದ್ದಳು. ಚಿತ್ರ ವಿಚಿತ್ರವಾದ ಕತೆಗಳನ್ನು ಹೆಣೆದು ದೊಡ್ಡವರನ್ನು ರಂಜಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಸವಿತಾ ಅವರು ಬಹುಪಾಲು ಬೆಳೆದದ್ದು ಅವರ ಅಜ್ಜಿಯ ಮನೆಯಲ್ಲಿ. ಇವರ ಅಜ್ಜಿಯ ನೆರಳಿನಲ್ಲೆ ಹೆಚ್ಚು ಪ್ರಭಾವಿತರಾಗಿದ್ದಾರೆ. ಇವರ ಅಜ್ಜಿ ರಮಣ ಮಹರ್ಷಿ ಹಾಗೂ ರಾಮಕೃಷ್ಣ ಪರಮಹಂಸರ ಭಕ್ತೆಯಾಗಿದ್ದಳು. ತನ್ನ ಅಜ್ಜಿಯು ಸಂತೋಷಕ್ಕೂ ದುಃಖಕ್ಕೂ ಕಣ್ಣೀರು ಹಾಕುವುದನ್ನು ಕಂಡು ಇವರು ತಮ್ಮ ಕವನಗಳಲ್ಲಿ ಗಾಂಧಿಯ ಕತೆಗಳನ್ನು ಬರೆಯುತ್ತಾ ಹೋದರು.

ಸವಿತಾ ಅವರ ಗದ್ಯಸಾಹಿತ್ಯದ ಮೇಲೆ ಬಾಗಲೋಡಿ ದೇವರಾಯ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ದೇವನೂರ ಮಹಾದೇವ ಅವರ ಪ್ರಭಾವ ಸಾಕಷ್ಟು ಕಂಡುಬರುತ್ತದೆ. ಸವಿತಾ ಅವರು ಬರವಣಿಗೆಯನ್ನು ಆರಂಭಿಸಿದ ಕಾಲದಲ್ಲಿ ಕನ್ನಡದಲ್ಲಿ ದಲಿತ ಬಂಡಾಯ ಸಾಹಿತ್ಯ ಚಳುವಳಿ ಮತ್ತು ಮಾರ್ಕ್ಸ್‌ವಾದ, ಸಮಾಜವಾದ ಮುಂತಾದ ಎಡಪಂಥೀಯ

ಸಿದ್ಧಾಂತಗಳು ಸಾಕಷ್ಟು ಚಾಲ್ತಿಯಲ್ಲಿದ್ದವು. ಇದರ ಜೊತೆಗೆ ಪೊಕೊವೊಕಾನ 'ಒಂದು ಹುಲ್ಲಿನ ಕ್ರಾಂತಿ' ಮತ್ತು ಮಾಸ್ಟರ್ ಮಹಾಶಯನ 'ಶ್ರೀ ರಾಮಕೃಷ್ಣ ವಚನವೇದ' ಮುಂತಾದವುಗಳು ಇವರ ಮೇಲೆ ಸಾಕಷ್ಟು ಪ್ರಭಾವ ಬೀರಿರುವುದು ಕಂಡುಬರುತ್ತದೆ.

ವರ್ತಮಾನದ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ ಸವಿತಾ ಅವರು ಒಟ್ಟು ಐದು ಕವನ ಸಂಕಲನಗಳನ್ನು ಹೊರತಂದಿದ್ದಾರೆ. 'ಜಾತ್ರೆಯಲ್ಲಿ ಶಿವ' ಕವನ ಸಂಕಲನದ ತರುವಾಯದಲ್ಲಿ ಇವರು ತಮ್ಮ ಬರವಣಿಗೆಯನ್ನು ಮೊಟಕುಗೊಳಿಸಿದ್ದಾರೆ. ಇದಕ್ಕೆ ಕಾರಣವು ಅವರ ವೈಯಕ್ತಿಕ ಸಮಸ್ಯೆಯೋ ಅಥವಾ ಆಸಕ್ತಿಯ ಕೊರತೆಯೋ ತಿಳಿಯುತ್ತಿಲ್ಲ. ಆದರೆ ಮಹಿಳಾ ಸಂವೇದನೆಗಳಿಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ ತಮ್ಮ ಹೋರಾಟವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಪ್ರಶಸ್ತಿಗಳು: ೧೯೮೩ರಲ್ಲಿ 'ನಾ ಬರುತ್ತೇನೆ ಕೇಳು' ಕವನ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದ್ದಾರೆ. 'ಹೊಳೆ ಮಗಳು' ಕವನ ಸಂಕಲನಕ್ಕೆ ಗೀತಾ ದೇಸಾಯಿ ದತ್ತಿನಿಧಿ ಪ್ರಶಸ್ತಿಯನ್ನು ಪಡೆದಿರುತ್ತಾರೆ. 'ಜಾತ್ರೆಯಲ್ಲಿ ಶಿವ' ಕವನ ಸಂಕಲನಕ್ಕೆ ಡಿ.ಎಸ್.ಕರ್ಕಿ ಪ್ರಶಸ್ತಿ ಮತ್ತು ವಾರಂಬಳ್ಳಿ ಪ್ರತಿಷ್ಠಾನದ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. 'ಸ್ತ್ರೀಲೋಕ' ಕಾದಂಬರಿಗೆ ಬಿ.ಎಸ್. ಶ್ರೀಧರ ಸಾಹಿತ್ಯ ಪ್ರಶಸ್ತಿ ಮತ್ತು ಎಂ.ಕೆ. ಇಂದಿರಾ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸಾಹಿತ್ಯದೊಂದಿಗೆ ಸಮಾಜಸೇವೆಯಲ್ಲಿಯೂ ಆಸಕ್ತಿಯನ್ನು ಹೊಂದಿರುವ ಸವಿತಾ ಅವರು ಹೆಗ್ಗೋಡಿನ 'ಚರಕಭೀಮನ ಕೋಣಿ' ಎಂಬ ಸಂಸ್ಥೆಯಲ್ಲಿಯೂ ಕಾರ್ಯಕರ್ತೆಯಾಗಿ ದುಡಿದರು. ಇದರ ಜೊತೆಗೆ 'ಗಾಂಧಿಗಿರಿ' ಎಂಬ ಪುಸ್ತಕ ಮಳಿಗೆಯನ್ನು ತೆರೆದಿದ್ದಾರೆ. ಮಹಿಳೆಯರ ಬಗ್ಗೆ ವಿಶೇಷ ಆಸಕ್ತಿ ಇರುವ ಇವರು, ಮಹಿಳೆಯರ ಅನೇಕ ಸಮಾಲೋಚನಾ ಸಭೆಗಳನ್ನು ಮತ್ತು ಶಿಬಿರಗಳನ್ನು ಏರ್ಪಡಿಸಿ, ಮಹಿಳೆಯರಿಗೆ ಮಾಹಿತಿಯನ್ನು ನೀಡುತ್ತ ಬಂದಿದ್ದಾರೆ. ತಿಂಡಿ-ತಿನಿಸು, ವಸ್ತ್ರವಿನ್ಯಾಸ, ಖಾದಿವಸ್ತ್ರಗಳ ಮಾರಾಟದಲ್ಲಿಯೂ ವಿಶೇಷ ಆಸಕ್ತಿಯನ್ನು ವಹಿಸಿಕೊಂಡು ಬಂದಿದ್ದಾರೆ. ಇದರ ಜೊತೆಗೆ ಗಾಂಧಿ ಮತ್ತು ಲೋಹಿಯಾ ಪ್ರತಿಷ್ಠಾನದ ಟ್ರಸ್ಟ್‌ಗಳ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿಕೊಂಡು ಬಂದಿದ್ದಾರೆ. ಹೀಗೆ ಸಾಹಿತ್ಯದ ಜೊತೆ ಸಾಮಾಜಿಕ ಕ್ಷೇತ್ರದಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿರುವ ಕೀರ್ತಿ ಸವಿತಾ ನಾಗಭೂಷಣ ಅವರಿಗೆ ಸಲ್ಲುತ್ತದೆ.

ಸವಿತಾ ನಾಗಭೂಷಣರ ಕೃತಿಗಳು

ನಾ ಬರುತ್ತೇನೆ ಕೇಳು - ೧೯೮೭

ಚಂದ್ರನನ್ನು ಕರೆಯಿರಿ ಭೂಮಿಗೆ - ೧೯೯೧

ಹೊಳೆ ಮಗಳು - ೧೯೯೬

ಆಕಾಶ ಮಲ್ಲಿಗೆ ಆಯ್ದ ನೂರು ಕವನಗಳು - ೨೦೦೦

ಜಾತ್ರೆಯಲ್ಲಿ ಶಿವ - ೨೦೦೨

ಕಾಡುಲಿಲ್ಲಿ ಹೂವುಗಳು - ೨೦೦೬

ಕಾದಂಬರಿ

ಸ್ತ್ರೀಲೋಕ- ೧೯೯೬

ಸಂಪಾದಿತ ಕೃತಿಗಳು

ಮುಡಿಮಲ್ಲಿಗೆ ಮಹಿಳಾ ಸಾಹಿತ್ಯ ಸ್ಪಂದನ - ೧೯೯೨

ಸಹ ಸಂಪಾದನೆ

ಸುವರ್ಣ ಕಾವ್ಯ-ಸುವರ್ಣ ಕಾವ್ಯ ಸಂಪುಟ-೨೦೦೬

ಅಧ್ಯಾಯ – ಮೂರು

ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಆತ್ಮ ವಿಮರ್ಶೆ ಅಥವಾ ವೈಯಕ್ತಿಕ ಅನುಭವಗಳ ಅಭಿವ್ಯಕ್ತಿ

ಅಧ್ಯಾಯ – ೩

ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಆತ್ಮ ವಿಮರ್ಶೆ ಅಥವಾ ವೈಯಕ್ತಿಕ ಅನುಭವಗಳ ಅಭಿವ್ಯಕ್ತಿ

ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಕನಸಿನ ಪ್ರತೀಕಗಳನ್ನು ಕಾಣಬಹುದು. ಬಹುತೇಕ ಕವಿತೆಗಳು ಸ್ವಗತದ ಧಾಟಿಯಲ್ಲಿವೆ. ಇಲ್ಲವೆ ತನ್ನ ಅಂತರಾಳದ ತುಡಿತವನ್ನು ಗೆಳತಿಯೊಬ್ಬಳಲ್ಲಿ ನಿವೇದಿಸಿಕೊಳ್ಳುವ ನೆಲೆಯಲ್ಲಿರುತ್ತವೆ. ಇಲ್ಲವೆ ನಿಸರ್ಗದ ಪ್ರಾಣಿ ಪಕ್ಷಿಗಳೊಂದಿಗೆ, ಗಿಡಮರಗಳೊಂದಿಗೆ ಸಂಭಾಷಣೆ ನಡೆಸುತ್ತಿರುವ ಧಾಟಿಯಲ್ಲಿರುತ್ತವೆ. ಸವಿತಾ ಅವರ ಕಾವ್ಯಗಳಲ್ಲಿ ಸ್ತ್ರೀ ಅಭಿವ್ಯಕ್ತಿಗೆ ತಡೆಯಾಗಿರುವ ಸಮಾಜವನ್ನು ನಿರ್ಮಿಸಿದ ಪುರುಷನನ್ನು ಅವಲಂಬನೆಗೆ ತೆಗೆದುಕೊಳ್ಳುವುದಿಲ್ಲ ಎಂಬುದು ಇವರ ಕಾವ್ಯಗಳಲ್ಲಿ ಕಂಡುಬರುತ್ತದೆ.

ಸವಿತಾ ಅವರ ಕಾವ್ಯಗಳಲ್ಲಿ ಒಂದು ಸಮಸ್ಯೆಯ ಪರಿಹಾರದ ಹೊಟ್ಟೆಯಲ್ಲೇ ಮತ್ತೊಂದು ಸಮಸ್ಯೆಯು ಪ್ರಾರಂಭವಾಗುತ್ತದೆ. ಈ ವ್ಯವಸ್ಥೆ ಎಂದಿಗೂ ಮುಗಿಯುವುದಿಲ್ಲ. ಮಹಿಳೆಯರ ಮೇಲೆ ಪುರುಷ ಪ್ರಧಾನ ವ್ಯವಸ್ಥೆಯು ಬದಲಾದ ಕಾಲಕ್ಕೆ ತಕ್ಕಂತೆ ನಿರಂತರವಾಗಿ ತನ್ನ ಶೋಷಣೆಯನ್ನು ಮುಂದುವರೆಸುತ್ತಿರುವ ಬಗ್ಗೆ ಇವರ ಕವಿತೆಗಳು ಪ್ರತಿಧ್ವನಿಸುತ್ತವೆ. ಸವಿತಾ ಅವರ ಕಾವ್ಯಗಳಲ್ಲಿ ಅದೆಷ್ಟೊ ಶತಮಾನಗಳ ಹಿಂದಣ ಹೆಣ್ಣುಮಕ್ಕಳ ಎಚ್ಚರ, ವಿವೇಕ, ಆಕಾಂಕ್ಷೆ, ಪ್ರತಿಭಟನೆಯ ಅಲೆಗಳನ್ನು ಹಿಡಿಯಲಾಗಿದೆ. ಪರಂಪರೆಯ ಪ್ರಜ್ಞೆ ಪ್ರಸ್ತುತದಲ್ಲಿ ಸಾಹಿತ್ಯ ರಚಿಸುತ್ತಿರುವ ಮಹಿಳೆಯರಲ್ಲೂ ಇದೆ ಎಂಬುದಕ್ಕೆ ಇವರ ಅನೇಕ ಬರಹಗಳು ಸಾಕ್ಷಿಯಾಗಿವೆ.

ಸವಿತಾ ಅವರು ಸಾಹಿತ್ಯದ ವಿದ್ಯಾರ್ಥಿನಿಯೂ ಅಲ್ಲ, ಸಹಜವಾದ ಹರೆಯದ ದಿನದವರೆಗೆ ಕಾವ್ಯ ಕ್ಷೇತ್ರದಲ್ಲಿ ಯಾವ ಗಮನಾರ್ಹ ಸಾಧನೆಯನ್ನು ಮಾಡಿದವರಲ್ಲ. ಸಹಜವಾಗಿಯೇ ಕಾವ್ಯ ಬರೆಯುವ ಹವ್ಯಾಸವನ್ನು ತೊಡಗಿಸಿಕೊಂಡ ಇವರು ಇದರಲ್ಲಿ ಅಭಿರುಚಿಯನ್ನು

ಗಳಿಸಿಕೊಂಡರು. ನಂತರದಲ್ಲಿ ಹೆಣ್ಣಿನ ಸಂವೇದನೆಗಳನ್ನು ತಮ್ಮ ಕಾವ್ಯಗಳಲ್ಲಿ ಸೆರೆಹಿಡಿಯಲು ಪ್ರಾರಂಭಿಸಿದರು. ಹೀಗೆ ಸ್ತ್ರೀವಾದಿ ನೆಲೆಯ ಜಾಡುಹಿಡಿದು ಹೊರಟ ಇವರು ಸಮಕಾಲೀನ ಸಮಸ್ಯೆಗಳನ್ನು ಅನಾವರಣಗೊಳಿಸುತ್ತ ಬಂದಿದ್ದಾರೆ. ಕಳೆದ ಒಂದೂವರೆ ದಶಕದ ಕಾವ್ಯವನ್ನು ನೋಡಿದಾಗ ನಮಗೆ ಹೊಸದೆಂಬಂತೆ ಎದ್ದು ಕಾಣುವುದು ಕಾವ್ಯವೇ. ಬಹುಶಃ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಕಾಲದ ನಂತರ ಇಷ್ಟೊಂದು ಜನ ಮಹಿಳೆಯರು ಕಾವ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿರುವುದು ಇದೇ ಮೊದಲು ಎಂದು ಕಾಣುತ್ತದೆ. ಕಳೆದ ದಶಕದ ಕನ್ನಡ ಕಾವ್ಯದಲ್ಲಿ ತಮ್ಮ ವೈಶಿಷ್ಟ್ಯತೆಯನ್ನು ಮೆರೆದಿರುವವರು ಮಹಿಳೆಯರೆ ಎಂದರೆ ಪುರುಷರು ಕೋಪಿಸಿಕೊಳ್ಳುವುದಿಲ್ಲ ಎಂದು ಭಾವಿಸುತ್ತಾರೆ. ಈ ಮಾತುಗಳನ್ನು ಕಳೆದುಕೊಂಡು ದಶಕದಲ್ಲಿ ರಚಿತವಾದ ಒಟ್ಟು ಕನ್ನಡ ಕಾವ್ಯಕ್ಕೆ ಅನ್ವಯಿಸಿ ಹೇಳುವುದಿಲ್ಲ. ಇತ್ತೀಚಿನ ಕಾವ್ಯದಲ್ಲಿ ಗುಣಾತ್ಮಕವಾಗಿ ಮಹಿಳೆಯರದ್ದೆ ಮೇಲುಗೈ ಎಂಬಂತಹ ಸಾಧನೆಗೆ ಕಾರಣರಾಗಿದ್ದಾರೆ.

ಒಂದು ರೀತಿಯ ಸ್ತಬ್ಧತೆಯೆಂದೂ ಕರೆಯಲಾಗದ, ಪ್ರಶಾಂತತೆಯೆಂದೂ ವರ್ಣಿಸಲಾಗದ, ಅನಿಶ್ಚಿತತೆಯೆಂದೂ ಹೇಳಲಾಗದ ಒಂದು ರೀತಿಯ ಹುಡುಕಾಟ ಸಾಹಿತ್ಯ ಮತ್ತು ಸಾಹಿತಿ ತನ್ನನ್ನೇ ಹುಡುಕಿಕೊಂಡು ಹೊರಟಂತಹ ಧ್ಯಾನದ ಕಾಲ ಇದು ಇರಬಹುದು. ಆದ್ದರಿಂದ ಕನ್ನಡ ಕಾವ್ಯಾಭಿಮಾನಿಗಳು ಕವಿಗಳಿಂದ ಹೆಚ್ಚಿನ ನಿರೀಕ್ಷೆಯನ್ನು ಇಟ್ಟುಕೊಳ್ಳಬಹುದಾಗಿದೆ. ಕೆಲವು ವರುಷಗಳ ಹಿಂದೆ ಇಂದು ಖ್ಯಾತನಾಮರಾಗಿರುವ ವಿಮರ್ಶಕರೊಬ್ಬರು ಓರ್ವ ಕವಿಯ ಕವಿತಾ ಸಂಕಲನಕ್ಕೆ ಹಿನ್ನುಡಿಯನ್ನೋ, ಮುನ್ನುಡಿಯನ್ನು ಗುಲಾಬಿ ನೋಡಿ ಸಂತಸಪಡುವ ಜನರನ್ನು ಛೇಡಿಸಿದ್ದರಂತೆ, ಆಗ ಹಿರಿಯ ಸಾಹಿತಿಯೊಬ್ಬರ ಗುಲಾಬಿಯ ಸೌಂದರ್ಯವನ್ನು ಸವಿಯುವ ಸಂವೇದನೆ ಇಲ್ಲದವ ದೇಶ ಹೊತ್ತಿ ಉರಿಯುವುದರ ನೋವನ್ನು ನಿಜವಾದ ಅರ್ಥದಲ್ಲಿ ಗ್ರಹಿಸಲಾರ ಎಂದು ಉತ್ತರ ಕೊಟ್ಟರಂತೆ.[೧] ಏನೇ ಹೇಳಿದರೂ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಎಷ್ಟೇ ಭಾರವಾದ ಮಾತುಗಳನ್ನಾಡಿದರೂ, ಕಾವ್ಯ ರಚನೆ ಈ ಏಳುಬೀಳುಗಳನ್ನೆಲ್ಲ ಮೀರಿ ನಡೆಯುವ ಕ್ರಿಯೆಯೆಂದೇ ಕಾವ್ಯಕ್ಕೆ ತನ್ನದೇ ಆದ ತೇಜಸ್ಸು, ಸೌಂದರ್ಯ ಮತ್ತು ಶಕ್ತಿ ಬರುವುದು ಇಂತಹ ಮೀರಿ ನಡೆಯುವ ಪ್ರವೃತ್ತಿಯಿಂದಲೇ. ಆದರೆ ಕೇವಲ ಆಗುಹೋಗುಗಳಿಗೆ ಸ್ಪಂದಿಸುವುದಷ್ಟೆ ಕಾವ್ಯವಾಗುವುದಿಲ್ಲ.

'ಕಿಟಾರ್ ಎಂದು ಕಿರುಚಾಡಿದಾಕ್ಷಣ ಕಾವ್ಯವಾಗುವುದೆ ಎಂದು ಒಮ್ಮೆ ಲಂಕೇಶರು ಬಂಡಾಯ ಕವಿಯೊಬ್ಬರನ್ನು ಕೇಳಿದರಂತೆ. ಅವರ ತಮಾಷೆಯ ಮಾತೆಂದು ತಳ್ಳಿಹಾಕುವುದಿಲ್ಲ ಸವಿತಾರವರ ಕಾವ್ಯ ವಸ್ತುವಿನಿಂದಷ್ಟೇ ಪರಿಣಾಮ ಬೀರುವುದಿಲ್ಲ.'[೨] ವಾಸ್ತವವಾಗಿ ಕಾವ್ಯ ಪರಿಣಾಮ ಬೀರುವುದು ಅವರ ಸೌಂದರ್ಯದಿಂದ ಆ ಸೌಂದರ್ಯ ಮೂಡುವುದು ಒಳಗಣ ಹೊರಣವಾದ ವಸ್ತುವಿನಿಂದಲೇ ಎಂಬ ಸಂಗತಿಯ ಗಮನಾರ್ಹ. ಕಾವ್ಯದ ಎಲ್ಲ ಅರ್ಥದ

ಸಾರ್ಥಕ್ಕೆ ಇರುವುದೆ ಈ ವಸ್ತು ಮತ್ತು ಸೌಂದರ್ಯಗಳ ನಡುವಣ ಈ ನಿಗೂಢ ಸಂಬಂಧದಲ್ಲಿ ಇರಬಹುದು. ಸವಿತಾ ಅವರ ಇನ್ನು ಕೆಲವು ಕವಿತೆಗಳು ಸುಂದರವಾಗಿ, ಸುಕೋಮಲವಾಗಿ ಕಾಣಲು ಹವಣಿಸಿರುವುದನ್ನು ಗಮನಿಸಬಹುದು. ಯೋಚನೆ, ಶಬ್ಧ ಮತ್ತು ಸೌಂದರ್ಯಗಳು ಖಂಡಿತ ಕಾವ್ಯದ ಮೂರು ಮುಖ್ಯ ಘಟಕಗಳೆ. ಆದರೆ ಕಾವ್ಯದ ಜೀವಾಳವಿರುವುದೇ ಮೂರು ಘಟಕಗಳ ಸಂಯೋಜನೆಯ ಕ್ರಿಯೆಯಲ್ಲಿ. ಇಂದು ಕವಿತೆಗಳ ಸಂಯೋಜನೆ ಹಿಂದೆ ಪರಂಪರೆಯ ಹಲವು ಸೆಳೆತಗಳು ಕೆಲಸ ಮಾಡಿರುವುದನ್ನು ಸವಿತಾ ನಾಗಭೂಷಣರವರ ಕಾವ್ಯಗಳಲ್ಲಿ ಗಮನಿಸಬಹುದಾಗಿದೆ. ನವ್ಯದ ಶಬ್ಧಶಿಲ್ಪದ ವ್ಯಸನ ಹಾಗೂ ಬಂಡಾಯದ ಭಾವಾವೇಶ ಇವೆಲ್ಲವೂ ನೆರಳುಗಳಂತೆ ಕವಿತೆಗಳನ್ನು ಹಿಂಬಾಲಿಸಿವೆ.

ಸವಿತಾ ಅವರ ಕಾವ್ಯಗಳಲ್ಲಿ ನಿಜವಾಗಿಯೂ ವೈವಿಧ್ಯಮಯವಾದ ಪ್ರಯತ್ನಶೀಲತೆಯ ಪ್ರತೀಕಗಳು ಇವೆ. ಸವಿತಾ ನಾಗಭೂಷಣ ಕಾವ್ಯದ ವಸ್ತು ಎಷ್ಟೇ ಸಾರ್ವತ್ರಿಕವಾಗಿರಲಿ, ಅದು ಸವಿತಾ ಕಾವ್ಯಗಳಲ್ಲಿ ವೈಯಕ್ತಿಕ ಸಂವೇದನೆಯಾಗಿ ಮಾರ್ಪಾಟಾದಾಗ ಮಾತ್ರ ಅದು ಕವಿತೆಯಾಗಿ ಹೊರಹೊಮ್ಮುವ ಸಾಮರ್ಥ್ಯ ಪಡೆಯುತ್ತದೆ. ಸವಿತಾ ಅವರ ಕಾವ್ಯಗಳಲ್ಲಿ ಅವರು ಸ್ಕಾಟನ ಸಾವು, ಮಾಂಡೇಲನ ನಗು, ಅಮೃತ ಮತಿಯ ಹಸಿವು, ರೂಪ ಕೆನ್ವರಳ ಅಸಹಾಯಕತೆ, ಗೆಳೆತನ, ಪ್ರೇಮ, ಹತಾಶೆ, ನೋವು ಕಾವ್ಯವಾಗುವುದು. ಕವಿತೆ ಕಟ್ಟುವ ಕಷ್ಟದ ಎದುಸಿರು ಕೇಳಿಸದೆ ಸುಂದರವಾಗಲು ಹೆಣಗುವ ನಟನೆ ಕಾಣದ ಕವಿತೆಗಳು ಸೃಷ್ಟಿಯಾದವು. ಸವಿತಾರವರು ಕಾವ್ಯಗಳಲ್ಲಿ ಸಂಕೀರ್ಣ ಬಂಧವನ್ನು ಕಟ್ಟಲಾಗದು ಮತ್ತು ಮಹಾಸೌಂದರ್ಯವನ್ನು ಮೂಡಿಸಲಾಗದು. ಕಾವ್ಯವೆಂದರೇನು ಎಂಬುದನ್ನು ಸ್ವಯಂ ಕಾವ್ಯರಚನೆ ಮೂಲಕ ಕಂಡುಕೊಳ್ಳಬೇಕಾದ ಸವಾಲನ್ನು ಸವಿತಾ ಅವರು ತಮ್ಮ ಕಾವ್ಯ ಪ್ರಯೋಗ ಮಾಡಿದ್ದಾರೆ.

ಸ್ತ್ರೀವಾದಿ ನೆಲೆಗಳು

"ಹೆಣ್ಣಿಗೆ ಹೆಣ್ಣೇ ಶತ್ರು" ಎಂಬ ಸಂಪ್ರದಾಯವಾದಿ ಧೋರಣೆಯನ್ನು ಮುರಿದು, ಹೆಣ್ಣಿಗೆ ಹೆಣ್ಣೇ ಅಭಯ ಎಂಬ 'ಸೋದರಿಭಾವ'ವನ್ನು ಪ್ರತಿಪಾದಿಸುವ ಸ್ತ್ರೀವಾದವನ್ನು ಸವಿತಾ ಅವರು ತಮ್ಮ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಇಂದಿನ ಸ್ತ್ರೀಭ್ರೂಣ ಹತ್ಯೆಯ ಆತಂಕದ ಹಿನ್ನೆಲೆಯಲ್ಲಿ ಸವಿತಾ ಅವರು ಸ್ತ್ರೀ ಸಂವೇದನೆಯನ್ನು ತಮ್ಮ ಕಾವ್ಯಗಳಲ್ಲಿ ವ್ಯಕ್ತಪಡಿಸಿದ್ದಾರೆ. ತಮ್ಮ ಬದುಕು ಮತ್ತು ಬರವಣಿಗೆ ಎರಡರಲ್ಲೂ ಸ್ತ್ರೀ ಪರವಾದ ಕಾಳಜಿಯನ್ನು ಒಂದು ಬದ್ಧತೆಯಾಗಿ ಕಟ್ಟಿಕೊಂಡಿರುವ ಸವಿತಾ ನಾಗಭೂಷಣ ಅವರು ತಮ್ಮ ಸಮಾಜ ಸೇವೆಯ ವಿವಿಧ ಮುಖಗಳ ಅನುಭವವನ್ನೇ 'ಸ್ತ್ರೀ ಲೋಕ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಹೆಣ್ಣಿನ ಅಂತಃಸತ್ತ್ವವನ್ನು ಗುರುತಿಸಿ ಆತ್ಮ ವಿಶ್ವಾಸದ ಚಿಲುಮೆ ಪ್ರವಹಿಸುವಂತೆ ಮಾಡುವ ಶಕ್ತಿ ಸವಿತಾ ಅವರ ಕಾವ್ಯಕ್ಕಿದೆ. ಮರುಕ, ಅನುಕಂಪದ ಹಂಗಿಲ್ಲದೆ ಸಹಜವಾದ ಮಾನವೀಯ ತುಡಿತ ಅವರ ಕವನಗಳಲ್ಲಿ ಮಿಡಿಯುತ್ತದೆ. ಸವಿತಾ ಅವರು ಪ್ರಕೃತಿ ಮತ್ತು ಬದುಕಿನ ಲಯದೊಂದಿಗೆ ಸ್ತ್ರೀ ಪ್ರಜ್ಞೆಯನ್ನು ಮಿಳಿತಗೊಳಿಸುತ್ತಿರುತ್ತಾರೆ. ಹಾಗಾಗಿ ಸ್ತ್ರೀ ಸಂವೇದನೆ ಹಾಗೂ ಪ್ರಜ್ಞೆಗಳೆರಡೂ ವಿಸ್ತಾರಗೊಂಡು ಹೊಸತೊಂದು ವಲಯವನ್ನು ಸವಿತಾ ಸ್ತ್ರೀವಾದಿ ಕಾವ್ಯದ ಸ್ವ ಕೇಂದ್ರೀಯತೆಯನ್ನು ನಿರಾಕರಣೆ ಮಾಡಿ ಕಾರುಣ್ಯದ ಹೊಳಪು ಬೆಳಗಿಸುತ್ತದೆ. ಹಿಂಸೆ ತುಂಬಿದ ಜಾಗತೀಕರಣದ ಹುಚ್ಚ ನೆರೆಗೆ ತತ್ತರಿಸಿದ ಜಗದಲ್ಲಿ ಬುದ್ಧನ ಮೈತ್ರಿ ಮತ್ತು ಕರುಣೆಯ ಪ್ರಸ್ತುತತೆಯನ್ನು ಸಾಬೀತುಪಡಿಸುತ್ತದೆ. 'ಬುದ್ಧಕವಿತೆ' ಸವಿತಾ ಅವರ ಸ್ತ್ರೀ ಸಂವೇದನೆ ವೈಶಾಲ್ಯತೆಯನ್ನು ಪಡೆಯುವುದು ಇಂತಲ್ಲಿಯೇ 'ತಂಗಿ ಹುಟ್ಟಿದಳು' ಕವನದಲ್ಲಿ

ಗಂಡ ಹಳೆಯ ಪ್ರೇಯಸಿಯ ನೆನಪುಗಳನ್ನು
ಎದೆಗೊತ್ತಿಕೊಂಡು ಸಂತೈಸುತ್ತಿದ್ದಾನೆ,
ಹೆಂಡತಿ ಒಂಟಿ ಬಾವಲಿಯ ರೆಕ್ಕೆ ಬಡಿತಗಳನ್ನು
ಎಣಿಸುತ್ತಿದ್ದಾಳೆ
ಗೋಡೆಗಳು ಪಿಸುಗುಟ್ಟುತ್ತಿವೆ ಗಂಟಲಲ್ಲಿ
ಪ್ರೀತಿ ಸತ್ತ ಮನೆಯಲ್ಲಿ
(ಪ್ರೀತಿ ಸತ್ತ ಮನೆಯಲ್ಲಿ, ಕಾಡುಲಿಲ್ಲಿ ಹೂವುಗಳು)

ಗಂಡ ಹಳೆಯ ಪ್ರೇಯಸಿಯ ನೆನಪುಗಳನ್ನು ಎದೆಗೊತ್ತಿಕೊಂಡು ಸಂತೈಸುತ್ತಿದ್ದಾನೆ. ಹೆಂಡತಿ ಒಂಟಿ ಬಾವಲಿಯ ರೆಕ್ಕೆ ಬಡಿತಗಳನ್ನು ಎಣಿಸುತ್ತಿದ್ದಾಳೆ. ಸವಿತಾ ಅವರು ವಿರಹದ ಇನ್ನೊಂದು ಮಗ್ಗಲನ್ನೂ ಶೋಧನೆಗೆ ಒಳಪಡಿಸುತ್ತಾರೆ. ಪ್ರೀತಿಸಿ ಕಳೆದುಕೊಳ್ಳುವುದಾದರು ಲೇಸು, ಪ್ರೀತಿಯಿಲ್ಲದೆ ಬಾಳು ಕಳೆಯುವುದು ಬೇಡ. ಪ್ರೀತಿಸಿದ ನಂತರ ಅದಕ್ಕೆ ಪ್ರತಿಫಲ ಸಿಗದೇ ಕೆಂಗೆಟ್ಟವನು ದುರಾದೃಷ್ಟವಂತ. ಆದರೆ ಯಾರು ಎಂದೂ ಪ್ರೀತಿಸಿಲ್ಲವೊ ಅವರಂತಹ ದುರ್ದೈವಿಯು ಜಗತ್ತಿನಲ್ಲಿ ಬೇರೋಬ್ಬನಿಲ್ಲ. ಪ್ರೀತಿ ಒಂದು ಆಳದ ಬಾವಿಗೆ ಬಿದ್ದವರು ಮೇಲೆ ಕೆಳಗೆ ನೀರು ಗುಟುಕರಿಸುತ್ತ ತೇಲಾಡಿದರೂ ಬಾವಿಯ ಆಳವನ್ನು ಅಳೆಯಲು ಸಾಧ್ಯವಿಲ್ಲ. ಪ್ರೀತಿಯಲ್ಲಿ ಬೀಳುವವರೂ ಹಾಗೆಯೇ ಮಹಿಳೆಯು ಗಂಡನು ಸಿಟ್ಟಿಗೆದ್ದರೆ, ತನ್ನನ್ನು ಗದರಿಸಿದರೆ ಕೆಟ್ಟದಾಗಿ ಬೈದರೆ ಹೊಡೆದರೂ ಸಹ ಆಕೆಯು ಸೌಮ್ಯ ರೀತಿಯಿಂದಲೇ ಇರಬೇಕು. ಗಂಡು ಸಮಾಜದಲ್ಲಿ ಹೆಣ್ಣಿನ ಹಾಗೂ ಗಂಡಿನ ಸ್ಥಾನವನ್ನು ನಿರ್ದೇಶನ ಮಾಡಿದ್ದಾನೆ. ಗಂಡು ಹೆಣ್ಣಿನ ಪ್ರೀತಿ ಎನ್ನುವುದು ಒಂದು ಭ್ರಮೆ. ಅದಕ್ಕೊಂದು ಹುಚ್ಚು ಜಿಗಿತವಿದೆ. ಅದೊಂದು ಸ್ವಾರ್ಥಪರ ನಡವಳಿಕೆ. ಪ್ರೀತಿಯೆಂಬುದು ಭಾವನಾತ್ಮಕ ಅವಲಂಬಿತ ಭ್ರಮಾಧೀನದ ಬದುಕು ಹೆಣ್ಣಿನ

ಜೀವನದಲ್ಲಿ ಇದೆ. ಗಂಡು ದಾರಿ ತಪ್ಪಿದರೆ, ಕೆಟ್ಟ ಚಟಗಳನ್ನು ಬೆಳಸಿಕೊಂಡರೆ ಅದು ಆತನ ಪೌರುಷದ, ಪ್ರತಿಷ್ಠೆಯ ಪ್ರತೀಕವಾಗುತ್ತದೆ. ಪುರುಷ ಸ್ತ್ರೀಯನ್ನೂ ಸ್ತ್ರೀ ಪುರುಷನನ್ನು ಪರಸ್ಪರ ಬಯಸುತ್ತಾ, ವರಿಸುತ್ತ ಬಂದಿದ್ದಾರೆ. ಈ ಕವನದಲ್ಲಿ ತಾಯ್ತನದ ಸಂಭ್ರಮ ಹೆಣ್ತನದ ಸಡಗರಗಳಲ್ಲಿ ಹೆಣ್ಣು ಗಂಡು ಕುರಿತಾದ ಆಸಕ್ತಿಯನ್ನು ಮಿತಗೊಳಿಸಿದೆ.

ಕಪ್ಪಿಟ್ಟ ಮುಖ
ಮಿಂಚು ಕಣ್ಣುಗಳು
ಬೆಂಕಿ–ಬಿಸಿಯುಸಿರು
ಗುಡುಗು–ಸಿಡಿಲು
ಮೃದು ವಚನಗಳು
(ಚಂಡಿ, ಕಾಡುಲಿಲ್ಲಿ ಹೂವುಗಳು)

ಸವಿತಾ ಅವರ 'ಚಂಡಿ' ಎಂಬ ಕವನವು ಅಪ್ಪಟ ಸ್ತ್ರೀವಾದ ಕಾವ್ಯವಾಗಿದೆ. ಹೆಣ್ಣಿನ ರೂಪ, ಅವಳ ಬಾಹ್ಯ ಚಹರೆಗಳನ್ನು ಕಂಡು ಅವಳ ಮನಸ್ಥಿತಿಯನ್ನು ಅಳೆಯುವುದು ಅಲ್ಲ. ಅವರ ಆಂತರಿಕ ಮನಸ್ಥಿತಿಯನ್ನು ಗಮನಿಸಬೇಕು. ವೈಯಕ್ತಿಕ ಮತ್ತು ಅವೈಯಕ್ತಿಕ ಸಂಗತಿಗಳನ್ನು ಅಳಿಸಿ ಹಾಕುವಂತಹ ಕೆಲಸ ಈ ಕವನ ಮಾಡಿದೆ. ಸಾಮಾಜಿಕ ವ್ಯವಸ್ಥೆಯನ್ನು ವಿಡಂಬನೆಗೆ ಗುರಿಪಡಿಸುವುದು ಕಾವ್ಯದ ಮೂಲ ಉದ್ದೇಶವಾಗಿದೆ. ಹೆಣ್ಣಿನ ವ್ಯಂಗ, ವಿಡಂಬನೆಗೆ ಆವೇಶ ಭಾವುಕತೆಗಳಿಂದ ಕೂಡಿದೆ. ಇಲ್ಲಿ ಜೀವ–ಪರ ನಿಲುವುಗಳನ್ನು ಎತ್ತಿಹಿಡಿದಿದ್ದಾರೆ. ಮಹಿಳೆಗೆ ಎಷ್ಟೇ ಕೋಪ–ತಾಪವಿದ್ದರೂ ಅವಳೇ ಅದನ್ನು ನಿಭಾಯಿಸಬೇಕು ಎಂಬುದನ್ನು ಈ ಕವನವು ವ್ಯಕ್ತಪಡಿಸುತ್ತದೆ. ಭೂಮಿಯನ್ನು ಹೆಣ್ಣಿಗೆ ಹೋಲಿಸುತ್ತೇವೆ ಆಗ ಭೂಮಿಯೊಳಗೆ ತನ್ನ ನೋವನ್ನು ಜ್ವಾಲಾಮುಖಿಯಾಗಿ ಹೊರಬಂದು ಹೇಗೆ ಜಗತ್ತನ್ನು ನಾಶವಾಗುತ್ತದೆಯೋ ಹಾಗೆಯೇ ಹೆಣ್ಣಿಗೆ ಕೋಪ ಬಂದರೆ ಜ್ವಾಲಾಮುಖಿಯಂತೆ ಸಿಡಿಯುತ್ತಾಳೆ. ತನ್ನ ಕುಟುಂಬ ಒಡೆದು ಹೋಗುವಂತಹ ಪರಿಸ್ಥಿತಿಯು ನಿರ್ಮಾಣವಾಗುತ್ತದೆ ಎಂದು ಸವಿತಾ ಅವರು ಈ ಕವನದಲ್ಲಿ ತಿಳಿಸಿದ್ದಾರೆ.

ಬಿಸಿಲು ಕಂಡಿತು ಹಾಸಿಗೆ
ಹಳೆಯ ದಿಂಬಿಗೆ ಹೊಸಹೊದಿಕೆ
ಅತ್ತೆ ಮಾವನ ಪಟಗಳು
ಲಕಲಕ ಹೊಳೆದು
ಹೂವ ಮುಡಿದವು
(ನಾದಿನಿ ಬಂದು ಹೋದಳು, ಕಾಡುಲಿಲ್ಲಿ ಹೂವುಗಳು)

ಸ್ತ್ರೀ ಮತ್ತು ತನ್ನ ತವರು ಮನೆಯ ಕುರಿತಾಗಿ ಸವಿತಾ ಅವರು ಈ ಕವನವನ್ನು ಬರೆದಿದ್ದಾರೆ. ಸ್ತ್ರೀ ಮನೆಯಲ್ಲಿಯೇ ಅನ್ಯಳಾಗಿ ಬೆಳೆಯುತ್ತಾಳೆ. ಅವಳನ್ನು ಅತಿಥಿ ಪರಿಕಲ್ಪನೆಯಲ್ಲಿ ನೋಡಿಕೊಳ್ಳುತ್ತಾರೆ. ಹೀಗೆ ಅವಳು ಹುಟ್ಟಿದ ಮನೆಯಲ್ಲಿಯೇ ಅವಳನ್ನು ಕಾಣುವ ರೀತಿಯ ಅವಳಿಗೆ ಸಂಕೋಚ ಮನೋಭಾವನೆಯನ್ನು ಬೆಳೆಸುತ್ತದೆ. ಮಹಿಳೆಯು ತಾನು ಬೆಳೆದಂತಹ ಮನೆಯ ವಾತವರಣದ ಬಗ್ಗೆ ಮನೆಯವರ ಒಡನಾಟ ಗೊತ್ತಿದ್ದರು ಅವಳಿಗೆ ಅತ್ತಿಗೆಯು ಅತಿಥಿಯ ಉಪಚಾರವನ್ನು ಮಾಡಿ ಅವಳನ್ನು ವಿಚಾರಿಸುತ್ತಾಳೆ. ಹೆಣ್ಣು ಹೊಸ್ತಿಲು ದಾಟಿದರೆ ಅವಳು ಬೇರೆಯವರ ಮನೆಯ ದೀಪ ಎಂಬ ಭಾವನೆ ಬೆಳೆಯುತ್ತದೆ. ತನ್ನ ಅತ್ತಿಗೆಯು ತಾನು ಮಾಡಿದಂತಹ ಅಡುಗೆಯಲ್ಲಿ ಕಲ್ಲು ಸಿಗದಿರಲಿ ಎಂದು ದೇವರಲ್ಲಿ ಪ್ರಾರ್ಥನೆಯನ್ನು ಮಾಡುವಂತಹ ನಿಷ್ಕಲ್ಮಶವಾದ ಪ್ರೀತಿಯು ಇವರ ಕವಿತೆಗಳಲ್ಲಿ ಮೆರೆಗುಗೊಳಿಸುತ್ತದೆ.

ಅನಿಸುವುದು ಹತ್ತಿರ
ಹತ್ತಿರ ಹೋಗಬೇಕೆಂದು
ಏನು ಮಾಡಲಿ?
ಹಾಳು ಕಂದಕ
ಹಿರಿದಾಗುವುದು
(ಅದೇ ಕವನ)

ಅತ್ತಿಗೆಯು ತನ್ನ ಮನೆಗೆ ಬಂದು ಇರುವಂತಹ ನಾದಿನಿಗೆ ಸೀರೆ ಕುಪ್ಪಸ ತಂದು ಮಡಿಲು ತುಂಬಿದರು ಅವಳಿಗೆ ನಾನು ತಂದಿರುವ ಸೀರೆ, ಕುಪ್ಪಸ ನನ್ನ ನಾದಿನಿಗೆ ಇಷ್ಟವಾಯಿತೋ ಇಲ್ಲವು ಎಂಬ ತಳಮಳದೊಂದಿಗೆ ತನ್ನ ಮನಸ್ಸಿನಲ್ಲಿ ಗುನುಗುಡುತ್ತ ಇರುತ್ತಾಳೆ. ಅತ್ತೆಗೆಯೆಂದರೆ ನಮ್ಮಲ್ಲಿ ತಾಯಿಗೆ ಹೋಲಿಸಿ ಹೇಳುತ್ತೇವೆ. ತನ್ನ ನಾದಿನಿಯು ಮಗಳು ಎಂಬ ಮನೋಭಾವನೆ ಹೊಂದಿ, ತನ್ನ ಮನೆಗೆ ಬಂದಿರುವ ನಾದಿನಿಯನ್ನು ಕಂಡು ಅವಳ ಜೊತೆಗೆ ಮುಕ್ತವಾಗಿ ಮಾತನಾಡಬೇಕು ಎಂಬ ಕಲರವದ ಜೊತೆಗೆ ಅತ್ತಿಗೆಯು ಚಡಪಡಿಸುತ್ತಾಳೆ. ಆದರೆ ನನ್ನ ಪ್ರೀತಿಯು ಎಲ್ಲಿ ಹಿರಿದಾಗುವುದು ಎಂಬ ಭಾವನೆಯನ್ನು ಹೊಂದಿದ್ದಾಳೆ. ಈ ಕವನದಲ್ಲಿ ಹೆಣ್ಣಿನ ವ್ಯಕ್ತಿತ್ವವನ್ನು ಎತ್ತಿಹಿಡಿದಿದ್ದಾರೆ. ಇದು ಸ್ತ್ರೀ ಸಂವೇದನೆಯನ್ನು ಕುರಿತ ಕವನವಾಗಿದೆ. ಬೇರೆ ಮನೆಗೆ ಸೊಸೆಯಾಗಿ ಹೋಗಿರುವಂತಹ ಹೆಣ್ಣು ತನ್ನ ತವರು ಮನೆಗೆ ಬಂದರೆ ಅವಳನ್ನು ಕಾಣುವ ರೀತಿಯನ್ನು ಈ ಕವನದಲ್ಲಿ ಸವಿತಾ ಅವರು ವ್ಯಕ್ತಪಡಿಸಿದ್ದಾರೆ.

ನಿನ್ನ ಪ್ರೀತಿಯನ್ನಷ್ಟೇ ಉಟ್ಟು
ಹೊರಟು ನಿಂತಿದ್ದೇನೆ

ಇಗೋ ಹೊರಟೆ
ಎಲ್ಲವ ದಾಟಿ ಹೋಗಿಯೇ ಬಿಡುತ್ತೇನೆ
ನೀ ಬಿಟ್ಟು ಹೋದ
ತುಂಡ ನೆಲವನ್ನು
ಎತ್ತು ಬಿತ್ತಿ ಫಸಲು ತೆಗೆಯುತ್ತೇನೆ
(ಸತಿ ಹೋಗುವುದಿಲ್ಲ, ಕಾಡುಲಿಲ್ಲಿ ಹೂವುಗಳು)

ಹುಟ್ಟುತ್ತಲೇ ಹೆಣ್ಣು ಪರರ ಸ್ವತ್ತು ಎಂಬ ಭಾವನೆಯನ್ನು ಬೆಳೆಸಿಕೊಳ್ಳಲಾಗುತ್ತದೆ. ಬದುಕು ಗಂಡನೊಂದಿಗೆ ಮದುವೆಯಾಗುತ್ತಾಳೆ. ಅವಳ ಇಡೀ ಬದುಕೇ ತಾರೆಕ ಗಂಡನ ಮೌಲ್ಯವನ್ನೇ ಹೊತ್ತು ಅವಳನ್ನು ಶೋಧಿಸುತ್ತದೆ. ಆದರೂ ಹೆಣ್ಣು ತಾಯ್ತಂದೆಗಳ ಮಂಡೆಗೆ ಹೂವು ತರಬೇಕೆಂದು ಕೊನೆಗೂ ಈ ಪತಿಯ ಗಮನ ಅಂದರೆ ಜೊತೆಯಾಗಿ ನಡೆಯುವುದನ್ನು ಮಾನದಿಂದಲೇ ನಡೆಸುತ್ತಾಳೆ, ಸಂಪ್ರದಾಯಕ್ಕೆ ವಾಪಾಸಾಗುವ ಈ ಕ್ರಿಯೆ ಮಹಿಳಾ ವಿಮೋಚನೆಯ ಸಂದರ್ಭದಲ್ಲಿ ಹಿನ್ನಡೆ ಎಂದೇ ಹೇಳಬೇಕು.

ನೀ ಬಿಟ್ಟು ಹೋದ। ತುಂಡ ನೆಲವನ್ನು
ಎತ್ತು ಬಿತ್ತಿ। ಫಸಲು ತೆಗೆಯುತ್ತೇನೆ
ಸತಿ ಹೋಗಬೇಡ
ನನ್ನ ಸಖಿಯಾಗು ಬಾ ಗೆಳತಿ
ಅಂದ ಪ್ರೀತಿ ಶಿವನೊಡನೆ
ನನ್ನ ಮರು ಮದುವೆ ಮನೆ
(ಅದೇ ಕವನ)

ಈಗ ಕೃಷಿಯ ಗುತ್ತಿಗೆಯನ್ನೂ ಪುರುಷನೇ ಹೊಂದಿದ್ದರು ಮೊಟ್ಟ ಮೊದಲು ಕೃಷಿಕಾರ್ಯ ಆರಂಭಿಸಿದವಳು ಹೆಣ್ಣೇ ಎಂಬುದನ್ನು ನೆನಪಿಸುವಂತೆ ಇವಳು ಫಸಲು ತೆಗೆಯುತ್ತೇನೆ ಎನ್ನುತ್ತಾಳೆ. ದುಡಿಮೆಯಲ್ಲಿ ತೊಡಗುವ ಹೆಣ್ಣು ಬದುಕಿನ ಉತ್ಕರ್ಷಕ್ಕೆ ಮುಖ ಮಾಡಿನಿಂತು ಪ್ರೀತಿ ಶಿವನೊಡನೆ ಮರುಮದುವೆಯಾಗುವುದು, ಮನೆ ಮಾಡುವುದು, ಬದುಕುವುದು ಒಂದು ಸವಾಲೇ ಸೈ. ಈ ಊರ್ಧ್ವಮುಖೀ ನಿರ್ಣಯ ಇಂದಿನ ಸಂಕ್ರಮಣ ಕಾಲದಲ್ಲಿ ಮಹತ್ವದ್ದಾಗುತ್ತದೆ. ಹೆಣ್ಣು ತನ್ನ ಇಡೀ ಬದುಕನ್ನು ಕುಟುಂಬಕ್ಕಾಗಿ ಸವೆಸುವುದರಲ್ಲಿ ಸಾರ್ಥಕ ಪಡೆಯುವ ಕಾಲವೊಂದಿತ್ತು. ಈಗ ಅದರಲ್ಲಿ ಸ್ವ ಸಂತೋಷ ಕಾಣದಾಗಿ, ಗೃಹದಾಸ್ಯ ಅನುಭವಿಸಿ ಅದರಿಂದ ಹೊರಬರಲು ಹಾತೊರೆಯುತ್ತಿದ್ದಾಳೆ. ಮಾತೃತ್ವ, ಪತ್ನಿತ್ವಗಳಿಂದ ಕಳೆಕೊಂಡು

ಪುರುಷನಂತೆ ತನ್ನ ಶಿಕ್ಷಣ ಉದ್ಯೋಗಗಳಲ್ಲಿ ಯಶಸ್ಸನ್ನು ಬಯಸತೊಡಗಿದ್ದಾಳೆ. "ಆರ್ಥಿಕ ಸ್ವಾತಂತ್ರ್ಯ ವೃತ್ತಿಪರತೆಗಳು ಕುಟುಂಬ ಮಾತೃತ್ವದ ಅನಿವಾರ್ಯತೆಯನ್ನು ಬದಿಗೊತ್ತುತ್ತ ಹೋಗುತ್ತವೆ. ವೈಯಕ್ತಿಕತೆ ಅಕೌಟುಂಬಿಕತೆಯೆಡೆಗೆ ಮಹಿಳೆಯೂ ಅವಳ ಸಾಹಿತ್ಯವೂ ಸಾಗಲು ಪ್ರಾರಂಭಿಸಿದೆ.

'ಪ್ರೀತಿಯೊಂದನ್ನೂ ಬಿಟ್ಟು ಇನ್ನೆಲ್ಲ ಇದೆ ಎಂದರೆ ಅದರಿಂದಷ್ಟೆ ಬದುಕಲಾಗದು. ಏನಿಲ್ಲದಿದ್ದರೂ ಪ್ರೀತಿಯೊಂದಿದ್ದರೆ ಎಲ್ಲವನ್ನೂ ಗಳಿಸುವ ಸ್ಫೂರ್ತಿ ಮರೆಸುವ ಶಕ್ತಿ ಹಾಗಾದರೆ ಹೆಣ್ಣುಗಳ ನಿರೀಕ್ಷೆಯೆಂದರೆ ಸಹ ಜೀವಿಯ ಅಥವಾ ಒಡನಾಡಿಗಳ ಪ್ರೀತಿ ಇನ್ನೂ ವ್ಯವಸ್ಥೆ ಏಕಾಏಕಿಯಾಗಿ ಮೌಲ್ಯಗಳನ್ನು ಹೆಣ್ಣಿನ ಮೇಲೆ ಹೇರಿ ಬಿಡುತ್ತದೆಯೇ? ಈ ಕಾರ್ಯ ಬಹಳ ಸೂಕ್ಷ್ಮವಾಗಿ ಜರುಗುವಂತಹದು. ನಿಯಂತ್ರಣ ಸಾಧನಗಾಳಾಗಿ ಬಳಕೆಯಾಗುತ್ತಿರುವುದಾದರೂ ಅದಕ್ಕೆ ಉತ್ತರವನ್ನೂ ಮಹಿಳಾ ಕಾವ್ಯಕ್ಕೆ ನೀಡುತ್ತದೆ.

ವೈಯಕ್ತಿಕ ನೆಲೆಗಳು
ಸೋನೆ ಮಳೆಯ ಸಂಜೆ
ಒಲೆಯ ಮೇಲೆ ಚಡಾ ಕುದಿಯುತ್ತಾ ಇತ್ತು
ದೀಪ ಹಚ್ಚಿ, ಧೂಪಹಾರೆ, ದೇವರನು ಬೆಚ್ಚಗಾಗಿಸಿ
ಸ್ವೆಟರ್ ಏರಿಸಿ ಹಾಳೂರು
ಎಂದು ಇಲ್ಲದ ಕರೆಂಟಿಗೆ ಬಾಯ್ತುಂಬ ಬಯ್ದು
ದೀಪ ಧಾರಣೆಯಾದೆ, ಗಾಳಿ ಬಾಗಿಲ ತಳ್ಳಿತು
(ಹೆಣ್ಣು ಜೀವ, ಕಾಡುಲಿಲ್ಲಿ ಹೂವುಗಳು,)

'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎನ್ನುವ ಗಾದೆಯಂತೆ, ಹೆಣ್ಣು ತನ್ನ ಮನೆಯನ್ನು ತನ್ನ ಮಕ್ಕಳನ್ನು ಸುರಕ್ಷಿತವಾಗಿ ನೋಡಿಕೊಳ್ಳಬೇಕು ಎಂಬ ಕಾಳಜಿಯ ಮನೋಭಾವನೆಯನ್ನು ಹೊಂದಿರುತ್ತಾಳೆ. ನಮ್ಮ ಹೆಣ್ಣುಮಕ್ಕಳು ಮನೆಯ ಜವಾಬ್ದಾರಿಯ ಜೊತೆಗೆ ತಮ್ಮ ಆರೋಗ್ಯವನ್ನು ಕಾಪಾಡಿಸಿಕೊಂಡು ಜೀವನ ನಡೆಸುತ್ತಾರೆ. ತನ್ನ ಕೆಲಸದಲ್ಲಿ ಎಷ್ಟೆ ದಣಿವಾದರು ತನ್ನ ಮಕ್ಕಳ ಮುಖವನ್ನು ಅವರ ನಗುವನ್ನು ನೋಡಿ ಆ ನೋವನ್ನು ಮರೆಯುತ್ತಾಳೆ. ಈ ಕವನದಲ್ಲಿ ಹೆಣ್ಣುತನ ಮಾತನಾಡುವುದಕ್ಕಿಂತ ಮೌನವಾಗಿಯೇ ಸಂಗತಿಗಳನ್ನು ತಿಳಿದುಕೊಂಡು ಅದನ್ನು ಅರ್ಥಮಾಡಿಕೊಳ್ಳುವಂತಹ ಗುಣವನ್ನು ಹೊಂದಿದ್ದಾಳೆ. ಹೆಣ್ಣು ತನಗೆ ಯಾವ ತೊಂದರೆಯಾದರು ಪರವಾಗಿಲ್ಲ ಆದರೆ ತನ್ನ ಕುಟುಂಬವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕು ಎಂಬ ಮನೋಭಾವನೆಯನ್ನು ಹೊಂದಿರುತ್ತಾಳೆ. ತನಗೆ ಏನು ಮಾಡಲು ತೋಚದ ಮನೆಯಲ್ಲಿ ಇರುವಂತಹ ದೀಪಕ್ಕೆ ಅಡ್ಡ ಕೈ ಹಿಡಿದು, ಆಗ ತನ್ನ ಕುಟುಂಬದಲ್ಲಿ ತೀರಿಕೊಂಡ ಅಜ್ಜಿ,

ದೊಡ್ಡವ್ವ ಅವರ ತನ್ನ ಎದುರು ನಿಂತಂತಾಗಿ ನಮಗೆ ಬೇಕಾದವರು ನಮ್ಮಿಂದ ದೂರವಾದರು ಅವರು ನಮ್ಮ ಜೊತೆಯಲ್ಲಿಯೇ ಇದ್ದಾರೆ ಎಂಬ ನಂಬಿಕೆಯು ನಮ್ಮಲ್ಲಿ ಇರುತ್ತದೆ. ಹೆಣ್ಣು ತನ್ನ ಕುಟುಂಬದ ಜೊತೆಗೆ ತನ್ನ ಮನೆಯಲ್ಲಿ ಇರುವಂತಹ ನಾಯಿಗೆ ಆಹಾರವನ್ನು ಹಾಕಿ, ತನ್ನ ಹಾಗೆಯೇ ಅದು ಒಂದು ಜೀವ ಎಂದುಕೊಂಡು ಹೆಣ್ಣುಜೀವ ಎಲ್ಲವನ್ನು ನಿಭಾಯಿಸುವಂತಹ ಮನೋಭಾವನೆಯನ್ನು ಹೊಂದಿದ್ದಾಳೆ.

ನನ್ನ ಸೌಂದರ್ಯವನ್ನು
ಮೆಚ್ಚಿಕೊಂಡು ಜನ
ನನ್ನ ಸರಳತೆಯನ್ನು
ಮೆಚ್ಚಿಕೊಂಡ ಜನ
ನನ್ನ ದುಃಖ ಎಷ್ಟೆಂದು ಕೇಳಲಿಲ್ಲ
(ಕೊಡು ನಿನ್ನ ದುಃಖ, ಕಾಡುಲಿಲ್ಲಿ ಹೂವುಗಳು)

ಈ ಕವನದಲ್ಲಿ ಸವಿತಾರವರು ಒಂದು ಹೆಣ್ಣನ್ನು ಬಾಹ್ಯವಾಗಿ ನೋಡುವುದಕ್ಕಿಂತ ಆಂತರಿಕವಾಗಿ ನೋಡಬೇಕು ಎಂಬ ನಿಲುವನ್ನು ಈ ಕವನದಲ್ಲಿ ವ್ಯಕ್ತಪಡಿಸಿದ್ದಾರೆ. ಹೆಣ್ಣಿನ ತಂದೆ ತಾಯಿಗಳು ಕೂಡ ಪ್ರೀತಿ, ವಾತ್ಸಲ್ಯ ಕೊಡಬಹುದೇ ಹೊರತು ಮನಸ್ಸಿನ ತುಮುಲಗಳನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. ಹೆಣ್ಣು ನೀಲಿ ನಕಾಶೆಯೊಳಗೆ ನಕ್ಷತ್ರಗಳು ಹೊಳೆಯುವುದಿಲ್ಲ ಎಂಬ ಕಲ್ಪನೆ ಗೊತ್ತಿದ್ದರು ಅಂತಹ ನಕಾಶೆಯೊಳಗೆ ಹೆಣ್ಣು ನಕ್ಷತ್ರವಾಗಿ ಹೊಳೆಯಬೇಕು ಎಂಬ ಕನಸನ್ನು ಕಾಣುವಂತಹ ಹೆಣ್ಣಿನ ನಿಷ್ಕಲ್ಮಶವಾದ ಪ್ರೀತಿಯನ್ನು ನೋಡಿ ತನ್ನ ಜೀವನದ ಹುಡುಗ ಅವಳ ಮುಗ್ಧತೆಯನ್ನು ಕಂಡು ನಗುವಂತಹ ರೀತಿ, ಜಗತ್ತಿನಲ್ಲಿ ಇರುವಂತಹ ಒಲ್ಲದ ಮನಸ್ಸುಗಳ ಬಗ್ಗೆ ಅವುಗಳು ಕಲ್ಮಶ ತುಂಬಿದ ಹೃದಯಗಳಿಗೆ ಸಮ ಎಂಬುದು ಲೇಖಕಿಯು ಹೇಳಿದ್ದಾರೆ. ಕಾಮಾಲೆಯ ಕಣ್ಣು ನೋಡುವಂತಹ ನೋಟ ಹಳದಿ ಎಂಬ ನಿಲುವುಗಳನ್ನು ಕವನವು ಹೊಂದಿದೆ. ಒಂದು ಹೆಣ್ಣಿನ ಮನಸ್ಸು ಇನ್ನೊಂದು ಹೆಣ್ಣಿಗೆ ಅರ್ಥವಾಗುವಂತಹ ರೀತಿ ಆ ಹೆಣ್ಣಿನ ಕನಸುಗಳನ್ನು ಕುತೂಹಲಕಾರಿಯಾಗಿ ನೋಡಲು ಸಾಧ್ಯವಾಯಿತು ಎಂಬ ಆಶಯವನ್ನು ಸವಿತಾ ಅವರು ಈ ಕವನದಲ್ಲಿ ಹೇಳಹೊರಟಿದ್ದಾರೆ.

ನನ್ನೆದೆಯೊಳಗೆ
ಹರಳುಗಟ್ಟುತ್ತಿತ್ತು ದುಃಖ
ಬೆಟ್ಟವಾಗುತ್ತಿತ್ತು ದುಃಖ
ನಾನು ಎಲ್ಲರಿಗೂ ಕೂಗಿ ಹೇಳುತ್ತಿದ್ದೆ

ನೋಡಿ ಈ ಬೆಟ್ಟ ಕಣ್ಣೀರಿನದು
ನನ್ನದು ಹಾಗೂ ನಿನ್ನದು
(ಅದೇ ಕವನ)

ನನ್ನ ಆಸೆಗಳು ಆಕಾಂಕ್ಷೆಗಳು ಕಷ್ಟಗಳು ನನಗೆ ದೊಡ್ಡದು ಎಂಬುದು ತಿಳಿಯುವಂತಹ ಪರಿಸ್ಥಿತಿಯಲ್ಲಿ ಬೇರೆಯವರ ಕಷ್ಟಗಳು ತನಗಿಂತ ಅವುಗಳು ದೊಡ್ಡದು. ಆ ನೋವುಗಳು ಬೆಟ್ಟವಾಗುತ್ತಿದ್ದವು, ಆಗ ಆ ನೋವುಗಳು ನನ್ನದು ಎಂದು ಕೂಗಿ ಹೇಳುತ್ತಿದೆ. ಸಾಮಾಜಿಕ ಮಹಿಳೆಯು ತನ್ನ ನೋವುಗಳು ಕರಗಿ ಪ್ರವಾಹವಾದಾಗ ಆಗ ಅದು ನಮ್ಮದು ಎಂದು ಕೂಗಿ ಹೇಳುತ್ತಿದೆ. ಮನುಷ್ಯ ಜಾತಿಯಲ್ಲಿ ಸಂತೋಷಕ್ಕೆ ಭಾಗಿಯಾಗುತ್ತಾರೆ ಹೊರತು ದುಃಖಗಳಿಗೆ ಏನು ನಿನ್ನ ದುಃಖ ಎಂದು ಕೇಳುತ್ತಿರಲಿಲ್ಲ. ಆಗ ಪ್ರಕೃತಿಯನ್ನು ಹೆಣ್ಣಿಗೆ ಹೋಲಿಸಿ ಹೇಳುತ್ತೇವೆ. ಹೆಣ್ಣು ಪ್ರಕೃತಿಯ ಜೊತೆಗೆ ತನ್ನ ದುಃಖವನ್ನು ಹೇಳಿಕೊಂಡಾಗ ಪ್ರಕೃತಿಯು ನನಗೆ ಕೊಡು ನಿನ್ನ ದುಃಖವನ್ನು ನಾನು ನಿನ್ನ ಬೆಂಗಾವಲಾಗಿ ಇದ್ದೇನೆ ಎಂದು ಹೇಳುವಂತಹ ರೀತಿಯನ್ನು ಸವಿತಾರವರು ಈ ಕವನದಲ್ಲಿ ಪ್ರಕೃತಿ ಮತ್ತು ಹೆಣ್ಣಿನ ಸಂಬಂಧವನ್ನು ಕುರಿತು ಹೇಳಿದ್ದಾರೆ.

ಯಾಕೆ ಬಂದೆ
ಯಾಕೆ ನಿಂದೆ
ಕಿಟಕಿಯಲ್ಲಿ ಚಂದಿರ
ಸನ್ನೆ ಮಾಡಿ ಕರೆಯಬೇಡ
ಹೋಗಿ ಬಿಡು ಚಂದಿರ
(ಕಿಟಕಿಯಲ್ಲಿ ಚಂದ್ರ, ಕಾಡುಲಿಲ್ಲಿ ಹೂವುಗಳು)

ಈ ಕವನದಲ್ಲಿ ಹೆಣ್ಣು ಇಕ್ಕಟ್ಟಾದ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತ್ತಾಳೆ ಎಂಬುದನ್ನು ಸವಿತಾ ಅವರು 'ಕಿಟಕಿಯಲ್ಲಿ ಚಂದ್ರ' ಎಂಬ ಕವನದಲ್ಲಿ ವ್ಯಕ್ತಪಡಿಸಿದ್ದಾರೆ. ಇಲ್ಲಿ ತಮ್ಮ ಅಂತರಂಗವನ್ನು ಬಿಚ್ಚಿಡುತ್ತಾ ಹೋಗಿದ್ದಾರೆ. ಕವಿಯ ಆಶೋತ್ತರಗಳ ಪ್ರತೀಕವಾದ ಚಂದ್ರ ಬಾಲ್ಯದಿಂದಲೂ ಕವಿಯೊಂದಿಗೆ ಜೊತೆಗಿರುವನು. ಬದುಕಿನ ಬಂಧನಗಳಿಂದ ಬಿಡುಗಡೆ ಪಡೆಯಲು ಕರೆ ನೀಡಲು ಚಂದ್ರ ಆಪ್ತ ಗೆಳೆಯನಾಗಿದ್ದಾನೆ. ಹೆಣ್ಣು ಚಂದಿರನನ್ನು ಕೂಡಿದ ಅವನಲ್ಲಿ ಬೆರೆತ ಮನಃಸ್ಥಿತಿಯ ಚಿತ್ರಣವಿದೆ. ಒಂದು ಹೆಣ್ಣು ಎಂದರೆ ಆಕೆ ಒಟ್ಟು ವ್ಯವಸ್ಥೆಯೇ ಪುರುಷ ಪ್ರಧಾನವಾಗಿರುವುದರಿಂದ ಆಕೆ ಹೀಗೆ ಇರಬೇಕು ಎಂಬ ಕಟ್ಟುಪಾಡುಗಳಿಗೆ ಬದ್ಧವಾಗಿರಬೇಕು ಎಂಬುದು ನಮ್ಮ ಸಮಾಜದ ನಿಯಮವಿದೆ. ಹೆಣ್ಣು ತನ್ನ ಭಾವನೆಗಳನ್ನು ತೋಡಿಕೊಳ್ಳುವುದಕ್ಕೆ ಇಂತಹ ಕನಸುಗಳನ್ನು ಆಯ್ದುಕೊಳ್ಳುತ್ತಾಳೆ.

ಪಕ್ಕದಲ್ಲಿ ಗಂಡನಿರುವ
ತೊಟ್ಟಿಲಲ್ಲಿ ಕಂದನಿರುವ
ಅಕ್ಕಪಕ್ಕ ನೋಡಿಯಾರು
ನೂರು ಕತೆಯ ಕಟ್ಟಿಯಾರು
ಹೋಗಿ ಬಿಡು ಚಂದಿರ
(ಅದೇ ಕವನ)

ಹೆಣ್ಣು ತನ್ನಲ್ಲಿ ಅಡಗಿಸಿಟ್ಟ ಭಾವನೆಗಳನ್ನು ನಿರ್ಜೀವ ಗೊಂಬೆಗಳಿಗೂ ಮನುಷ್ಯೋತ್ತರವಾದ ಪ್ರಾಣಿಪಕ್ಷಿ, ಗಿಡಮರಗಳಿಗೂ ಹೇಳಿಕೊಳ್ಳುವ ಮೂಲಕ ಬಿಡುಗಡೆ ಪಡೆಯುತ್ತಾಳೆ. ಹೆಣ್ಣು ನಿಸರ್ಗದ ಪ್ರಾಣಿ ಪಕ್ಷಿಗಳಿಗೆ ಗಿಡಮರಗಳೊಂದಿಗೆ ಹೇಳಿಕೊಂಡು ತನ್ನ ನೋವನ್ನು ಮರೆಯುತ್ತಾಳೆ ಅಥವಾ ಕನಸಿನಲ್ಲಿ ಕಂಡಂತೆ ನಿರೂಪಿಸುತ್ತಾಳೆ. ಸವಿತಾ ಅವರು ಸಾಮಾಜಿಕ ನಿರ್ಬಂಧ ಹೆಣ್ಣಿನ ಅಭಿವ್ಯಕ್ತಿಯನ್ನು ನಿಯಂತ್ರಿಸಿದೆ ಎಂಬುದಕ್ಕೆ ಈ ಕವನ ಮಾದರಿಯಾಗಿದೆ. ಕವನವು ಮುಂದುವರೆದು ಪ್ರೀತಿಯ ಬಗ್ಗೆ ತಮಗಿದ್ದ ನಿರೀಕ್ಷೆಗಳು ಬಣ್ಣ ಪಡೆಯುತ್ತಾ ಹೋಗುತ್ತವೆ. ಜೊತೆಗೆ ಸಾಂಪ್ರದಾಯಿಕ ಬಿಕ್ಕಟ್ಟುಗಳು ಎಷ್ಟರ ಮಟ್ಟಿಗೆ ಹೆಣ್ಣನ್ನು ಆವರಿಸಿವೆ ಎಂಬುದನ್ನು ಸೂಚಿಸುತ್ತದೆ. ಸವಿತಾ ಅವರ ಭಾಷೆಯ ಬಳಕೆ ವೈವಿಧ್ಯದಿಂದ ಕೂಡಿರುವುದನ್ನು ಕಾಣಬಹುದು. ಹೆಣ್ಣು ಚಂದಿರನೊಂದಿಗೆ ಮಾತನಾಡುವಂತಹ ಕಲ್ಪನೆಯ ನೋಡಲು ರೋಮಾಂಚನಕಾರಿಯಾಗಿದೆ.

ಪುಟ್ಟ ಮನೆಯೊಂದ ಕಟ್ಟಿ
ಮನೆಯ ಮುಂದೊಂದು ಮರವ ನೆಟ್ಟು
ರೆಂಬೆ ಕೊಂಬೆಗೆ ಎಲೆಯನಿಟ್ಟು
ಎಲೆಯ ನಡುವೆ ಹೂವನರಳಿಸಿ
ಹೂವಿನ ಜೊತೆಗೆ ಹಣ್ಣನಿರಿಸಿ
ಹಿಗ್ಗಿ ನಲಿಯಿತು
(ಮಗು ಚಿತ್ರ ಬರೆಯಿತು, ಕಾಡುಲಿಲ್ಲಿ ಹೂವುಗಳು)

ಹೆಣ್ಣಿನ ಬದುಕಿನಲ್ಲಿ ನೆಲೆಯನ್ನು ಕಂಡುಕೊಳ್ಳುವಂತಹ ಸಂದರ್ಭದಲ್ಲಿ ಬರೆಯುವಂತಹ ಸ್ಥಿತಿಯಲ್ಲಿ ತೋಡಿಕೊಳ್ಳುವ ಕವಿತೆ 'ಮಗು ಚಿತ್ರ ಬರೆಯಿತು' ಜೀವಂತ ಚೈತನ್ಯ ಪಡೆಯುತ್ತಾ ಹೋಗುವ ಚಿತ್ರದಲ್ಲಿ ಮಗು ಚಿತ್ರ ಬರೆಯುತ್ತದೆ.

ಬದುಕಿನಲ್ಲಿ ತುಂಬಲಾಗದ ನಷ್ಟವನ್ನು ತುಂಬುವ ಉದ್ದೇಶದಿಂದ ಹಠದಿಂದ ಮಗು ಚಿತ್ರ ಬರೆಯುತ್ತದೆ. ಮಗು ಪುಟ್ಟ ಮನೆಯನ್ನು ಕಟ್ಟಿ ತನ್ನ ಮನೆಯ ಮುಂದೆ ಅಂದವಾಗಿಸುವುದಕ್ಕೆ

ಮರವನ್ನು ನೆಟ್ಟ ಅದಕ್ಕೆ ರೆಂಬೆ ಕೊಂಬೆಗಳಿಗೆ ಎಲೆಯನಿಟ್ಟು ಮರದ ಜೊತೆಗೆ ಹಣ್ಣು ಇರಿಸಿ ನಲಿಯುವಂತಹ ದೃಶ್ಯ ಮನಸ್ಸಿಗೆ ಆನಂದವನ್ನು ನೀಡುತ್ತದೆ. ಈ ಕವನದಲ್ಲಿ ಮಗು ತನ್ನ ಕಲ್ಪನೆಯಲ್ಲಿ ಪ್ರಕೃತಿಯನ್ನು ಬರೆಯಲಾರಂಭಿಸಿದೆ. ಅದು ತನ್ನ ಮನೆಯ ಸುತ್ತ ಗುಡ್ಡದ ಮೇಲೆ ಸೂರ್ಯನು ಉದಯಿಸುವಂತಹ ದೃಶ್ಯ, ಪಕ್ಷಿಗಳ ಚಿಲಿಪಿಲಿಯ ಕಲರವ ಅದರ ಜೊತೆಗೆ ನದಿಯಲೊಂದು ದೋಣಿಯ ತೇಲಿಸಿ ನೋಡಿದಂತಹ ರೀತಿ, ಕಳೆದುಹೋದ ದಾರಿಯಲ್ಲಿ ನಡೆದುಹೋದ ಮಗು ಮತ್ತು ತಾಯಿಯ ವಿಷಾದ ಚಿತ್ರವನ್ನು ಮೂಡಿಸಿದೆ. ಮಗುವಿನ ದಾರಿಯಲ್ಲಿ ಹೋದ ತಾಯಿಯೂ ಮಗುವಿನ ದಾರಿಯನ್ನು ಹಿಡಿಯುವುದರೊಂದಿಗೆ ಕವಿತೆ ಮುಗಿಯುತ್ತದೆ.

> ಗಂಡ ಕುಡಿಯುವನು
> ನಿತ್ಯ ಹೊಡೆಯುವನು
> ಮೈತುಂಬಾ ಮಕ್ಕಳು
> ಹಸಿವು–ನೋವು
> ಮಿಗಿಲಾಗಿ ಸವತಿಯ ಕಾಟ
> ಹರಕೆ ಹೊತ್ತಿಹಳು
> (ಕೊಂಡ ಹಾಯುವಳು, ಕಾಡುಲಿಲ್ಲಿ ಹೂವುಗಳು)

'ಕೊಂಡು ಹಾಯುವಳು' ಕವನದಲ್ಲಿ ಕೊಂಡವನ್ನು ಹಾದುಬರುವ ಲಕುಮಿ ತನ್ನ ನೋವಿನ ನಂಜನಷ್ಟೆ ಉಣ್ಣದೆ ತನ್ನ ಗಂಡನ ಹತಾಶೆ, ಸೋಲು, ನೋವುಗಳನ್ನು ಉಂಡು ಎಲ್ಲವನ್ನೂ ಮೀರುವ ಪರಿ ವಿಶಿಷ್ಟವಾಗಿದೆ. ಇದನ್ನು ಮೀರಿ ಚೈತನ್ಯಶೀಲತೆಯನ್ನು ಮೆರೆದಿದ್ದಾರೆ. ಇಲ್ಲಿ ಕೊಂಡ ಹಾಯುವುದು ಹೆಣ್ಣಿನ ಬದುಕನ್ನು ಕುರಿತ ಪ್ರತಿಮೆಯಂತೆಯೇ ಅವಳ ಶಕ್ತಿ ಕೇಂದ್ರದ ರೂಪಕವೂ ಹೌದು. ಬದುಕಿನ ಕೊನೆಯಿಲ್ಲದ ಬಿಕ್ಕಟ್ಟುಗಳನ್ನು ನಿರಂತರವಾಗಿ ಹಾಯುತ್ತಲೆ ಇದ್ದಾಳೆ. ಕೊಂಡ ಹಾಯುವುದು ಅವಳಿಗೆ ಅನಿವಾರ್ಯ ಕರ್ಮ ಎನ್ನುವುದು ಎಷ್ಟು ನಿಜವೋ, ಅದು ಅವಳ ಬದುಕಿನ ಬದ್ಧತೆ ಎನ್ನುವುದು ಅಷ್ಟೇ ನಿಜ. ಬದುಕಿನ ಹೋರಾಟದಲ್ಲಿ ಸೋತ ಲಕುಮಿಯ ಬದುಕಿನ ಸಮಸ್ಯೆಯೇ ಆಗಿರುವ ಗಂಡ ಮಂಕಾಗಿದ್ದಾನೆ. ಆದರೆ ಲಕುಮಿ ಮಾತ್ರ ನಿಗಿ ನಿಗಿ ಹೊಳೆಯುವ ಕೆಂಡದಂತಹ ಬದುಕಿನ ಕೊಂಡವನ್ನು ಹಾಯುವುದರಲ್ಲಿನ ತನ್ನ ಶ್ರದ್ಧೆಯನ್ನು ಕಳೆದುಕೊಂಡಿಲ್ಲ. ಈ ಇಡೀ ಸನ್ನಿವೇಶವನ್ನು 'ಸಹನಶೀಲತೆ' ಎಂದು ಈ ಸಹನಶೀಲತೆಯೇ ಮೂಲವಾಗಿ ಬದುಕಿನ ಕಷ್ಟ ಪರಂಪರೆಗಳಿಗೆ ಒಳಗಾಗುವ ಅಸಹಾಯಕತೆಯಾಗಿ ಕಾಣುವ ದೃಷ್ಟಿಯೊಂದು ಇನ್ನೊಂದು ಗಂಡು ಸೋತಾಗಲೂ,

ಅಸಹಾಯಕನಾದಾಗಲೂ, ಬದುಕಿನ ಬೆನ್ನುತೋರಿಸಿದ ಚಿತ್ತ ಸ್ಥೈರ್ಯದ ಹೆಣ್ಣಿನ ದೃಷ್ಟಿ ವಿಪರ್ಯಾಸ ಎಂಬುದು ಸವಿತಾರವರು ಈ ಕವನದಲ್ಲಿ ಹೇಳಿದ್ದಾರೆ.

ಹರನೇ ತನಗೆ ಗಂಡನಾಗಬೇಕೆಂದು
ಅನುದಿನವೂ ಹಂಬಲಿಸಿ
ಸಾವಿಲ್ಲದ ರೂಡಿಲ್ಲದ ಕೇಡಿಲ್ಲದ
ಚೆಲುವನ್ನು ಬೆಂಬತ್ತಿ ನಿಮ್ಮೀ
ಕದಳಿ ಬನವ ಪೊಕ್ಕ ನನ್ನಕ್ಕ
ಹೊಳೆವ ಕೆಂಜೆಡೆಗಳ ಸುಲಿಪಲ್ಲಿ
ಗೊರವವನು ಇದರಿಸಿದ ಬಗೆಯ ಬಣ್ಣಿನಿರೆ
(ಪ್ರಾರ್ಥನೆ ಕಾಡುಲಿಲ್ಲಿ ಹೂವುಗಳು)

ಅಕ್ಕಮಹಾದೇವಿಯನ್ನು ಮಹಿಳಾ ಕಾವ್ಯಲೋಕ ಕಂಡುಕೊಂಡ ಬಗೆಗಿಂತ ಭಿನ್ನವಾಗಿ ನಿಲ್ಲುವುದು ಇಲ್ಲಿ ಸವಿತಾ ಪ್ರಶ್ನೆ ಅಕ್ಕನಿಗಲ್ಲ, ಬದಲಿಗೆ ಅವಳನ್ನು ಪೊರೆದ ಅವಳ ಬದುಕಿನ ಏರುಪೇರುಗಳಿಗೆ. ಅನುಭವ ಮಾತಾಗಿರುವ ಸಂಕಟವು ಸೂಕ್ಷ್ಮಾನುಸೂಕ್ಷ್ಮಗಳನ್ನು ಹಿಡಿಯುವ ಶಕ್ತಿಯಿದೆ. ಗಂಡು ಹಾಕಿದ ಗೆರೆಗಳನ್ನೆಲ್ಲ ದಾಟದೆ ಬಾಳುವವಳು ಆದರ್ಶನಾರಿ. ಅಕ್ಕ ಹಂಬಲಿಸಿದ್ದು ಪರಕ್ಕಾಗಿ ಅಲ್ಲ. ಪರ ಎನ್ನುವುದು ಇವರಿಗೆ ಕಷ್ಟಕೋಟಲೆಗಳನ್ನು ನಿರೂಪಿಸುವ ದಾರಿ. ನೀ ಹರಿಯೋ ಹರನೋ, ಪರಿಯರಿಯದ ಹೋದೇನೋ ಪರಿಪರಿಯಲಿ ಪೀಡಿಸುವ ಸ್ವಪ್ನದರ್ಶಿ. ರೂಹಿಲ್ಲದ, ರುಜುವಿಲ್ಲದ ಭಾವಸ್ಪರ್ಶಿ ಬೀಜವಾಗು. ಅಕ್ಕನು ತನ್ನ ಜೀವನ ಸಂಗಾತಿಯನ್ನು ಹೀಗೆ ಇರಬೇಕು ಎಂಬ ಕಲ್ಪನೆಯನ್ನು ಹೊಂದಿ ಶಿವನನ್ನು ನೋಡಿ ನೀರುರೆಸಿ ನಿಬ್ಬೆರಗಾದಳೆ ಅವನ ವೇಷ ಭೂಷಣ ಸೊಬಗನ್ನು ಕಂಡು ಬಣ್ಣಿಸಲು ಯಾರಿಂದ ಸಾಧ್ಯವಿಲ್ಲ. ಅಕ್ಕನು ಶಿವನನ್ನು ಹುಡುಕಿಕೊಂಡು ಅವಳಿಗೆ ದಾರಿಯಲ್ಲಿ ಅನೇಕ ಕಷ್ಟಗಳು ತೊಂದರೆಗಳನ್ನು ಎದುರಿಸಿಕೊಂಡು ಭವಗೆದ್ದು ಬಂದ ಮಗಳೆ ಬಾರೆಂದು ಅವಳನ್ನು ಕೈಹಿಡಿದು ಬಿಗಿದಪ್ಪಿದ ಅವನ ನೋಟದ ಮಾಟವನ್ನು ಬಣ್ಣಿಸಿರೆಯಲು ಸಾಧ್ಯವಿಲ್ಲ.

ಕಳವಳಿಸಿ, ಕಲ್ಪಿಸಿ, ಕಂದಿ, ಕುಮರಿದವಳ
ಕಾಡಿಸಿ ಕೊನೆಗೊಮ್ಮೆ
ಕಾಮನಬಿಲ್ಲಿನಂತೆ ಮುಖದೋರಿದ
ಚನ್ನನನ್ನು ಕಂಡು ಎರಿದಳೆ? ಜರಿದಳೆ
ಹಿರಿಹಿರಿ ಹಿಗ್ಗಿದಳೆ ?

ಆ ಹಿಗ್ಗಿನ ಬುಗ್ಗೆಯಿಂದ ಬಂದಿಪ್ಪು
ಸಿಹಿನೀರ ಮೊಗೆದು ಎನಗುಣಿಸಿದೆ
(ಅದೇ ಕವನ)

ತನ್ನ ಶಿವನನ್ನು ಹುಡುಕಿಕೊಂಡು ಕಳವಳಿಸಿ ಆತನನ್ನು ಕಾಡಿಸಿ ಬೇಡಿಸಿ ಕೊನೆಗೊಮ್ಮೆ ಅವನನ್ನು ಏಳುಬಣ್ಣಗಳಂತೆ, ಕಾಮನಬಿಲ್ಲಿನಂತೆ ಮುಖದೋರಿದ ಚನ್ನನನ್ನು ಕಂಡು ಹಿರಿಹಿರಿಯಾಗಿ ಹಿಗ್ಗಿದಳೆ ಅಕ್ಕಮಹಾದೇವಿಯು ಕೆಳದಿ ಸಾಮ್ರಾಜ್ಯವನ್ನು ಬಿಟ್ಟು ಕುಸುಮದ ಸುಕೋಮಲ ಜೀವನವನ್ನು ತೊರೆದು ಅಕ್ಕನನ್ನು ಶಿವನು ರುಂಡ ಮಾಲೆಯ ಕೊರಳಲ್ಲಿ ಹೃದಯ ಕಮಲದೊಳಗಿದವಳ ಅವರ ಸಡಗರಕ್ಕೆ ಸಾಕ್ಷಿಯಂತಿರುವ ದಿವ್ಯ ಚಕ್ಷುಗಳೇ ಇವರ ಇಬ್ಬರ ಪ್ರೀತಿಯನ್ನು ಬಣ್ಣಿಸಲು ಯಾರಿಗೂ ಸಾಧ್ಯವಿಲ್ಲ. ಒಂದು ವೇಳೆ ಶಿವನಿಗಿಂತ ಹೆಚ್ಚು ಆಕರ್ಷಕವಾಗಿರುವಂತಹ ವ್ಯಕ್ತಿಯು ಸಿಕ್ಕರೆ ಅವಳು ಆತನನ್ನು ಶ್ರೀಗಿರಿಯ ಗಾರುಡಿಗ ಆ ಮಲ್ಲಿನಾಥ ಮೇಲಾಣಿಯ ಒಪ್ಪುವುದಿಲ್ಲ.

ಅಧ್ಯಾಯ – ನಾಲ್ಕು

ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಪ್ರಕೃತಿ ಮತ್ತು ಮನುಷ್ಯ ಸಂಬಂಧದ ನೆಲೆಗಳು

ಅಧ್ಯಾಯ – ೪

ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಪ್ರಕೃತಿ ಮತ್ತು ಮನುಷ್ಯ ಸಂಬಂಧದ ನೆಲೆಗಳು

ಮೂಲತಃ ತೀರ್ಥಹಳ್ಳಿಯವರಾದ ಸವಿತಾ ನಾಗಭೂಷಣ ಅವರಿಗೆ ಆಸಕ್ತಿಯಿರುವುದು ಮನಸೆಳೆಯುವ ಮಲೆನಾಡಿನ ಪ್ರಕೃತಿ ಸಿರಿಯಲ್ಲಿ ತನ್ಮಯರಾಗುವುದು. ಪ್ರಕೃತಿಯ ಮಡಿಲಲ್ಲಿ ಬೆಳೆದ ಸವಿತಾ ಪ್ರಕೃತಿ ಜನ್ಯ ವಸ್ತುಗಳನ್ನು ಕಾವ್ಯದ ಜೀವನಾಡಿಯಾಗಿಸಿಕೊಂಡಿದ್ದಾರೆ. ಭೂಮಿ, ಬಾನು, ಗಾಳಿ, ನೀರು, ಮೋಡ, ತಾರೆ, ಸೂರ್ಯ, ಚಂದ್ರ, ಮುಂತಾದ ವಸ್ತುಗಳ ಸಂವೇದನೆಯ ಮೂಲಕ ವ್ಯಕ್ತಿ ವ್ಯಕ್ತಿತ್ವದ ಸಂಬಂಧಗಳನ್ನು ಗುರುತಿಸುವುದು ಅವರ ಕಾವ್ಯದ ವಿಶಿಷ್ಟತೆಯಾಗಿದೆ. ನಿರ್ದಿಷ್ಟ ಪಂಥ, ಸಿದ್ಧಾಂತಗಳಿಗೆ ಸಿಲುಕದೆ ತಮ್ಮ ನವಿರಾದ ಮೃದು ಭಾವದಿಂದ ಅವರು ಕಾವ್ಯವನ್ನು ನಿರ್ಮಿಸುತ್ತಾ ಬಂದಿದ್ದಾರೆ. ಅವರ ಕಾವ್ಯದಲ್ಲಿ ಪ್ರಕೃತಿಯ ಒಡನಾಟದ ನೆನಪುಗಳಿವೆ. ಅವರ ತಂದೆ ಸರ್ಕಾರಿ ನೌಕರಿಯಲ್ಲಿರುವುದರಿಂದ ಎರಡು ಮೂರು ವರ್ಷಗಳಿಗೊಮ್ಮೆ ಬಿಡಾರ ಎತ್ತಿಕೊಂಡು ಊರೂರು ಸುತ್ತಬೇಕಾಗುತ್ತಿತ್ತು. ಒಮ್ಮೆ ಸವಿತಾ ಅವರು ಮಡಿಕೇರಿಯಲ್ಲಿದ್ದರು ಗುಡ್ಡದ ಮೇಲಿದ್ದ ಅವರ ಮನೆಯ ಮುಂದೆ ಒಂದು ಮಣ್ಣಿನ ದಿಬ್ಬವಿತ್ತು. ಅದರಾಚೆ ದೊಡ್ಡ ಹಸಿರು ಗುಡ್ಡ, ಇಳಿಜಾರಿನ ಕಣಿವೆ ಹಾಗೂ ಸಾಲು ಸಾಲು ಮರಗಳು ಇದ್ದವು. ಆ ಸಾಲು ಮರಗಳ ನಡುವಿನಿಂದಲೇ ಮೋಡಗಳ ಹಿಂಡು ಸಾಗುವುದನ್ನು ನೋಡಬಹುದಿತ್ತು. ಒಮ್ಮೊಮ್ಮೆ ಇಡೀ ಮರಗಳನ್ನು ಮಂಜಿನ ಮಾಯೆ ಕವಿದು ಅಚ್ಚರಿ ಹುಟ್ಟಿಸುತ್ತಿತ್ತು. ಅವರ ಪ್ರಕಾರ ದೆವ್ವದಂಥ ಮಳೆ ಇಲ್ಲದೇ ಹೋದಲ್ಲಿ ಮಡಿಕೇರಿ ಸ್ವರ್ಗವೇ ಸರಿ. ಸವಿತಾ ಅವರ ಮನೆಯ ಮುಂದಣ ಆ ಮಣ್ಣಿನ ದಿಬ್ಬ ಸುತ್ತಲೂ ಹಸಿರಿನಿಂದ ಆವೃತ್ತವಾಗಿದ್ದರೂ ಅದರ ಹೃದಯಭಾಗ ಮಾತ್ರ ಗಾರೆಕಲ್ಲಿನ ಹಾಗೆ ನುಣುಪಾಗಿ, ಮಟ್ಟಸವಾಗಿ ಬಿಸಿಲಿಗೆ ಬಂಗಾರದ ಗಟ್ಟಿಯ ಹಾಗೆ ಥಳ ಥಳಿಸುತ್ತಿತ್ತು. ದಾರಿಹೋಕರು ತುಳಿದೂ ತುಳಿದು ಗಟ್ಟಿಯಾಗಿ ಅಲ್ಲಿ ಒಂದು ಹುಲ್ಲುಗರಿಕೆಯೂ

ಹುಟ್ಟದಂತಾಗಿತ್ತು. ಅದು ಸ್ವಲ್ಪ ಉಬ್ಬಿದಂತಿದ್ದು ಜಗುಲಿಯ ಹಾಗೆ ಇದ್ದುದರಿಂದ ಆಟವಾಡುವ ಮಕ್ಕಳು, ಸುಃಖ ದುಃಖ ಹಂಚಿಕೊಳ್ಳುವ ಹೆಂಗಸರೂ, ಕೆಲಸವಿಲ್ಲದ ಪಡ್ಡೆ ಹುಡುಗರು, ಮಂಕುಹಿಡಿದ ಕುಡುಕರು ಅದರ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದರು. ಅವುಗಳನ್ನೆಲ್ಲ ಕಿಟಕಿಯಲ್ಲಿ ನೋಡುವುದು ಸವಿತಾ ಅವರಿಗೆ ಅಭ್ಯಾಸವಾಗಿ ಹೋಗಿತ್ತು.

ಒಮ್ಮೆ ಹೀಗೆ ಮಟ ಮಟ ಮಧ್ಯಾಹ್ನದಲ್ಲಿ ಸವಿತಾ ಅವರು ಕಿಟಕಿಯ ಹತ್ತಿರ ನೋಡುತ್ತಿದ್ದಾಗ, ಹಾವು ಅವರನ್ನು ನಿಂತಿದ್ದಷ್ಟೂ ಹೊತ್ತು ನೋಡುತ್ತಾ ಕೊನೆಗೆ ದೃಷ್ಟಿ ಯುದ್ಧದಲ್ಲಿ ಸೋಲಿಸಿ ಅಲ್ಲಿಂದ ನಿರ್ಗಮಿಸುವಂತೆ ಮಾಡಿತ್ತು. ಆ ಗುಡ್ಡ, ಮರ, ದಿಬ್ಬ, ಮಂಜು, ಮೋಡ ಹಸಿರು ಕವಿಯಲ್ಲಿ ಏನೇನೋ ವಿಚಾರಗಳನ್ನು ಹೊಳೆಸುತ್ತಿದ್ದುದುಂಟು. ಆ ಮಣ್ಣಿನ ದಿಬ್ಬದ ಮೇಲೆ ಹಸಿರು ಹುಲ್ಲಿನ ಹೊದಿಕೆಯನ್ನು ಪ್ರಕೃತಿ ದೇವಿ ಹೊದಿಸುವಂತಾದರೆ ಎಷ್ಟು ಚೆನ್ನ ಎಂದು ಅವರ ಹೃದಯ ಆಸೆಪಡುತ್ತಿತ್ತು. ಆ ದಿಬ್ಬದಲ್ಲಿ ಹುಲ್ಲು ಬೆಳೆಯಗೊಡದಂತೆ ನಿಷ್ಕರುಣೆಯಿಂದ ಹಾದು ಹೋಗುವ ದಾರಿಹೋಕರು ನಿರಂತರ ಕವಿ ಶಾಪಕ್ಕೆ ಗುರಿಯಾಗಿದ್ದರು.

ಬೇಸಗೆಯ ಕೊನೆಯ ದಿನಗಳಲ್ಲಿ ಧೋ ಎಂದು ಮಳೆ ಸುರಿದು ಇಡೀ ಮಡಿಕೇರಿ ಒದ್ದೆಯಾಯಿತು ದಿನಗಳೆರಡು ಕಳೆದಿರಬೇಕು. ಎಂದಿನಂತೆ ಕವಿತೆಯ ನಾನಾಗಿ ಅವರು ಕಿಟಕಿಯಲ್ಲಿ ನಿಂತಿರಲು ದಿಬ್ಬದ ಮೇಲೆ ಕಣ್ಣುನೆಟ್ಟಿದ್ದೇ ಕಾಮನಬಿಲ್ಲಿನಂತೆ ಬಣ್ಣ ಬಣ್ಣ ಹೂಗಳು ಕಿಕ್ಕಿರಿದಿದ್ದವು. ಗಾಳಿಗೆ ತಾನೇ ಬಳುಕುತ್ತಿದ್ದವು. ಹುಲ್ಲು ಹಚ್ಚ ಹಸಿರಾಗಿತ್ತು. ಮಣ್ಣಿನ ದಿಬ್ಬ ಹೂದಾನಿಯಾಗಿತ್ತು. ಇದೀಗ ದಾರಿಹೋಕರು ಒಮ್ಮೆ ನಿಂತು ನೋಡಿ ದಿಬ್ಬವನ್ನು ಬಳಸಿಕೊಂಡು ಸಾಗುತ್ತಿದ್ದರು. ಇದ್ದಕ್ಕಿದ್ದ ಹಾಗೆ ಎದೆಯಾಳದಿಂದ ಉಕ್ಕಿಬಂದ ಭಾವನೆಗಳು ಕವಿತೆಗಳಾಗಿ ಹೊಮ್ಮಿದಂತೆ ಇದ್ದವು. ಆ ಹೂಗಳು ಪ್ರತಿ ವರುಷ ಮಿಂಚು ಗುಡುಗಿನ ಮೊದಲ ಮಳೆಗೆ ಅರಳಿ ಎರಡು ದಿನ ಇದ್ದು ಮರೆಯಾಗುತ್ತವೆ.

ಸವಿತಾ ಅವರ ಅರಬೆಂದ ವಿಚಾರಗಳಿಗೆ ಹೂವಿನೇಟು ನೀಡಿದ್ದಳು. ಪ್ರಕೃತಿ ಆ ದಿಬ್ಬದ ಅಸ್ತಿತ್ವ, ಅರ್ಥ ನಿಧಾನವಾಗಿಯಾದರೂ ಸವಿತಾರವರಿಗೆ ಮನವರಿಕೆಯಾಗಿತ್ತು. ಅವರು ಹೀಗೆ ಹೇಳುತ್ತಾರೆ–ಮತ್ತೆಂದೂ ನಾನು ಆ ಮಣ್ಣಿನ ದಿಬ್ಬಕ್ಕೆ ಹುಲ್ಲು ಹೊದಿಸುವ ದಾರಿಹೋಕರನ್ನು ಶಪಿಸುವ ಯೋಚನೆ ಮಾಡಲಿಲ್ಲ. ಒಂದೆರಡು ದಿನಗಳ ಮಟ್ಟಿಗಾದರೂ ಸಮಯದ ಸಡಗರ ಹೆಚ್ಚಿಸಿದ ಆ ಹೂವಿನ ದಿಬ್ಬದ ನೆನಪು ಮತ್ತೊಂದು ಬೇಸಿಗೆಯ ತನಕ ಹಬ್ಬುತ್ತಾ ಹೋಯಿತು. ಉಳ್ಳವರಿಗೆ ಒಬ್ಬರೋ, ಇಬ್ಬರೋ ಮಕ್ಕಳು ಇಲ್ಲದವರಿಗೆ ನೂರಾರು. ತಿಳಿಗೊಳದಲ್ಲಿ ಒಂದೋ ಎರಡೋ ಹಂಸ ನಲಿದಾಡುವುದು, ಕಲಕದಿದ್ದರೆ ನೀರು ಚಂದ್ರಬಿಂಬ ಕಾಣಬಹುದು. ಅದೇ ಕೆಸರುಗೊಳದಲ್ಲಿ ನೂರಾರು ಕಮಲಗಳು. ಮಹಿಳಾ ಕಾವ್ಯದಲ್ಲಿ ಈ ಸ್ಮರಣೆಯ ವಿಸ್ತಾರ ಕೇವಲ

ಜೈವಿಕ ಸಂಬಂಧಗಳಿಗೆ ಮಾತ್ರ ಸಂಬಂಧಿಸಿರದೆ ಅಜೈವಿಕವೆಂದು ನಾವು ಗುರುತಿಸುವ ಚರಾಚರ ಜಗತ್ತಿನ ಕಡೆಗೆ ಹರಡಿಕೊಂಡಿದೆ. ಹಾಗಾಗಿಯೇ ತಾವಿರುವ ಮನೆ, ಊರು, ಹತ್ತಿರದ ಬೆಟ್ಟ, ಬಳಸಿದ ವಸ್ತುಗಳು ಎಲ್ಲದರೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವ ಹಾಗೂ ಅದನ್ನು ಚಿತ್ರಿಸುವ ಅನೇಕ ಕವನಗಳನ್ನು ನೋಡಬಹುದು. ಪ್ರಕೃತಿಯನ್ನು ಹೆಣ್ಣಾಗಿ ಅಥವಾ ಹೆಣ್ಣನ್ನೇ ಪ್ರಕೃತಿಯನ್ನಾಗಿ ನೋಡಿ ಸ್ತ್ರೀಶಕ್ತಿಯೊಂದು ಉಂಟುಮಾಡಬಹುದಾದ ಪರಿಣಾಮಗಳನ್ನು ಕೂಡ ಸೂಚಿಸುತ್ತದೆ. ನವೋದಯ ಕಾಲದ ಕವಿಗಳು ಪ್ರಕೃತಿ ವಿಸ್ಮಯಗಳನ್ನು ಆರಾಧನೆಯ ದೃಷ್ಟಿಯಿಂದ ನೋಡುತ್ತಿದ್ದರೆ ಇಲ್ಲಿ ಆರಾಧನೆಗೂ ಮೀರಿದ ಇನ್ನೇನೋ ಜೀವನ ಪಾಠ ತೆರೆದಿಟ್ಟಂತಿದೆ. ಮಹಿಳಾ ಕಾವ್ಯ ಕೇವಲ ಕೌತುಕಗಳಲ್ಲೆ ಮೈಮರೆಯುವುದಿಲ್ಲ, ಸಮಕಾಲೀನ ಜಗತ್ತಿನ ಆಗು ಹೋಗುಗಳಿಗೆ ತನ್ನದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾ ಬಂದಿದೆ. ಮಾನವ ಜೀವನ ಮನುಕುಲಕೆ ಹಾನಿಕರವಾದ ಪ್ರತಿ ನಡೆಯ ಮೇಲೂ ಸಂವೇದನಾಶೀಲವಾಗಿಯೇ ಇದೆ. ಅಂತಹ ಹಾನಿಕರವಾದ ಸಂಗತಿಗಳಲ್ಲಿ ಮನುಷ್ಯನ ಹಪಹಪಿಕೆ ಕೂಡಾ ಬಂದು ಇದು ಪ್ರಕೃತಿಯನ್ನು ತನ್ನ ಪಾಡಿಗೆ ತಾನಿರಲು ಬಿಡದೆ ಇನ್ನಿಲ್ಲದ ರೀತಿಯಲ್ಲಿ ಹಸ್ತಕ್ಷೇಪ ಮಾಡಿ ಆಕ್ರಮಣ ನಡೆಸಿದೆ. ಮನುಷ್ಯ ಕುಲದ ಈ ದುರಾಸೆಗೆ ಸ್ಪಂದಿಸುವಾಗ ಒಬ್ಬ ಕವಿಯ ಪ್ರತಿಕ್ರಿಯೆ ಕವನಗಳ ಮೂಲಕ ಹೊರಹೊಮ್ಮುತ್ತವೆ. ಸವಿತಾರವರ ಎಲ್ಲ ಕವಿತೆಗಳಲ್ಲಿ ಪ್ರಕೃತಿ ನಿರ್ಮಿತ ವಸ್ತುಗಳ ಚೈತನ್ಯದ ಚಲನಶೀಲತೆಯ ನೆಲೆಯನ್ನು ಪಡೆದುಕೊಂಡಿವೆ. ಅವರ ಕವಿತೆಗಳನ್ನು ಮೂರು ಭಿನ್ನ ನಿರೂಪಣ ವಿಧಾನಗಳಿಂದ ಗುರುತಿಸಬಹುದು.

೧. ಸ್ವಗತ ೨. ಸಂವಾದ ೩. ಶಬ್ದಚಿತ್ರ

ಹೀಗೆ ಕವಿಯ ಪ್ರಕೃತಿ ಸಹಜವಾದ ವಸ್ತುಗಳಲ್ಲಿ ಕವನಗಳನ್ನು ಕಾಣಬಹುದು. ಈ ಕವಿಯ ಮಟ್ಟಿಗೆ ಬರಡು, ಪೋರ, ಚಂದ್ರನೂ ಸೇರಿದಂತೆ ಬೆಟ್ಟ, ಗುಡ್ಡ, ಹೊಳೆ, ಆಕಾಶ, ನಕ್ಷತ್ರ ಇಂತಹವುಗಳು ಅವರ ಮಟ್ಟಿಗೆ ಕೇವಲ ಸೌಂದರ್ಯದ ಪ್ರತಿಮೆಗಳಲ್ಲಿ ಕವಿ ಸಮಯವೂ ಅಲ್ಲ ಅವು ಸಜೀವ ಪಾತ್ರಗಳೇ ಆಗಿವೆ. ಪ್ರಕೃತಿಯ ಮೂಲ ಪ್ರತಿಮೆಗಳನ್ನೆಲ್ಲ ತಮ್ಮ ಮನೋಭೂಮಿಕೆಯ ಸಂವೇದನೆಯ ವಿಭಿನ್ನ ಭಾಗವಾಗಿಸಿಕೊಳ್ಳುವುದರ ಮೂಲಕ ಮನುಷ್ಯ ಪ್ರಕೃತಿ ನಡುವೆ ಲಯವನ್ನು ನಿರ್ಮಿಸಿಕೊಳ್ಳುವುದು ಮಾತ್ರವಲ್ಲ ಇದರಿಂದ ವಿಸ್ತಾರವಾಗಬಹುದಾದ ಬದುಕಿನ ಪ್ರಚಾರದ ಕ್ಯಾನ್‌ವ್ಯಾಸ್ ಬಗೆಗೂ ಕವಿಗೂ ಆಸಕ್ತಿಯಿದೆ. ಆದ್ದರಿಂದಲೇ ಪ್ರಕೃತಿ ಮತ್ತು ಮನುಷ್ಯನ ನಡುವೆ ಅದ್ವೈತ ಸಾಧಿಸುವ ಹಂಬಲದ ಅನೇಕ ಕವನಗಳಿವೆ.

ಹೊರಳುತ್ತಿರುವ ಭೂಮಿಯನ್ನು
ಉರುಳುತ್ತಿರುವ ಸಾಗರವನ್ನೂ

ಮಾತನಾಡಿಸಬೇಕು

(ಮಾತನಾಡಿಸಬೇಕು, ಅಕಾಶ ಮಲ್ಲಿಗೆ)

ಹೆಣ್ಣಿನ ಕಾವ್ಯವು ಏಕಕಾಲಕ್ಕೆ ಅಂತರಂಗದ್ದೂ ಹೌದು ಬಹಿರಂಗದ್ದೂ ಹೌದು. ತಾನು ಯಾರು ಏನು ಎನ್ನುವುದನ್ನು ತಾನೇ ನೋಡಿಕೊಳ್ಳುತ್ತಲೇ ಲೋಕಕ್ಕೂ ತಿಳಿಸುವ ಈ ಕಾವ್ಯವು ಕಲೆಯಷ್ಟು ರಾಜಕೀಯ ಹೋರಾಟವೂ ಹೌದು. ಆದ್ದರಿಂದಲೇ ಕಾವ್ಯ ಎನ್ನುವುದು ಹೆಣ್ಣಿನ ಮಟ್ಟಿಗೆ ಸಂಘಟಿತ ಪ್ರಜ್ಞೆಯ ಉದಯ ಎನಿಸುತ್ತದೆ. ಭಾಷೆಯನ್ನು ಮುರಿದುಕಟ್ಟುವ ಪ್ರಕ್ರಿಯೆಯು ಭಾಷೆಯೊಂದರ ಉಗಮ ಮಾತ್ರವಲ್ಲ, ವ್ಯವಸ್ಥೆಯೊಂದಿಗೆ ನಡೆಸುವ ಸಂಘರ್ಷ, ಅನುಸಂಧಾನ, ಸಖ್ಯ ಎಲ್ಲವೂ ಆಗಿರುತ್ತದೆ.

ಮರುಳುತ್ತಿರುವ ಹಕ್ಕಿಗಳನ್ನೂ
ಅರಳುತ್ತಿರುವ ಹೂವುಗಳನ್ನೂ
ಮಾತನಾಡಿಸಬೇಕು
(ಅದೇ ಕವನ)

ಈ ಕವಿತೆ ಭಾಷೆಯ ವಿಶ್ವಾತ್ಮಕ ಭಿತ್ತಿಯನ್ನು ಹೇಳುತ್ತಿರುವಂತೆ ಕಾಣಿಸುತ್ತದೆ. ಆದರೆ ಈ ಕವಿತೆಯ ನಾಯಕಿಯ ಆತ್ಮವಿಶ್ವಾಸ ಮತ್ತು ಲೋಕಪ್ರೀತಿ ಇನ್ನಿತರ ಅಂಶಗಳ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಹೆಣ್ಣಿನ ವಿಶ್ವಾತ್ಮಕ ಭಾಷೆಯೆನ್ನುವ ಅತ್ಯಂತ ಮಹತ್ವದ ಸಂಗತಿಯ ಪ್ರಸ್ತಾಪ ಇಲ್ಲಿದೆ

ಚಿಗುರುತ್ತಿರುವ ಮರವನ್ನೂ
ಕರಗುತ್ತಿರುವ ಮಂಜನ್ನೂ
ಮಾತನಾಡಿಸಬೇಕು
(ಅದೇ ಕವನ)

ಕುಟುಂಬ ವಿಶ್ವ ಎನ್ನುವ ಪರಿಧಿಯಲ್ಲಿಯೇ ಹೆಣ್ಣನ್ನು ಭದ್ರಗೊಳಿಸುವ ಆದಿಮ ಎನ್ನಬಹುದಾದ ದೃಷ್ಟಿಕೋನವನ್ನು ಈ ಕವಿತೆ ಪ್ರಶ್ನಿಸುತ್ತಿದೆ. ಅದಕ್ಕೆ ಎದುರಾಗಿ ಇಡೀ ವಿಶ್ವವನ್ನೇ ಕುಟುಂಬವಾಗಿ ಗ್ರಹಿಸಬಹುದಾದ ಹೆಣ್ಣಿನ ಧಾರಣಶಕ್ತಿಯ ಅರಿವಿಗೆ ತಂದುಕೊಳ್ಳುವ ಸನ್ನಿಹದಲ್ಲಿ ಈ ಕವಿತೆ ಇದೆ. ಇವರದ್ದು ಯಾವ ಭಾಷೆ ಎನ್ನುವ ಉದ್ಗಾರದ ಜೊತೆಗೆ ಅಸಹಾಯಕತೆಯಲ್ಲ, ಯಾವ ಭಾಷೆಯಾದರೂ ಸಂವಾದ ಸಾಧ್ಯ ಎನ್ನುವ ಭರವಸೆಯು ಇಲ್ಲಿದೆ. ಜಗತ್ತಿನ ವಿಸ್ತಾರಕ್ಕೆ ಅನಂತತೆಗೆ ಪ್ರಾಕೃತಿಕ ನ್ಯಾಯಕ್ಕೆ ತನ್ನನ್ನು ಹೊಂದಿಸಿಕೊಳ್ಳುವ ಮಹತ್ವಾಕಾಂಕ್ಷೆಯೂ ಇಲ್ಲಿದೆ.

ಮತ್ತೆ ಬೆಳಗಾಗಿದೆ
ಬೆಳಕಿನ ಸಮುದ್ರದಲ್ಲಿ
ಜಗತ್ತು ಮುಖ
ತೊಳೆದುಕೊಳ್ಳುತ್ತಿದೆ
ಸೂರ್ಯ ಮೈಮುರಿಯುತ್ತಿದ್ದಾನೆ
(ಮತ್ತೆ ಬೆಳಗಾಗಿದೆ, ಆಕಾಶಮಲ್ಲಿಗೆ)

ಬೆಳಗೆಂಬ ಬೆಳಗು ದೈನಂದಿನ ಸಾಮಾನ್ಯ ಪ್ರಕ್ರಿಯೆಗಳಿಗೆ ಚಾಲನೆ ನೀಡುವ ಈ ಕವನ ಸಾಧಾರಣವಾಗಿರುವುದೆಂದು ಪ್ರಾರಂಭದಲ್ಲಿ ಭಾಸವಾಗುವ ಕವನ ಕೊನೆಯಲ್ಲಿ ಪಡೆಯುವ ತಿರುವು ಹೆಣ್ಣಿನ ಮಟ್ಟಿಗೆ ವಿಶಿಷ್ಟವಾಗುತ್ತದೆ. ಜಗತ್ತಿಗೆಲ್ಲ ಒಂದು ಸಂಭ್ರಮವಾದರೆ ಹೆಂಗಸರಿಗೆ ನಿದ್ರಾಸ್ಥಿತಿಯೇ ಹಿತಕಾರಿಯಾಗಿರುವ ಅನುಭವವನ್ನು ಕವಿ ವ್ಯಂಗ್ಯದಲ್ಲಿ ಹಿಡಿದಿಡುವ ಪರಿ ಅನನ್ಯ ಇತರರಿಗೆ ಬೇಕಾಗುವ ಬೆಳಕು ಹೆಂಗಸರಿಗೆ ಸುಖ ತರದ ಸಂಗತಿಯಾಗಲು ಇರುವ ಕಾರಣಗಳನ್ನು ಮತ್ತೆ ಪಟ್ಟಿ ಮಾಡಬೇಕಾಗಿಲ್ಲ.

ಸಾವಿನ ಸುಖದಲ್ಲಿ
ಮೈ ಮರೆತಿರುವ
ಹೆಂಗಸರನ್ನು ಬದುಕಿನ
ಬಾಗಿಲಿಗೆ ಎಳೆಯುತ್ತಿದ್ದಾನೆ,
(ಅದೇ ಕವನ)

ಬೆಳಕಿನ ವರ್ಣನೆಯ ಜೊತೆಗೆ ಹೆಣ್ಣಿನ ಪಾಲಿಗೆ ಅದೆಷ್ಟು ನಿರೀಕ್ಷಿತ ಎನ್ನುವುದು ಈ ಕವನ ಬಹಳ ಸೂಚ್ಯವಾಗಿ ಹೇಳುತ್ತದೆ. ಪ್ರಕೃತಿಯ ನಿಗೂಢತೆ ಕೌತುಕಗಳನ್ನು ಎಷ್ಟೆಲ್ಲಾ ಬಗೆಯಲ್ಲಿ ತಿಳಿಯಲು ಯತ್ನಿಸಿದರೂ ಅದೊಂದು ತೀರದ ಪಯಣ. ಇದನ್ನು ಬೆಂಬತ್ತಿಹೋದ ಯಾರಿಗೂ ಪೂರ್ಣ ಉತ್ತರ ದೊರೆತಿಲ್ಲ. ಹಾಗೆ ಉತ್ತರ ದೊರೆತ ದಿನ ಬಹುಶಃ ಜೀವಸಂಕುಲದ ಕೊನೆಯ ದಿನವಾಗಬಹುದೇನೂ. ಹಾಗೆಂದು ಮತ್ತೆ ಮತ್ತೆ ಅದರತ್ತ ಆಕರ್ಷಿತವಾಗುವುದರಿಂದ ಮಹಿಳೆಯು ಕೂಡ ತಪ್ಪಿಸಿಕೊಂಡಿಲ್ಲ. ಕವನ ಮುಂದುವರಿದು ಇಡೀ ಪ್ರಕೃತಿಯನ್ನೇ ಹೆಣ್ಣಾಗಿ ಅಥವಾ ಹೆಣ್ಣನ್ನೇ ಪ್ರಕೃತಿಯನ್ನಾಗಿ ನೋಡಿ ಸ್ತ್ರೀಶಕ್ತಿಯೊಂದು ಉಂಟುಮಾಡಬಹುದಾದ ಪರಿಣಾಮಗಳನ್ನು ಕೂಡ ಸೂಚಿಸುತ್ತದೆ.

ಮುಂಜಾವದ ತಂಪೊತ್ತಿನಲ್ಲಿ
ಕೆಂಪು ಹೃದಯದ ಹುಡುಗಿ

ರಸ್ತೆಯಂಚಿನಲ್ಲಿ ನಿಂತಿದ್ದಾಳೆ
ಯಾಕೆ? ಎಂದು ಕೇಳಬೇಕು
ಹೇಗೆ ಕೇಳುವುದು?
(ಸ್ವಗತ, ಆಕಾಶ ಮಲ್ಲಿಗೆ)

ಕವಿತೆ ಅಪರಿಚಿತ ಹುಡುಗಿಯ ದುಃಖ ಮತ್ತು ಕವಿ ಮನಸ್ಸಿನಲ್ಲೇ ನೀಡುವ ಸಾಂತ್ವಾನದ ಸ್ವಗತವಾಗಿದೆ. ರಸ್ತೆಯ ಅಂಚಿನಲ್ಲಿ ನಿಂತಿರುವ ಆ ಹುಡುಗಿ ಯಾವುದೋ ಸಂದಿಗ್ಧದಲ್ಲಿ ನಿಂತಿರುವ ಆಕೆಯ ದುಃಖವನ್ನು ಹೋಗಲಾಡಿಸಲು ತಾರೆಗಳು ಮರಗಳಿಗೆ ಮೊರೆ ಹೋಗಲು ಹೇಳಬೇಕೆಂದು ಕವಿ ಅಂದುಕೊಳ್ಳುತ್ತಾರೆ. ಆಗ ಕವಿಯ ಭಾವ ಅರ್ಥವಾಯಿತೆನ್ನುವಂತೆ ಮರಗುವ ದನಿಯೊಂದು ಕಾವ್ಯ.

ನೆಲವನ್ನು ಜಗ್ಗಿ ಹಿಡಿದಿರುವ ಕಾಲು
ಸೋತ ತೂಗುತ್ತಿರುವ ಕೈಗಳು
ದಿಟ್ಟಿಸಿ ದಿಟ್ಟಿಸಿ ಆಳಕ್ಕಿಳಿದಿರುವ ಕಣ್ಣು
ಇವಳನ್ನು ಸಂತೈಸಬೇಕು
ಹೇಗೆ ಸಂತೈಸುವುದು?
(ಅದೇ ಕವನ)

ಸೋತ ಹುಡುಗಿಯನ್ನು, ಬಡ ಹುಡುಗಿಯನ್ನು ಸಂತೈಸು ಎನ್ನುತ್ತದೆ ಮನಸ್ಸು. ಆದರೆ ಸಂತೈಸಲಾಗುವುದಿಲ್ಲ. ತಾನು ನಂಬಿದ ಪ್ರಕೃತಿ ತನ್ನ ಆಪದ್ಧನದಂತೆ ಇರುವ ನಿಸರ್ಗ, ತಾರೆಯರು, ಚಂದ್ರ ಮತ್ತು ಮರಗಳು ತನ್ನ ನೆರವಿಗೆ ಬಂದಂತೆ ಆ ನೋಯುತ್ತಿರುವ ಹುಡುಗಿಗೂ ನೆರವಿಗೆ ಬಂದಾವು ಎಂದು ಇದು ತಿದಿತೆಂಬಂತೆ ಹುಡುಗಿ ಮರದಲ್ಲಿ ತೂಗುತ್ತಿದ್ದಾಳೆ ಎಂಥ ನೆರವು.

ಆ ತಾರೆಯರು ನಿನ್ನನ್ನು
ಅರ್ಥೈಸಿಕೊಳ್ಳುವರು
ಆ ಮರಗಳು ಅವರೆದೆಯೊಳಗೆ
ನಿನ್ನ ಕರೆದುಕೊಳ್ಳುವರು
(ಅದೇ ಕವನ)

ಶೋಷಣೆಯ ಸ್ಥಿತಿಯಲ್ಲಿಯೂ ತನ್ನ ಅಂತರಂಗದ ಪ್ರಾವಿತ್ರ್ಯವನ್ನು ಕಾಯ್ದುಕೊಳ್ಳುವುದು ಇಂದಿನ ಸಾಮಾಜಿಕ ಪರಿಸರದಲ್ಲಿ ಹೆಣ್ಣು ಎದುರಿಸುತ್ತಿರುವ ಮುಖ್ಯ ಸಮಸ್ಯೆಯಾಗಿದೆ. ಹೆಣ್ಣಿನ

ಸ್ಥೈರ್ಯ, ಆತ್ಮನಿರ್ಭರತೆಗಳು ಹೆಣ್ಣಿನ ಜೀವನದಲ್ಲಿ ಹೊಸ ಬೆಳವಣಿಗೆಗಳಾಗಿವೆ. ಇಲ್ಲಿಯ ಪ್ರಶ್ನೆ ಕೇವಲ ಕುತೂಹಲದ್ದಾಗಿದೆ. ಹೆಣ್ಣು ತನ್ನ ಬದುಕಿನ ಕಷ್ಟಗಳನ್ನು ನೀಗಿಸುವಲ್ಲಿ ದೊರೆಯಬಹುದಾದ ತಿಳಿವಿಗೆ ಸಂಬಂಧಪಟ್ಟ ಪ್ರಸ್ತುತತೆಯನ್ನು ಪಡೆಯುತ್ತದೆ. ಇಂಥ ವ್ಯಂಗ್ಯ ನಿರಾಕರಣೆಗಳ ಮಧ್ಯದಲ್ಲೂ ತಮ್ಮನ್ನು ವಾಸ್ತವದ ನೆಲೆಯಲ್ಲಿ ಕಂಡುಕೊಳ್ಳುವುದು ಸಾಧ್ಯವಾಗಿದೆ.

ಕಡಲ ಕಪ್ಪೆಳಗೆ
ನಕ್ಷತ್ರಗಳು ಅರಳಿದ್ದವು
ಒಂಟಿ ಮೋಡಗಳು
ರೆಕ್ಕೆ ಬೀಸುತ್ತಿದ್ದವು
ಚಂದಿರ ಈಸುತ್ತಿದ್ದ
(ಪದ್ಯವಾಗಲಿಲ್ಲ, ಆಕಾಶ ಮಲ್ಲಿಗೆ)

ಈ ಕವಿತೆಯಲ್ಲಿ ಪ್ರಕೃತಿಯ ಚೈತನ್ಯಗಳೆಲ್ಲ ಒಂದರೊಳಗೊಂದು ಬೆಸೆದುಕೊಂಡು ಪದ್ಯಗಳಾಗಿವೆ. ಹಳ್ಳಕೊಳ್ಳಗಳು ಕಡಲನ್ನು ಹೆಣೆದು ಕಡಲು ಮತ್ತೆ ಹೊಳೆಯಾಗಿ ಹರಿದು ಬಂದು ಕವಿಯ ಹಾಳೆಯಲ್ಲಿ ಪದ್ಯವಾಗಿದೆ.

ಸಾವಿರ ಸಾವಿರ ಹಳ್ಳಕೊಳ್ಳಗಳು
ಕಡಲನ್ನು ಹೆಣೆದವು
ಅದೇ ಕಡಲು ಹೊಳೆಯಾಗಿ
ಹಾಳೆಯ ಮೇಲೆ ಹನಿದು ಹರಿದು
ಪದ್ಯವಾಯಿತು (ಅದೇ ಕವನ)

ಕಡಲಿನ ಕಣ್ಣುಗಳಾಗಿ ನಕ್ಷತ್ರಗಳು ಮುಂಗುರುಳಾಗಿ ಮೋಡಗಳು ತುಟಿಯಂಚಿನ ನಗೆಯಾಗಿ ಬೆಳದಿಂಗಳು ಮೂಡಿ, ಕಡಲು ಕವಿಯ ಕಲ್ಪನೆಯಲ್ಲಿ ಒಂದು ಅಪ್ರತಿಮ ರೂಪವನ್ನು ಪದ್ಯವಾಗಿದೆ. ತಾನು ತನ್ನ ಶರೀರದ ಅಂಗಗಳನ್ನು ಮುಂಗುರುಳು ಹಾಗಿ ಹೊಳೆ ಹೊಳೆದು ಹಾಳೆಯ ಮೇಲೆ ಪದ್ಯವಾಗಿದೆ. ಸವಿತಾ ಅವರ 'ಪದ್ಯವಾಗಲಿಲ್ಲ' ಕವಿತೆಯಲ್ಲಿ ತನ್ನ ಬಿಂಬವನ್ನು ಕನ್ನಡಿಯೊಳಗೆ ಇಣುಕಿದ ಬಿಂಬ ಲೇಖಕಿಗೆ ಕಾಣಲಿಲ್ಲ. ಹಾಗೆಯೇ ಕಣ್ಣು ಕನ್ನಡಿಯೊಳಗೆ ಇಣುಕಿದರೂ ನನ್ನ ಬಿಂಬವಾಗಿರಲಿಲ್ಲ ನಾನು ಪದ್ಯವಾಗಲಿಲ್ಲ ಎಂದು ಕವಯಿತ್ರಿ ಹೇಳುತ್ತಾರೆ.

ನನ್ನೆಲ್ಲಾ ಪದ್ಯಗಳಲ್ಲಿರುವಂತೆ
ಇಲ್ಲೂ ತಾರೆ, ಮೊಡ, ಗಾಳಿ,
ಕಡಲು, ಸೂರ್ಯರಿದ್ದಾರೆ

ನಿನಗಿಷ್ಟವಾದರೆ ಓದು ಒತ್ತಾಯವಿಲ್ಲ
ಇಷ್ಟವಾಗದಿದ್ದರೆ ಬೇಡ
ಕಿಂಚಿತ್ತೂ ಕೋಪವಿಲ್ಲ
(ಈ ಗೆಳೆತನ, ಆಕಾಶ ಮಲ್ಲಿಗೆ)

ಮಲೆನಾಡಿನ ಪ್ರಕೃತಿ ಸಿರಿಯಲ್ಲಿ ತನ್ಮಯರಾಗಿ ಬೆಳೆದ ಸವಿತಾ ನಾಗಭೂಷಣರವರು ಪ್ರಕೃತಿ ಜನ್ಯ ವಸ್ತುಗಳನ್ನು ಕಾವ್ಯದ ಜೀವನಾಡಿಯಾಗಿಸಿಕೊಂಡಿದ್ದಾರೆ. ಭೂಮಿ, ಬಾನು, ಗಾಳಿ, ನೀರು, ಮೋಡ, ತಾರೆ, ಸೂರ್ಯ, ಚಂದ್ರ, ಮುಂತಾದ ವಸ್ತುಗಳ ಸಂವೇದನೆಯ ಮೂಲಕ ವ್ಯಕ್ತಿ ವ್ಯಕ್ತಿತ್ವದ ಸಂಬಂಧಗಳನ್ನು ಗುರುತಿಸುವುದು ಸವಿತಾರವರ ಕಾವ್ಯದ ಆಶಯವಾಗಿದೆ. ಕವಿಗೆ ಪ್ರಕೃತಿಯ ಸಹಜವಾದ ವಸ್ತುಗಳಲ್ಲಿ ಯಾವುದು ಇಷ್ಟ ಎಂದು ಪ್ರಶ್ನಿಸಿದರೆ ಅವರು ಹುಲ್ಲು ಕಡ್ಡಿಯನ್ನು ಮೊದಲು ಮಾಡಿ ಪ್ರೀತಿಸಬಲ್ಲವರು ಎಂಬುದು ಪ್ರಕೃತಿಯಲ್ಲಿರುವ ಹೂವು ಬಣ್ಣ, ಪ್ರಾಣಿ ಪಕ್ಷಿಗಳ ವಿವಿಧ ಗುಣಗಳಂತೆ ಮನುಷ್ಯ ಸಹಜ ಗುಣಗಳಲ್ಲಿ ತುಂಬಿರುವ ಕೋಪ, ತಾಪ, ಮದ ಮತ್ಸರ ದಾಂಕ–ದುಃಖಗಳಿಂದ ಕೂಡಿರುವುದನ್ನು ಕವಿತೆ ಬಿಂಬಿಸುತ್ತದೆ.

ಈ ಗೆಳೆತನ ಮೋಡಗಳ ಹಾಗೆ
ನಾಲ್ಕು ಹನಿ ತಂಪು ಚೆಲ್ಲುತ್ತೇನೆ
ಎಂದು ಹೇಳುವುದಿಲ್ಲ
ಚೆಲ್ಲಬೇಡ ಎಂದರೆ
ಕೇಳುವುದೂ ಇಲ್ಲ
(ಆದೇ ಕವನ)

ಲೇಖಕಿಯ ಭಾಷೆಯು ಊಹೆಯನ್ನು ಮೀರಿಸುವಂತಹ ಮಾತುಗಳನ್ನು ಮತ್ತು ಕಲ್ಪನೆಗಳನ್ನು ಅವರು ತಮ್ಮ ಕವನದಲ್ಲಿ ವ್ಯಕ್ತಪಡಿಸುತ್ತ ಹೋಗುತ್ತಾರೆ. ಪ್ರಕೃತಿಯಲ್ಲಿ ಇರುವಂತಹ ಮೋಡಗಳು ವಾತಾವರಣದಲ್ಲಿ ನಡೆಯುವಂತಹ ಬದಲಾವಣೆಗಳಿಂದ ಮಳೆಯನ್ನು ಸುರಿಸುತ್ತವೆ. ಆದರೆ ಸವಿತಾ ಅವರು ತಮ್ಮ ಕಲ್ಪನೆಯಲ್ಲಿ ಮೋಡವು ಮಳೆಯನ್ನು ಸುರಿಸಬೇಕು ಎಂದರೆ ಒಪ್ಪಿಗೆಯನ್ನು ಪಡೆಯಬೇಕು ಎಂಬ ನಿರ್ಧಾರವನ್ನು ಹೊಂದಿದ್ದಾರೆ.

ಈ ಗೆಳೆತನ
ಉರಿಯುವ ಸೂರ್ಯನ ಹಾಗೆ
ನಾಲ್ಕು ಉರಿಯುವ ಸೂರ್ಯನ ಹಾಗೆ
ಚುಚ್ಚುತ್ತೇನೆ ಎಂದು ಹೇಳುವುದಿಲ್ಲ

ಚುಚ್ಚಬೇಡ ಎಂದರೆ
ಕೇಳುವುದೂ ಇಲ್ಲ
(ಅದೇ ಕವನ)

ಸವಿತಾರವರ ಈ ಕಲ್ಪನೆಯು ಸೂರ್ಯನ ಬಿಸಿಲಿನ ತಾಪವನ್ನು ಮನುಷ್ಯನಿಗೆ ಚುಚ್ಚುತ್ತೇನೆ ಎಂದರೆ ಇವರ ಒಪ್ಪಿಗೆಯು ಗಾಳಿಯ ಎದೆಯೊಳಗೆ ನುಗ್ಗಿ ಬರಬೇಕು ಎಂದರು ಇವರ ಒಪ್ಪಿಗೆಯನ್ನು ಪಡೆಯಬೇಕು ಎಂಬುದು ಇವರ ಕನಸು ಆಗಿದೆ. ಪ್ರಕೃತಿಯಲ್ಲಿ ನಡೆಯುವಂತಹ ಈ ಗೆಳೆತನ ಧೂಳಿನ ಹಾಗೆ ಮೆತ್ತಿಕೊಳ್ಳುತ್ತದೆ. ಕೊಡವಿದರೆ ಚದುರಿಚೆಲ್ಲಿ ಹೋಗುತ್ತದೆ. ಅಂತಹ ಗೆಳೆತನ ಸವಿತಾರವರಿಗೆ ಪ್ರಕೃತಿಯಲ್ಲಿ ಮೆಚ್ಚುವಂತದ್ದು ಇದೆ. ಚುಚ್ಚುವಂತದ್ದು ಇದೆ. ಅಂದ ಹಾಗೆ ಗೆಳೆಯಾ ಈ ಗೆಳೆತನದಲ್ಲಿ ಬರೆದ ಕವನ ಬರೆ ಎಂದೇನೂ ನೀನು ಕೇಳಿಲ್ಲ. ಆದರೆ ನಿನ್ನ ಮೇಲಿನ ಪ್ರೀತಿಯಿಂದ ನಾನು ಬರೆದಿದ್ದೇನೆ ಎಂದು ಹೇಳುತ್ತಾರೆ.

ನೀವು ಕೇಳಿದ್ದು ಒಳ್ಳೆಯದೆ ಆಯಿತು
ನನಗೀನ ಎಲ್ಲವೂ ಅರ್ಥವಾಯಿತು
ನೋಡಿ
ಹಿಂಡು ಹಿಂಡಾಗಿ ಅಲೆಯುವ ಮೋಡಗಳಲ್ಲೊಂದು ತುಣುಕೆಂದೂ
(ಬಿಡಿ ನನ್ನ ಪಾಡಿಗೆ ನನ್ನನ್ನು, ಆಕಾಶಮಲ್ಲಿಗೆ)

ತನಗೆ ಬೇಕಾಗಿದ್ದೆಲ್ಲವೂ ದೊರೆತಾಗ ಮನಸ್ಸು ಸುಖ ಲೋಲುಪತ್ತೆಯಲ್ಲಿರಬಹುದೇನೋ ಆದರೆ ಕೇವಲ ಭಾವನೆಗಳು ವರ್ಣನೆಗಳು ನೀಡುವ ಸಮಾಧಾನ ವಾಸ್ತವಕ್ಕೆ ಹತ್ತಿರವಾದದ್ದಲ್ಲ. ಹೀಗೆ ಅವಾಸ್ತವದಲ್ಲಿ ಕಳೆದು ಹೋಗಲಿಕ್ಕೆ ಈ ಕವಿಗೆ ಮನಸ್ಸಿಲ್ಲ. ವರ್ಣನೆಗಾಗಿಯೇ ರಚಿತವಾದ ಮಹಾ ಕಾವ್ಯಗಳಿವೆ ಅಥವಾ ಮಹಾಕಾವ್ಯಗಳ ತುಂಬ ಬಹುಪಾಲು ವರ್ಣನೆಗಳು ತುಂಬಿರುತ್ತವೆ.

ರಕ್ತ-ಮಾಂಸ, ಮೂಳೆ ವಿರಚಿತ
ನನ್ನದೆಯ ಮೇಲೆ ಮಲಗಿದ್ದ
ಯಾರು ಕರೆದರೂ ಗೊತ್ತಿಲ್ಲ
ಯಾಕೆ ಕರೆದರೂ ಗೊತ್ತಿಲ್ಲ
ಯಾವಾಗ ಕರೆದರೂ ಗೊತ್ತಿಲ್ಲ
(ಅದೇ ಪುಸ್ತಕ)

ಲೇಖಕಿಯ ವ್ಯಕ್ತಿತ್ವದ ನೈಜತೆಯನ್ನು ಮರೆಮಾಚುತ್ತವೆ. ಕವಿಯಾದವರು ಇಂತಹ ಕಲ್ಪನೆ ವರ್ಣನೆ, ಕನಸುಗಳನ್ನು ಹೆಣೆದಾಗ ಮಾತ್ರ ಅವರ ಕೆಲಸ ಮುಗಿದು ಹೋಗುವುದಿಲ್ಲ.

ವಾಸ್ತವವನ್ನು ಸೆರೆಹಿಡಿಯುವಂತಹ ಕೆಲಸ ಅವರಿಂದ ಆಗಬೇಕು. ಇದನ್ನೇ ಕವನ ಒತ್ತಾಯಿಸುತ್ತದೆ. ಸರಳತೆಯಲ್ಲಿ ತನ್ನನ್ನು ತಾನು ಕಂಡುಕೊಳ್ಳಲು ಇಚ್ಚೆಪಡುವ ಮನಸ್ಸು ಪ್ರಕೃತಿಯ ಸಂಕೇತವಾಗಿ ಬೆಳೆಸಲಾಗುತ್ತದೆ. ಭಾರತೀಯ ಪರಂಪರೆಯ ಅನುಸರಣಿಯಲ್ಲಿ ಹೆಣ್ಣು ಮಕ್ಕಳ ಮದುವೆ, ಬಸಿರು, ಬಾಣಂತಿ ಇನ್ನು ಮುಂತಾದ ಶುಭ ಸಂದರ್ಭಗಳಲ್ಲಿ ಹಸಿರು ಬಳೆ, ಬಟ್ಟೆ ತೊಡಿಸುವುದು ವಾಡಿಕೆ

ಏಯ್! ಯಾರು ನೀನು?
ನಾನು ಹೂಗಿಡಗಳ ಮಿತ್ರ
ಏಯ್! ಯಾರು ನೀನು?
ನಾನು ನದಿಯ ಪಾತ್ರ
(ಯಾರು ನೀನು?, ಆಕಾಶಮಲ್ಲಿಗೆ)

ಪ್ರತಿಯೊಂದಕ್ಕೆ ಪ್ರಶ್ನೆಯೂ ಆಂತರ್ಯದಲ್ಲೊಂದು ಉತ್ತರವನ್ನು ಅಡಗಿಸಿಕೊಂಡಿರುತ್ತದೆ ಎಂಬುದೊಂದು ನಂಬಿಕೆ. ಹೀಗೆ ಪ್ರಕೃತಿಯೊಂದಿಗಿನ ಸಂವಾದ ಪ್ರಶ್ನೆಯಾಗಿ ಉತ್ತರವಾಗಿ ಮುಂದುವರೆಯುತ್ತದೆ. ಅವರ ಅನೇಕ ಕವನಗಳ ಶೀರ್ಷಿಕೆಗಳು ಪ್ರಶ್ನೆ ರೂಪದಲ್ಲಿಯೇ ಇವೇ ಯಾಕೆ, ನಿವೇಕೆ ಬೇಕು, ಯಾರು ನೀನು, ಇನ್ನೇನು ಬೇಕು? ಎಂಬುದನ್ನು ಈ ಕವಿತೆಯು ಬಿಂಬಿಸುತ್ತದೆ.

ಏಯ್! ಯಾರು ನೀನು?
ನಾನು ಅಗ್ನಿನೇತ್ರ
ಏಯ್! ಯಾರು ನೀನು
ನಾನು ಉಲ್ಲಾಸ ಚೈತ್ರ
(ಅದೇ ಕವನ)

ಸಮಾಜದಲ್ಲಿ ನಡೆಯುತ್ತಿರುವುದು ಇರುವುದು ಒಂದು ನಾಟಕ ಅದನ್ನು ನಡೆಸುವರು ದೇವರು ಅದರ ಪಾತ್ರಧಾರಿಗಳು ನಾವು ಎಂದು ಹೇಳಬಹುದು. ಮನುಷ್ಯ ತನ್ನ ಬಗ್ಗೆ ತಾನು ಬ್ರಹ್ಮಾಂಡ ಅಣುಸೂತ್ರ, ಅಗ್ನಿನೇತ್ರ, ನಾಟಕ ಪಾತ್ರ ಯಾವುದರೊಂದಿಗೆ ತನ್ನ ಹೋಲಿಸಿಕೊಂಡು ಹೋಗಿದ್ದಾನೆ. ಮನುಷ್ಯ ತಾನು ಮನಸ್ಸು ಮಾಡಿದರೆ ಅಸಾಧ್ಯವಾದದ್ದು ಸಾಧ್ಯ. ಮಾಡುವಂತಹ ಶಕ್ತಿಯನ್ನು ಮನುಷ್ಯ ಹೊಂದಿದ್ದಾನೆ. ಅದಕ್ಕೆ ತನ್ನ ಬಗ್ಗೆ ತಾನೇ ಪ್ರಶ್ನಿಸುವಂತಹ ಆಶಯವೂ ಈ ಕವನದಲ್ಲಿ ಮೂಡಿಬಂದಿದೆ.

ಎಲ್ಲಿ ಹೇಳುತ್ತಾರೆ ನಾನು
ಹಕ್ಕಿಗಳ ಗಡಿಯಾರ
ನನಗೂ
ಚಿಲಿಪಿಲಿ ಸದ್ದು
ಕುಲುಕಿ ಎಬ್ಬಿಸಿದಾಗಲೆ
ಎಚ್ಚರ
(ನಾನು ಸೂರ್ಯ, ಆಕಾಶ ಮಲ್ಲಿಗೆ)

ಈ ಕವಿತೆಯಲ್ಲಿ ಸೂರ್ಯನ ಸ್ವಗತವನ್ನು ಭಿನ್ನವಿಸಲಾಗಿದೆ. ಹಕ್ಕಿಗಳ ಚಿಲಿಪಿಲಿಯ ಸದ್ದಿನಿಂದ ಎಚ್ಚರಗೊಳ್ಳುವ ಸೂರ್ಯಸ್ತಮಾನ ಮೂಡಿಸುವ ಚಿತ್ರದಲ್ಲಿ ಉತ್ಕೃಷ್ಟ ಕಲಾಕೃತಿಯಾಗಿದ್ದಾನೆ. ಹಳ್ಳ-ಹೊಳೆ ಕಡಲುಗಳು ಅವನ ಕವನಗಳಾಗಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಸೂರ್ಯನೂ ಒಬ್ಬ ಬೆಂಕಿ ಕಾರ್ಖಾನೆಯ ಬಡ ಕಾರ್ಮಿಕನಾದಾಗ ಉರಿವ ಸೂರ್ಯನ ಬಗ್ಗೆ ಆಪ್ತ ಭಾವವನ್ನು ಮೂಡಿಸುತ್ತದೆ.

ನಾನು ಕಾದಿದ್ದೆ
ಚುಕ್ಕಿಗಳ ಎಣಿಸುತ್ತ
ಇರುಳುಗಳ ಗುಣಿಸುತ್ತ
ನಾನು ಕಾದಿದ್ದೆ ನನ್ನದೇನೂ ತಪ್ಪಿಲ್ಲ
(ಯಾಕೆ ಬರಲಿಲ್ಲ, ಆಕಾಶಮಲ್ಲಿಗೆ)

ಈ ಕವಿತೆಯು ಹಾರೈಕೆಯ ಒಲುಮೆಯನ್ನು ತೋರುತ್ತವೆ. ಗೆಳೆಯನ ಪ್ರೀತಿಯನ್ನು ನಿರಂತರ ಕಾಪಾಡುತ್ತಾರೆ. ಗೆಳೆಯನ ಅನುಸ್ಥಿತಿಯಲ್ಲಿ ತಾರೆ, ಸೂರ್ಯ, ಮೋಡ, ಗಾಳಿ, ಕಡಲು ಆ ಸ್ಥಾನವನ್ನು ತುಂಬಿವೆ. ಜಗತ್ತಿನ ಪಂಚಭೂತಗಳೊಂದಿಗೆ ಹೊಂದಿದ ತಾದಾತ್ಮ್ಯವನ್ನು

ಮುಡಿಯ ಸಿಂಗರಿಸಿದ
ಹೂವುಗಳು
ಕೆನ್ನೆಯ ನುಣಿಪಾಗಿಸಿದ
ಬಣ್ಣಗಳು
ಮೂಗನು ಸೆಳೆದ
ಸುಗಂಧಗಳು
(ಎಲ್ಲಿ ಹೋದವೋ, ಆಕಾಶ ಮಲ್ಲಿಗೆ)

ಸುಗಂಧ, ರಸ, ಸ್ವರ, ನೋಟ, ಮುಂತಾದ ಪಂಚೇಂದ್ರೀಯಗಳಿಗೆ ಸಂಬಂಧಪಟ್ಟ ಕ್ರಿಯೆಗಳು, ಕಾಲ, ಸಂದರ್ಭಾನುಸಾರಿಯಾಗಿ ಮನಸ್ಸಿನ ಮೇಲೆ ಪರಿಣಾಮ ಬೀರುವಂತಹವು ಎಲ್ಲಿ ಹೋದವೂ ಎಂಬುದಾಗಿ ಸವಿತಾ ಅವರು ಕನವರಿಸುತ್ತಾರೆ. ಇದುವರೆಗೆ ಇದ್ದ ಅವು ಈಗ ಹೋಗುವುದಾದರೂ ಎಲ್ಲಿಗೆ! ನೋಡಿದ್ದೆಲ್ಲವೂ ಕಾಣಿಸಬೇಕೆಂದಿಲ್ಲ. ಹಾಗೆಯೇ ಹೇಳುವುದೆಲ್ಲ ಕೇಳಬೇಕೆಂದಿಲ್ಲ. ಇವೆಲ್ಲ ಸರಿಯಾಗಿ ಇರಬೇಕಾದರೆ ಮೊದಲು ಮನಸ್ಸು ಅವುಗಳನ್ನು ಸ್ವೀಕರಿಸುವ ಸ್ಥಿತಿಯಲ್ಲಿರಬೇಕು. ಆದರೆ ಹೂವಗಳು, ಬಣ್ಣಗಳು, ಸುಗಂಧ, ರಸ, ಸ್ವರ ನೋಟ ಇವುಗಳಿಗೆ ಒತ್ತು ನೀಡುವ ಉದ್ದೇಶದಿಂದಲೇ ಕವಿ ಈ ತಂತ್ರ ಬಳಸಿರಬಹುದು. ಜೊತೆಗೆ ಪ್ರತಿ ಪದವೂ ಮುಗಿಯದಿರುವ ಸೂಚನೆಯನ್ನು ಕೂಡ ಸೂಚಿಸಲಾಗಿದೆ.

ಇಲ್ಲಿ ಬಯಸಿದಂತೆ
ಬದುಕಬಹುದು
ಇಚ್ಚೆಯಂತೆ ಸಾಯಬಹುದು
ಸುತ್ತಲೂ ಮರಗಳು
ಮರದೊಳಗೆ ಕಿಕ್ಕಿರಿದು
(ಕಾಡಿನಲ್ಲಿ, ಕಾಡುಲಿಲ್ಲಿ ಹೂವುಗಳು)

ಈ ಕವನದಲ್ಲಿ ಸವಿತಾರವರು ಕಾಡಿನಲ್ಲಿ ಇರುವಂತಹ ವಾತವರಣವನ್ನು ಕುರಿತು ಹೇಳಿದ್ದಾರೆ. ಮನುಷ್ಯ ಕಾಡಿನ ವಿಸ್ತಾರವನ್ನು ಅಳೆಯುವಂತಹ ಸಾಹಸವನ್ನು ಮಾಡಲು ಹೊರಟಿದ್ದಾರೆ. ತಾನು ಒಂಟಿತನದ ಅಗಾದತೆಯೊಂದಿಗೆ ಸಮೀಕರಣಗೊಂಡಿದೆ. ಒಂಟಿತನದ ಅನುಭವ ಕಾಡಿನ ಹೆಸರಿನ ಸಮುದ್ರತೆಯೊಂದಿಗೆ ಬೆಸೆದುಕೊಂಡಾಗ ತನ್ನಿಚ್ಚೆಯಂತೆ ಸಾವು ಮತ್ತು ಬದುಕು ಎರಡೂ ಸಮೀಕರಣಗೊಳ್ಳುತ್ತವೆ. ಪ್ರಾಣಿಗಳು ಯಾರಿಗೂ ತೊಂದರೆಯನ್ನು ಮಾಡುವುದಿಲ್ಲ ಆದರೆ ಅವುಗಳಿಗೆ ತೊಂದರೆಯನ್ನು ಮಾಡಿದರೆ ಅವು ಸುಮ್ಮನೆ ಬಿಡುವುದಿಲ್ಲ. ಮನುಷ್ಯನ ಜಾತಿ ಹಾಗಲ್ಲ, ಬೇರೆಯವರು ಸುಮ್ಮನೆ ಇದ್ದರು ಅವರ ಬಗ್ಗೆ ಮಾತನಾಡುವಂತಹ ಕೆಟ್ಟ ಗುಣವನು ಹೊಂದಿದ್ದಾನೆ. ಸವಿತಾರವರು ಪ್ರಕೃತಿಯಲ್ಲಿ ಇರುವಂತಹ ಮರ, ಹಕ್ಕಿ, ತಂಗಾಳಿ, ಜಿಂಕೆ, ಆನೆ, ಹುಲಿ, ತನ್ನ ಜೊತೆಗೆ ಮಾತನಾಡುತ್ತವೆ ಎಂಬ ಭ್ರಮೆಯಲ್ಲಿ ಈ ಕವನವನ್ನು ಬರೆಯಲಾರಂಭಿಸಿದ್ದಾರೆ. ತನಗೆ ಸಾಧ್ಯವಾಗದ ಕೆಲಸವನ್ನು ಮಾಡಬಹುದು ಎಂಬ ಕಲ್ಪನೆಯನ್ನು ಹೊಂದಿದೆ. ಕಾಡಿನಲ್ಲಿ ಇದ್ದರೆ ತನಗೆ ಬೇಕಾದಾಗ ಸಾಯಬಹುದು. ಅದನ್ನು ಯಾರು ಕೇಳುವುದಿಲ್ಲ ಎಂಬುದು ಲೇಖಕಿಯ ಅಭಿಪ್ರಾಯವಾಗಿದೆ.

ಮಳೆ ಎಂದರೆ
ಮೊಡ ಮಿಂಚು

ಗುಡುಗು ಸಿಡಿಲು

ಮಳೆ ಎಂದರೆ

ಹಳ್ಳ ಕೊಳ್ಳ

ನದಿ ಹೊಳೆ (ಮಳೆ, ಆಕಾಶ ಮಲ್ಲಿಗೆ)

ಈ ಕವನವು ಮಳೆಯ ವಿಶಿಷ್ಟತೆಯನ್ನು ಕುರಿತು ಹೇಳುತ್ತದೆ. ಮಳೆ ಬರುತ್ತದೆ ಎಂದರೆ ನಮಗೆ ಅದು ಮಿಂಚು, ಗುಡುಗು, ಸಿಡಿಲುಗಳ ಜೊತೆಗೆ ಮುನ್ನೆಚ್ಚರಿಕೆಯನ್ನು ನಿಡುತ್ತದೆ. ಮಳೆ ಬಂದರೆ ಹಳ್ಳ, ಕೊಳ್ಳ, ನದಿಗಳು ತುಂಬಿ ಪ್ರಾಣಿಗಳಿಗೆ ನೀರು ಕುಡಿಯುವುದಕ್ಕೆ ಸಹಾಯವಾಗುತ್ತದೆ. ಮನುಷ್ಯನಿಗೆ ಸಹಜವಾಗಿ ಮಳೆಯ ಜೊತೆಗೆ ಬಿಸಿ ಬಿಸಿ ಚಹಾ ಚುರುಮುರಿ ತಿನ್ನಬೇಕು. ಎನ್ನುವಂತಹ ಆಸೆ ಬರುತ್ತದೆ. ಕೆಲವೊಂದು ಮನೆಗಳಿಗೆ ಮಳೆ ಬರುವುದಕ್ಕೆ ಅಂತೆಯೇ ಮನೆಯ ಒಳಗೆ ಚಾವಣಿಯು ಇರುತ್ತದೆ. ಮಳೆ ಬರುವ ಜೊತೆಗೆ ಗಾಳಿಯು ಬರುತ್ತದೆ. ಆಗ ಗಿಡ ಮರಗಳ ಎಲೆಗಳು ಉದುರುವುದು ಬೇರುಗಳ ಸಮೇತ ಮರಗಳು ಉರುಳುವಂತಹದ್ದು, ಆದರೆ ಕೆಲವೊಂದು ಹಳ್ಳಿಗಳಿಗೆ ರಸ್ತೆಗಳು ಇರುವುದಿಲ್ಲ. ಆಗ ಅಲ್ಲಿರುವಂತಹ ಜನರಿಗೆ ಮಳೆ ಬಂದರೆ ಯಮಯಾತನೆ ಅನುಭವಿಸುತ್ತಾರೆ. ಮಳೆಯ ಜೊತೆಗೆ ಹಸಿರು ಬಂದರೆ ಕೆಸರು ಬರುತ್ತದೆ.

ಮಳೆ ಎಂದರೆ

ನನ್ನೊಳಗಿರುವ

ನಿನ್ನ ಪ್ರೀತಿಯ ಹಾಗೆ

ಕನಸು ಕಾಮನಬಿಲ್ಲು

ಮುಗಿದ ಬೇಸಿಗೆ

(ಅದೇ ಕವನ)

ಪ್ರಾಣಿಗಳು ವಿಶೇಷವಾದ ಗುಣವನ್ನು ಹೊಂದಿವೆ. ಮಳೆ ಬರುವಂತಹ ಸೂಚನೆ ಮೊದಲು ಪ್ರಾಣಿ ಸಂಕುಲಕ್ಕೆ ತಿಳಿಯುತ್ತದೆ. ಅದರಲ್ಲಿಯೂ ಕಪ್ಪೆಗೆ ಅದರ ವಾಸನೆಯು ಬೇಗ ತಿಳಿಯುತ್ತದೆ. ರೈತನಿಗೆ ಮಳೆಯ ಜೊತೆಗೆ ಬೆಳೆ ಬೆಳೆಬಂದರೆ ಕಳೆಯನ್ನು ತೆಗೆದು ಫಲವನ್ನು ತೆಗೆದುಕೊಳ್ಳುತ್ತಾನೆ. ಲೇಖಕಿಯು ಮಳೆಯ ಜೊತೆಗೆ ತಮ್ಮ ಪ್ರೀತಿಯನ್ನು ಹೋಲಿಸಿ ತಮ್ಮ ಕನಸುಗಳನ್ನು ಕಾಮನಬಿಲ್ಲಿಗೆ ಹೋಲಿಸಿ ಹೇಳಿದ್ದಾರೆ. ಹಾಗೆಯೇ ಮಳೆಯ ಜೊತೆಗೆ ಬೆಸುಗೆ ಬರುತ್ತದೆ ಎಂದು ಲೇಖಕಿಯು ಹೇಳುತ್ತಾರೆ.

ಮಳೆ ಬರಲಿ
ಆದರೆ
ಹಸಿರು ಹೊಲಗದ್ದೆಗಲನ್ನೂ
ರೈತರ ಸುಖ ನಿದ್ದೆಗಳನ್ನೂ
ಕಸಿದುಕೊಳ್ಳದಿರಲಿ
ಹುಲ್ಲಿನ ಛಾವಣಿಗಳನ್ನೂ
ಮಣ್ಣಿನ ಗೋಡೆಗಳನ್ನೂ
ಕೆಡವಿ ಹಾಕದಿರಲಿ
(ಮಳೆಬರಲಿ, ಆಕಾಶಮಲ್ಲಿಗೆ)

ಮಳೆ ಎಂಬುದು ಪ್ರತಿಯೊಂದು ಜೀವಸಂಕುಲಕ್ಕೆ ಎಷ್ಟು ಮುಖ್ಯಯೆಂಬುದು ಈ ಕವನ ತಿಳಿಸುತ್ತದೆ. ಮಳೆ ಬರಲಿ ಆದರೆ ನಮ್ಮ ರೈತನು ಬೆಳೆದಂತಹ ಬೆಳೆಯನ್ನು, ಅವನ ಸುಖ ನಿದ್ದೆಗಳನ್ನು ಕಸಿದುಕೊಳ್ಳದಿರಲಿ ನಮ್ಮ ರೈತನು ಕಷ್ಟಪಟ್ಟು ಸಾಲಗಳನ್ನು ಮಾಡಿ ಬೆಳೆಯನ್ನು ಹಾಕಿರುತ್ತಾನೆ. ಆದರೆ ಮಳೆ ಬಂದು ಅದು ನಾಶವಾಗಿ ಅವರ ಕನಸ್ಸಿಗೆ ತಣ್ಣಿರು ಎರಚಿದಂತಾಗುತ್ತದೆ. ನಮ್ಮ ಹಳ್ಳಿಗಳ ಮನೆಗಳು ಸುರಕ್ಷಿತವಾಗಿ ಇರುತ್ತವೆ ಎಂದು ಹೇಳುವುದಕ್ಕೆ ಆಗೋದಿಲ್ಲ. ಅವರ ಆರ್ಥಿಕ ವಯೋಮಾನಕ್ಕೆ ತಕ್ಕಂತೆ ಮನೆಯನ್ನು ನಿರ್ಮಿಸಿರುತ್ತಾರೆ. ಮಳೆ ಬಂದು ಅವುಗಳು ಕುಸಿದು ಅವರು ಬಿದಿಪಾಲಾಗುವಂತಹ ಪರಿಸ್ಥಿತಿ ಇರುವಂತಹ ಬೆಟ್ಟ ಬಯಲುಗಳಿಗೆ ಕೆರೆ, ಬಾವಿ, ಹಳ್ಳ-ಕೊಳ್ಳಗಳು ತುಂಬಿ ಬೇರೆ ಜೀವಿಗಳಿಗೆ ಅನುಕೂಲಕವಾಗಿರಲಿ ಎಂದು ಸವಿತಾ ಅವರು ಆಶಿಸುತ್ತಾರೆ. ನಮ್ಮ ಪ್ರಕೃತಿಯಲ್ಲಿ ಮಳೆ ಬಂದು ನಿಂತಾಗ ಕಾಮನಬಿಲ್ಲು ಮೂಡಿರುವಂತಹ ದೃಶ್ಯ ಅಲ್ಲಿ ಮೂಡಿಬಂದ ಬಣ್ಣಗಳು ಒಂದೊಂದು ಸಂಕೇತವನ್ನು ಸೂಚಿಸುತ್ತವೆ.

ಅವನ ಕಣ್ಣಲ್ಲಿ
ಬೆಟ್ಟಗಳು ಬೆಳೆಯುತ್ತಿದ್ದವು
ತಾರೆಯರು ಹೊಳೆಯುತ್ತಿದ್ದವು
ಬಣ್ಣಗಳು ಅರಳುತ್ತಿದ್ದವು
ಮೊಡಗಳು ಹೊರಳುತ್ತಿದ್ದವು
(ನಾನು ಮತ್ತು ಅವನು, ಕಾಡಿಲಿಲ್ಲಿ ಹೂವುಗಳು)

ಕನ್ನಡ ಕಾವ್ಯ ಪರಂಪರೆಯಲ್ಲಿ ಸೂರ್ಯ, ಚಂದ್ರ, ಭೂಮಿ, ಆಕಾಶ, ನದಿ, ಪರ್ವತ, ಪಕ್ಷಿಗಳು ಹೀಗೆ ಪ್ರಕೃತಿಯ ಚೈನತ್ಯಗಳೊಂದಿಗೆ ಒಂದಲ್ಲಾ ಒಂದು ಬಗೆಯಲ್ಲಿ ಸವಿತಾ ಅವರು ಉತ್ತಮ ಬಾಂಧವ್ಯ ಹೊಂದಿರುವುದು ಕಂಡುಬರುತ್ತದೆ. ಈ ಕವನದಲ್ಲಿ ಸವಿತಾ ಅವರು

ಗೆಳೆಯನನ್ನು ಪ್ರಕೃತಿಯೊಂದಿಗೆ ಸಮೀಕರಿಸಿ ಬರೆದಿದ್ದಾರೆ. ಒಬ್ಬರೊಳಗೊಬ್ಬರು ಕರಗುವ ಲೀನವಾಗುವ ರೀತಿ ಪ್ರಕೃತಿ ಮತ್ತು ಮನುಷ್ಯ ಪ್ರೀತಿಯ ಉತ್ಕಟತೆಯಿದೆ. ಗೆಳೆಯನ ಕಣ್ಣಲಿ ಪ್ರಕೃತಿಯ ವಿಸ್ಮಯಗಳೆಲ್ಲ ಗೋಚರಿಸುವಂತಹ ಪ್ರಸಂಗ ಲೇಖಕಿಯು ಅವನ ಕಣ್ಣಲಿ ಕಂಡ ಬೆಟ್ಟದೊಂದಿಗೆ ಏರಿ, ಮೊಡಗಳೊಂದಿಗೆ ಮಾತನಾಡಿ ಬಣ್ಣ, ಮಳೆಯಲ್ಲಿ ಮಿಂದು ಖುಷಿಪಡುವಂತಹ ರೀತಿ ತನ್ನನ್ನು ತಾನು ಇಲ್ಲವಾಗಿಸಿಕೊಂಡು ಅವನ ಕಣ್ಣೊಳಗೆ ಕರಗುವ ಕ್ರಿಯೆ ಪ್ರೀತಿಗಿರುವ ತನ್ಮತೆಯನ್ನು ಸೂಚಿಸುತ್ತದೆ. ಸವಿತಾ ಅವರು ತನ್ನ ಕಲ್ಪನೆಯಲ್ಲಿ ಅವರು ಮಳೆಯಾಗಿ ಜೊತೆಗೆ ಹೊಳೆಯಾಗಿದ್ದೇನೆ, ಇರುಳಾಗಿದ್ದೇನೆ ಎಂಬ ಭಾವನೆಯನ್ನು ಹೊಂದಿದ್ದಾರೆ.

ಕಿಕ್ಕಿರಿದಿದ್ದವು ಮರದಲ್ಲಿ ಹೂವುಗಳು
ಇಡೀ ಮರವು ಹೂವು
ಇಡೀ ಹೂದೋಟವು ಒಂದು ಹೂಗೊಂಚಲು
ಇಡೀ ಭೂಮಂಡಲವು ಒಂದು ಹೂ ಬುಟ್ಟಿಯು
ಹೂಭಾರಕೆ, ಪರಿಮಳಕೆ ಪಕ್ಕಾಗಿ
ಹೂವಾಡಗಿತ್ತಿಯೂ ತೂಗಿರಲು
(ಹೂವುಗಳು, ಆಕಾಶಮಲ್ಲಿಗೆ)

ಸವಿತಾ ನಾಗಭೂಷಣ ಅವರ ಈ ಕವಿತೆಯಲ್ಲಿ ಭಿನ್ನವೆಲ್ಲವೂ ಅಭಿನ್ನವಾಗಿ ಗೋಚರಿಸುವ ಪರಿ ಕವಿಯ ವಿಸ್ಮಯ ನೋಟದ ಫಲ ಮತ್ತನಾಗಿ ಮೈದುಂಬಿ ಮಲಗಿದವನು ಯಾರೆಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಪ್ರಕೃತಿಯೊಳಗಿನ ಚೈತನ್ಯವಾಗಿ ಒಮ್ಮೆ ಗುರುತಿಸಬಹುದು. ಪ್ರಕೃತಿಯನ್ನು ಹೆಣ್ಣಿಗೆ ಹೋಲಿಸುವುದರಿಂದ ಹೂವಿನ ಮಕರಂದ ಆಸ್ವಾದಿಸುವ ಪ್ರಿಯತಮನ ರೂಪವೂ ಆಗಿರಬಹುದು. ಇಂತಹ ಪ್ರಕೃತಿ ವಿಸ್ಮಯವನ್ನು ಗ್ರಹಿಸಬೇಕೆಂಬುದೇ ವಿನಃ ಅದರ ನಿಗೂಢಗಳನ್ನು ಅರ್ಥೈಸಲಂತೂ ಸಾಧ್ಯವಿಲ್ಲ. ಸವಿತಾ ಅವರ ಭಾಷೆಯ ವೈಖರಿಯನ್ನು ಹಿಡಿದಿಡುವ ತವಕ. ಪ್ರಕೃತಿಯ ಆಗಾಧ ಶಕ್ತಿಯನ್ನು ಪರೋಕ್ಷವಾಗಿ ಹೇಳಿದ್ದಾರೆ.

ಮಿಂಚು ಸಂಚರಿಸುವುದಂತೆ
ಬೇರೆ ಆವರಿಸುವುದಂತೆ
ಬಿರುಗಾಳಿ ಬೀಸುವುದಂತೆ
ಸಮುದ್ರ ಉಕ್ಕುವುದಂತೆ
ಜಲಪಾತ ಧುಮ್ಮಿಕ್ಕುವುದಂತೆ
ಭುವಿ ಕಂಪಿಸುವುದಂತೆ

ಸಹಸ್ರಾರು ಸಿಡಿಯುವುದಂತೆ
(ಪ್ರೇಮಪುಷ್ಪ, ಕಾಡುಲಿಲ್ಲಿ ಹೂವುಗಳು)

ಪ್ರಕೃತಿಯ ನಿಯಮಗಳು ತಡೆಯಲು ಯಾರಿಂದ ಸಾಧ್ಯವಿಲ್ಲ. ಸವಿತಾ ಅವರು ನಿಸರ್ಗದೊಂದಿಗೆ ಪರಸ್ಪರ ಕೊಡು-ಕೊಳ್ಳುವ ಪ್ರಕ್ರಿಯೆಯಲ್ಲಿ ನಿಸರ್ಗ ವ್ಯಾಪಾರ ಮತ್ತು ಮನುಷ್ಯ ಬದುಕನ್ನು ಬೇರೆ ಬೇರೆಯಾಗಿಸಿ ನೋಡದ ತನ್ನಷ್ಟಕ್ಕೆ ತಾನು ಮಾತನಾಡಿಕೊಳ್ಳುವ ರೀತಿಯನ್ನು ಕವಿಯ ಕಲ್ಪನೆಯನ್ನು ಪ್ರಕೃತಿಯಲ್ಲಿ ವಾತಾವರಣಗಳ ಆಯಾ ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಹೊಂದುತ್ತಾ ಹೋಗುತ್ತದೆ. ಸಾಮಾನ್ಯವಾಗಿ ಹೊಲಗದ್ದೆಗಳಲ್ಲಿ ತಮ್ಮ ಬೆಳೆಗಳಿಗೆ ದೃಷ್ಟಿಯಾಗಬಾರದು ಎಂದು ಬೆದರು ಬೊಂಬೆಗೆ ಹುಲ್ಲು ತುಂಬಿ ಮನುಷ್ಯನ ರೀತಿಯಲ್ಲಿ ಅಲಂಕಾರ ಮಾಡಿರುತ್ತಾರೆ. ಆದರೆ ಎಷ್ಟೇ ಅಲಂಕಾರ ಮಾಡಿದರೂ ಅದಕ್ಕೆ ಉಸಿರು ತುಂಬಲು ಸಾಧ್ಯವಿಲ್ಲ. ಅದು ಸಜೀವಗೊಳಿಸಬಹುದು, ನಿರ್ಜೀವ ಮಾಡಲು ಸಾಧ್ಯವಿಲ್ಲ. ತಂಗಾಳಿಯ ಅಲೆಯೊಳಗೆ ತೇಲಿಬರುತಿದೆ ಪರಿಮಳಕೆ ಯಾವುದೇ ವಾಸನೆ, ರುಚಿ, ಬಣ್ಣವಿಲ್ಲ. ಅದನ್ನು ಕಣ್ಣಿಗೆ ಕಾಣಿಸಿದ ರೀತಿಯಲ್ಲಿ ಅದನ್ನು ವಿಸ್ತರಿಸಬಹುದು ಎಂದು ಪ್ರಕೃತಿಯನ್ನು ವಿಸ್ತರಿಸುತ್ತಾ ಹೋಗಿದ್ದಾರೆ.

ಅಧ್ಯಾಯ – ಐದು

ಸವಿತಾ ನಾಗಭೂಷಣ ಅವರ ಸಾಮಾಜಿಕ ಗ್ರಹಿಕೆಯ ನೆಲೆಗಳು

ಅಧ್ಯಾಯ – ೫

ಸವಿತಾ ನಾಗಭೂಷಣ ಅವರ ಸಾಮಾಜಿಕ ಗ್ರಹಿಕೆಯ ನೆಲೆಗಳು

ಸವಿತಾ ನಾಗಭೂಷಣ ಅವರ ಕಾವ್ಯ ಸಮಾಜಮುಖಿ ಹಾಗೂ ಜನಮುಖಿಯಾಗಿರುವಂತಹವು. ಸಮಾಜಮುಖಿಯಾದ ಇವರ ಕಾವ್ಯಗಳಲ್ಲಿ ಸಾಮಾಜಿಕ ತುಡಿತ ಕಂಡುಬರುತ್ತದೆ. ಇವರು ಎಪ್ಪತ್ತು–ಎಂಬತ್ತರ ದಶಕದ ಭಿನ್ನ ನೆಲೆಗಳನ್ನು ತಮ್ಮ ಕಾವ್ಯಗಳಲ್ಲಿ ಅಭಿವ್ಯಕ್ತಿಗೊಳಿಸುತ್ತ ಬಂದಿದ್ದಾರೆ. ಸಮಾಜದಲ್ಲಿನ ಲಿಂಗ ಮತ್ತು ಜಾತಿ ತಾರತಮ್ಯದಂತಹ ಪ್ರಶ್ನೆಗಳನ್ನು ತಮ್ಮ ಕಾವ್ಯದ ವಸ್ತುವಾಗಿದ್ದುಕೊಂಡು ಬರೆಯಲಾರಂಭಿಸಿದರು. ಇವರ ಕಾವ್ಯ ರಚನೆಗೆ ಸ್ತ್ರೀವಾದ, ಲೋಹಿಯಾವಾದ, ಸಮತಾವಾದ, ಸಮಾಜವಾದಗಳು ಪ್ರೇರಣೆಯಾದವು. ಇವರ ಕಾವ್ಯ ಸೈದ್ಧಾಂತಿಕ ಆಯಾಮಗಳಿಂದ ರೂಪುಗೊಂಡಿವೆ. ಸವಿತಾ ಅವರ ಕಾವ್ಯಗಳಲ್ಲಿ ಸಾಮಾಜಿಕ ಸಂವೇದನೆ ಹಾಗೂ ವ್ಯಕ್ತಿ ಸಂವೇದನೆಗಳು ಮುಖ್ಯವಾಗಿವೆ. ಇವರ ಕಾವ್ಯಗಳಲ್ಲಿ ಶೂದ್ರ, ದಲಿತ, ಮುಸ್ಲಿಂ, ರೈತ, ಸ್ತ್ರೀ ಸಂವೇದನೆಗಳು ಪ್ರಮುಖ ನೆಲೆಯಲ್ಲಿ ಅಭಿವ್ಯಕ್ತಿಗೊಂಡಿರುವುದು ಕಂಡುಬರುತ್ತದೆ.

ಕೋಮುವಾದ, ಜಾತಿ ಅಸಮಾನತೆ, ಲಿಂಗಭೇದ, ಜಾತಿ ವೈಷಮ್ಯ, ತಾರತಮ್ಯಗಳು ಸವಿತಾ ಅವರ ಕಾವ್ಯಗಳಲ್ಲಿ ಅಭಿವ್ಯಕ್ತಿಗೊಂಡಿವೆ. ಆಧುನಿಕತೆ, ನಗರ ಬದುಕು, ಜಾಗತೀಕರಣ ಇವರ ಸಂವೇದನೆಗಳಲ್ಲಿ ಫಲಿಸತೊಡಗಿವೆ. ಪ್ರತಿಮೆ, ರೂಪಕ, ಬಂಧಗಳು ಸಡಿಲಗೊಂಡು ವಾಚ್ಯತೆ, ರೂಕ್ಷತೆಯ ಮನೋಭಾವ ಇವರ ಅಭಿವ್ಯಕ್ತಿಯಲ್ಲಿ ಕಂಡುಬರುತ್ತವೆ. ಇವರ ಕಾವ್ಯ ಸ್ವಗತ, ವಿಷಾದ, ವಿನೋದ, ವ್ಯಂಗ್ಯದ ವಿಶ್ಲೇಷಣೆಯ ಜಾಡು ಹಿಡಿಯಿತು. ಇಲ್ಲಿ ಇವರು ತಮ್ಮ ಸೃಜನಶೀಲತೆಯನ್ನು ವ್ಯಕ್ತಪಡಿಸಿರುವುದು ತಿಳಿದುಬರುತ್ತದೆ. ಇಲ್ಲಿ ವ್ಯಕ್ತಿ ಪ್ರಜ್ಞೆ, ಸಮಷ್ಠಿ ಪ್ರಜ್ಞೆಯಂತೆ ರೂಪಗೊಂಡಿತು. ಇವರ ಅನುಭವ ಸಮಷ್ಠಿಯೆನಿಸಿದರೂ ಅಭಿವ್ಯಕ್ತಿ ವೈಯಕ್ತಿಕ ದಾಟಿಯನ್ನು

ಪಡೆದುಕೊಂಡಿದೆ. ಲೇಖಕಿಯ ದೃಷ್ಟಿಕೋನ ಕುಟುಂಬದಲ್ಲಿ ಪುರುಷ ಪ್ರಾಮುಖ್ಯತೆಯನ್ನು ಮೀರಿ ಸ್ತ್ರೀಯರಿಗೂ ಪುರುಷನಷ್ಟೇ ಪ್ರಾಮುಖ್ಯತೆ ಇದೆ ಎಂಬುದನ್ನು ಪ್ರತಿಪಾದಿಸುವುದು ಕಂಡುಬರುತ್ತದೆ. ಈ ನೆಲೆಯಲ್ಲಿ ಸವಿತಾ ಅವರು ಉದಾತ್ತ ಅರ್ಧನಾರೀಶ್ವರ ಕಲ್ಪನೆಯನ್ನು ಮರೆಗೆ ಸರಿಸಿದರು. ಇದಕ್ಕೆ ಕಾರಣ ಇಲ್ಲಿ ಹೆಣ್ಣಿಗೆ ಪುರುಷನಷ್ಟು ಪ್ರಾಮುಖ್ಯತೆ ನೀಡಿಲ್ಲ ಎಂಬುದಾಗಿದೆ. ಸವಿತಾ ಅವರ ಕಾವ್ಯದ ವಸ್ತು, ಭಾವ, ಭಾಷೆ ಗ್ರಹಿಕೆಯ ಮನೋಧರ್ಮ ಸಂಕುಚಿತವಾಗಿದೆ. ಇವರು ಸಮಾಜದಲ್ಲಿನ ಆದರ್ಶ, ತತ್ವ, ನೈತಿಕತೆಗಳು ವ್ಯಂಗ್ಯದಿಂದ ನೋಡಲ್ಪಟ್ಟರೂ, ಕಾವ್ಯದ ಮೇಲು ಧ್ವನಿ ಕಾಣೆಯಾಗಿ ಆವರಿಸಿತು. ಕಾವ್ಯಶಿಲ್ಪ, ಆಕೃತಿ, ಸ್ವರೂಪ, ಧ್ವನಿಗಳು ಅಗತ್ಯಕ್ಕೆ ತಕ್ಕಂತೆ ರೂಪುಗೊಳ್ಳತೊಡಗಿದವು. ಸವಿತಾ ಅವರ ಕಾವ್ಯ ಲೋಕದ ವಾಸ್ತವ ಭಿತ್ತಿಯಾಗಿದೆ. ದೇಶಿಯತೆ ಮತ್ತು ಪ್ರಾದೇಶಿಕತೆಯ ಬಿರುಕು ವ್ಯಕ್ತಿ ಪ್ರಜ್ಞೆಯನ್ನು ರೂಪಿಸತೊಡಗಿತು. ಇದು ಭಿನ್ನ ಚಿಂತನೆಗಳಿಗೆ ಭಿನ್ನ ಸಂವೇದನೆಗೆ ದಾರಿ ನೀಡಿತು. ಕಥನ ಪರಂಪರೆ ಕಾವ್ಯದ ಪರಿಧಿಗೆ ಕಾಲಿಟ್ಟಿತು. ಇಲ್ಲಿ ಜಾತಿ ವ್ಯವಸ್ಥೆ ಮತ್ತು ಪ್ರಜ್ಞೆಯನ್ನು ಕಾಡತೊಡಗಿತು. ಇವರ ಕಾವ್ಯಗಳಲ್ಲಿ ಪುರುಷರು ಆದರ್ಶಗಳನ್ನು ತೀವ್ರವಾಗಿ ಆಳವಡಿಸಿಕೊಂಡರೆ, ಮಹಿಳೆ ತನ್ನ ಬಿಡುಗಡೆಯ ಅಸ್ತಿತ್ವವನ್ನು ಹುಡುಕಾಡತೊಡಗಿದಳು.

ಕುಟುಂಬವನ್ನು ತೀವ್ರ ನಿರೀಕ್ಷಣೆಯಿಂದ ಪರಿಭಾವಿಸಿದ ದೃಷ್ಟಿಕೋನ ದಾಖಲಾಯಿತು. ಕುಟುಂಬ ಹೇಳುವ ಸುಖ ತನ್ನ ಅನಿಸಿಕೆಯ ಸುಖಕ್ಕಿಂತ ಭಿನ್ನ ಎಂಬ ಭಾವ ನೆಲೆನಿಂತಿತು. ಕುಟುಂಬ, ಗಂಡ, ಗಂಡು ಅನ್ಯವಾಗತೊಡಗಿತು. ಮೊದಲೇ ಅಂತರ್ಮುಖಿಯಾಗಿದ್ದ ಸ್ತ್ರೀ ಕಾವ್ಯದ ಅಭಿವ್ಯಕ್ತಿಯಲ್ಲಿ ಮತ್ತಷ್ಟು ಏಕಾಂಗಿಯಾದಳು. ತರ್ಕ ತಲೆಹಾಕಿ ನೀತಿ, ಅನೀತಿಗಳ ಪಥ್ಯವಾಗಿದ್ದ ಕಾವ್ಯ ಮಹಿಳೆಯಲ್ಲಿ ವ್ಯಕ್ತಿ ಶೋಧಕ್ಕೆ ಇಳಿಯಿತು. ನಂಬಿಕೆ, ಅನುಮಾನ, ಕೂಡಿಕೆ ಸಂಬಂಧಗಳು ವಿಶ್ಲೇಷಣೆಗೆ ಒಳಗಾದವು. ಭೋಗ, ಸಂಭೋಗ ಮೀರಿದ ಅನುಭೂತಿಗೆ ಹೆಣ್ಣು ಪರಿತಪಿಸಿದಳು. ಸವಿತಾ ಅವರ ಕುಟುಂಬ ಧರ್ಮ, ವ್ಯಕ್ತಿ ಧರ್ಮ, ದಾಂಪತ್ಯ ಧರ್ಮಗಳು ವಿಮರ್ಶೆಗೊಳಪಟ್ಟವು.

ಲಿಂಗ ಅಸಮಾನತೆ

ಇದು ಸವಿತಾ ಅವರ ಅತ್ಯಂತ ಸ್ತ್ರೀಪರ ಕಾಳಜಿಯ ಕವಿತೆಯಾಗಿದೆ. ಇಲ್ಲಿ ಅವರು ಲಿಂಗತಾರತಮ್ಯವನ್ನು ತಮ್ಮದೆ ಆದ ನೆಲೆಯಲ್ಲಿ ಚಿತ್ರಿಸಿದ್ದಾರೆ.

> ಸಂಭ್ರಮವಿಲ್ಲ, ಸಡಗರವಿಲ್ಲ
> ಮನೆಯೊಳಗೆ ಸೂತಕದ ವಾತಾವರಣ
> ಆಶೆಯಂತೆಯೆ

ಬತ್ತಿ ಹೋಗಿದೆ ಎದೆ ಹಾಲು
ಹಡೆದವ್ವ ಕೊರಗುವಳು
(ತಂಗಿ ಹುಟ್ಟಿದಳು, ಕಾಡುಲಿಲ್ಲಿ ಹೂವುಗಳು)

ತಂಗಿ ಹುಟ್ಟಿರುವುದರಿಂದ ಅಂದು ಮನೆಯಲ್ಲಿ ಸೂತಕದ ವಾತಾವರಣವಿದೆ. ಅತ್ಯಂತ ದುಃಖಿತಳಾಗಿರುವ ತಾಯಿಗೆ ಎದೆಹಾಲು ಬತ್ತಿ ಹೋಗಿದೆ. ಮಿಠಾಯಿ ತಂದು ಹಂಚುವ ಸಂತಸ ತಂದೆಗೂ ಇಲ್ಲದಿರುವುದರಿಂದ ಆತ ಅಂಗಡಿಯಲ್ಲಿ ಅದು ಖಾಲಿಯಾಗಿದೆ ಎಂಬ ನೆಪ ಹೇಳುತ್ತಿದ್ದಾನೆ. ಮಗುವಿಗೆ ಜೋಲಿ ಕಟ್ಟಲು ಮೊಳೆಯೇ ಸಿಗುತ್ತಿಲ್ಲ. ಊರಲ್ಲಿ ಯಾರ ಮನೆಯಲ್ಲಿ ಮಗುವಾದರೂ ಚಂದವಾಗಿ ಪದ ಕಟ್ಟಿ ಹಾಡುವ ಅಜ್ಜಿಗೆ ಇವತ್ತು ಗಂಟಲು ಕಟ್ಟಿ ಹೋಗಿದೆ. ಇಲ್ಲಿ ಹೆಣ್ಣಿನ ಬಗೆಗಿನ ಸೂತಕ ಭಾವವನ್ನು ಹೊಂದಿರುವ ಸಾಮಾಜಿಕ ದೃಷ್ಟಿಕೋನವನ್ನು ಕವಿಯತ್ರಿಯು ಮಾರ್ಮಿಕವಾಗಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ.

ಬಂಧುಗಳಿಗೆ ಮಗುವನ್ನು ಬಂದು ನೋಡುವಂತಹ ಉತ್ಸಾಹವಿಲ್ಲ. ಇವುದಕ್ಕೆ ಪ್ರಮುಖ ಕಾರಣ ಮನೆಯಲ್ಲಿ ಗಂಡು ಜನ್ಮ ತಾಳಲಿಲ್ಲ ಎಂಬುದು ಒಂದು ಕಡೆಯಾದರೆ, ಹೆಣ್ಣು ಹುಟ್ಟಿದ ಮನೆಗೆ ಭಾರ, ದರಿದ್ರ ಎನ್ನುವ ತಾರತಮ್ಯ ಭಾವವಾಗಿದೆ ಎಂಬುದನ್ನು ಸವಿತಾ ಅವರು ಇಲ್ಲಿ ಎತ್ತಿಹಿಡಿದಿದ್ದಾರೆ.

ದೂರದಿಂದಲೇ ಶುಭ ಕೋರಿದ್ದಾರೆ
ಬಂಧುಗಳು
ಯಾರೊಬ್ಬರೂ ಸೂಚಿಸಿಲ್ಲ
ಮಗುವಿಗೆ ಹೆಸರು
(ಅದೇ ಕವನ)

ಅವರು ದೂರದಿಂದಲೇ ಶುಭ ಹಾರೈಸಿದ್ದಾರೆ. ಮಗುವಿಗೆ ಹೆಸರಿಡುವುದಕ್ಕೂ ಯಾರಿಗೂ ಮನಸ್ಸಿಲ್ಲ. ಹೆಣ್ಣುಮಗು ಸಾಕಮ್ಮ ಸಾಕು ಸಾಕು ಎಂಬ ಉದ್ಗಾರವೇ ಹೆಸರಾಗಿ ಮಗುವನ್ನು ಅಲಂಕರಿಸಿದೆ. ಪಾಪ ಆ ಮಗುವಿಗೇನು ಗೊತ್ತು ಈ ಜನರ ತಿರಸ್ಕಾರ ಅನಾದರ ಅದರ ನುಣ್ಣನೆಯ ಸಣ್ಣ ದನಿ ಜಡ ಜಗತ್ತನ್ನು ಭೇದಿಸುತ್ತಿದೆ. ಈಗ ಅವರ ಅಕ್ಕ ಅದು ಇನ್ನೂ ಚಿಕ್ಕದು ಅದು ಹಿಡಿಯಷ್ಟಿದೆ. ಮುಡಿಯಷ್ಟಿರುವ ತಂಗಿಯನ್ನು ಅದು ಪ್ರೀತಿಯಿಂದ ತಬ್ಬಿಕೊಳ್ಳುತ್ತದೆ. ಅಭಯ ನೀಡುತ್ತದೆ. ಇದು ಸವಿತಾ ಅವರ ಅತ್ಯುತ್ತಮ ಕವಿತೆಗಳಲ್ಲೊಂದು. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಸಂಪ್ರದಾಯದ ಗಾದೆಯನ್ನು ಈ ಕವಿತೆಯು ಮುರಿಯುತ್ತಿದೆ. ಹೆಣ್ಣಿಗೆ ಹೆಣ್ಣೇ ಅಭಯ ಎಂಬ ಸೋದರಿ ಭಾವವನ್ನು ಪ್ರತಿಪಾದಿಸುವ ಆಧುನಿಕ ಸ್ತ್ರೀವಾದವನ್ನು ಈ ಕವಿತೆ ರೂಪಕಗಳಲ್ಲಿ ಹೊಸೆಯುತ್ತಿದೆ.

ಹಿಡಿಯಷ್ಟಿರುವ ತಂಗಿಯನು
ಮುಡಿಯಷ್ಟಿರುವ ಅಕ್ಕ
ಅಕ್ಕರೆಯಿಂದ ಅಪ್ಪುವಳು
ಅಭಯ ನೀಡುವಳು
(ಅದೇ ಕವನ)

ಬಹಳ ಹಿಂದಿನಿಂದಲೂ ಗಂಡು ಹೆಣ್ಣು ಎಂಬ ಭೇದ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಅನಾರೋಗ್ಯಕರ ಹಾಗೂ ಅವೈಜ್ಞಾನಿಕ ಸಂಗತಿಯದು. ಹೆಣ್ಣನ್ನು ಹುಟ್ಟಿದಾಗಲೇ ಪ್ರತಿಕ್ರಿಯಿಸುವ ತಂದೆ ಹಾಗೂ ಬಂಧು ಬಳಗದವರ ರೀತಿ ಅಮಾನವೀಯವಾದುದು. ಇದನ್ನು ವಿಡಂಬಿಸುವ ಕವನ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ಅಸಹಾಯಕಳಾದ ತಾಯಿ ಹಾಗೂ ಅಭಯ ನೀಡುವ ಅಕ್ಕನ ನಡವಳಿಕೆಗಳನ್ನು ಧ್ವನಿ ಪೂರ್ಣವಾಗಿ ಚಿತ್ರಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ತಾರತಮ್ಯದಿಂದ ತಕ್ಕ ಅವಕಾಶಗಳಿಲ್ಲದೆ, ಅವಮಾನಕ್ಕೆ ಗುರಿಯಾಗುತ್ತಿರುವುದು ಒಂದು ಸಾಮಾಜಿಕ ದುರಂತ. ಹೆಣ್ಣನ್ನು ಅಲಕ್ಷಿಸುವ ಸಮಾಜ ಅವಿವೇಕಿಯಾದುದು ಎಂಬ ಆಶಯ ಈ ಕವನದಲ್ಲಿ ಸಮರ್ಥವಾಗಿ ನಿರೂಪಿತವಾಗಿದೆ. ಈ ಕವಿತೆಯ ಕೊನೆಯ ಸಾಲು ಹೆಣ್ಣಿಗೆ ಹೆಣ್ಣೇ ರಕ್ಷಣೆ ನೀಡಿ ಸಹಾನುಭೂತಿಯ ಶಕ್ತಿಯಾಗಬೇಕಾದ ಅನಿವಾರ್ಯತೆಯನ್ನು ಧ್ವನಿಸುತ್ತದೆ.

ಹೊತ್ತಾರೆ ಸೂರ್ಯನ ಕಿರಣಗಳು ಮುತ್ತಿಡಲು
ಹಾಳು ಹಕ್ಕಿಯ ಹಾಡು ಕಿವಿ ತುಂಬಲು
ಕಿಸುರುಗಣ್ಣನ್ನು ತೆರೆದು ಸೆಟದ ಹೂ ಮೈಯ ಮುರಿದು
ಆಕಳಿಸುವಳು ನಮ್ಮ ಪುಟ್ಟ ಕೆಂಚವ್ವ
(ಕಾಡುಲಿಲ್ಲಿ ಹೂವುಗಳು)

ಪುಟ್ಟ ಕೆಂಚವ್ವ ಕವಿತೆಯಲ್ಲಿ, ಹಳ್ಳಿಯ ಹೆಣ್ಣುಮಗಳು ಸಂಸಾರದ ಜವಾಬ್ದಾರಿಯನ್ನು ಹೊತ್ತು ಜೀವಿಸುವ ರೀತಿ,, ಜವಾಬ್ದಾರಿಯಿಂದ ವಂಚಿತರಾದ ತಂದೆ, ತಾಯಿಗಳು, ಪ್ರೀತಿಯಿಂದ ವಂಚಿತರಾದ ಮಕ್ಕಳ ಜೀವನ ನಡೆಸುವ ರೀತಿ ಮುಖ್ಯವಾದುದು. ಹೆಣ್ಣಾದವಳು ಎಲ್ಲವನ್ನು ಸಹಿಸಿ ಜೀವನಾಭಿಮುಖಕ್ಕೆ ತುಡಿಯುವ ಜೀವ ಎಂಬುದನ್ನು ಇಲ್ಲಿ ತನ್ನ ವೈಯಕ್ತಿಕ ಅಳಲುಗಳನ್ನು ತೋಡಿಕೊಳ್ಳುವಷ್ಟು ಅಲ್ಲದೆ ಲೋಕದ ವಿಸಂಗತಿಗಳ ಬಗ್ಗೆ ತನ್ನ ನಂಬಿಕೆಯನ್ನು ಸಲ್ಲಿಸುವಾಗ ಕೂಡ ಒದಗಬಹುದಾದ ಒಂದು ಆತ್ಮ ಸಂಗಾತಿಯಾಗಿದೆ.

ಅಪ್ಪನ ಕುಡಿತ ಜೂಜಿಗೆ ಬೆದರುವಳು
ಅವ್ವ ದಮ್ಮು ಗೊರಲಿಗೆ ನೋಯುವಳು
ಸಿಟ್ಟಿನಲ್ಲಿ ಕಟ್ಟಿರುವೆ, ಚಿಟ್ಟೆ ನೆಗೆಯವಳು
ದಿಟ್ಟ ನಡೆಯುವಳು ನಮ್ಮ ಪುಟ್ಟ ಕೆಂಚವ್ವ
(ಅದೇ ಕವನ)

ಜೀವನದ ಅನನ್ಯ ಅನುಭವ ಮತ್ತು ಮಾನಸಿಕ ಸ್ಥೈರ್ಯದ ಗಟ್ಟಿತನ ಈ ಪುಟ್ಟ ಹುಡುಗಿಯಲ್ಲಿ ಕಂಡುಬರುತ್ತದೆ. ಇಂದಿಗೂ ಗ್ರಾಮೀಣ ಬದುಕಿನ ತೀವ್ರ ಹಂಬಲ ಯಾವ ರೀತಿಯದು ಎಂಬುದು ಈ ನಮ್ಮ ಕೆಂಚವ್ವ ಹೊಲದಲ್ಲಿ ಸಂಜೆಯ ತನಕ ದುಡಿದು ಅಕ್ಕಿ ಮೆಣಸಿನಕಾಯಿ ಪಡೆದು ತಮ್ಮನ ಬಾಯ ಚಪಲಕ್ಕೆ ಎದ್ದು ಕಡಲೆಯ ಕದ್ದು ತಂದುಕೊಡುವಳು ನಮ್ಮ ಪುಟ್ಟ ಕೆಂಚವ್ವ, ದಾರಿಯಲ್ಲಿ ಅಂತರಗಟ್ಟಮ್ಮನಿಗೆ ಕೈ ಮುಗಿವಳು. ಹೊಟ್ಟೆ ಬಟ್ಟೆಗಿಟ್ಟು ಮಡುಗು ಎಂದು ಬೇಡುವಳು. ಹಕ್ಕಿಗೆ ತನ್ನ ಕೆಲಸ ಮುಗಿದ ಮೇಲೆ ತನ್ನ ಗೂಡಿಗೆ ಮರಳುವಂತೆ ನಮ್ಮ ಕೆಂಚವ್ವ, ಈ ಕವಿತೆಯಲ್ಲಿ ನಮ್ಮ ಕೆಂಚವ್ವ ಹೂವಿನ ವಾಸನೆ ಹಿಡಿದು ಹೆಸರು ಹೇಳುವಂತಹ ಬುದ್ಧಿವಂತೆ. ಹಕ್ಕಿಗಳ ಕೂಗನಳೆದು ಅಣಕಿಸುವಂತಹ ತುಂಟತನ ಎರೆಮಣ್ಣನ್ನು ಕಲಸಿ ಬೊಂಬೆಯ ಮಾಡುವಳು ಬೊಂಬೆಗೂ ಜೀವ ಕೊಡುವಂತಹ ನಂಬಿಕೆ.

ಚೂರು ಅಂಗಳವನೆ ಪರಪರ ಕೆರೆದು
ಒಡೆದ ಗಡಿಗೆಯ ಸೊಂಟಕ್ಕೆ ಕರೆದು
ಊರ ಗಟ್ಟಿಗಿತ್ತಿಯರೊಡನೆ ಗುದ್ದಾಡಿ
ನೀರು ತರುವಳು ನಮ್ಮ ಪುಟ್ಟ ಕೆಂಚವ್ವ
(ಅದೇ ಕವನ)

ಈ ಕವಿತೆಯು ಒಬ್ಬ ಪುಟ್ಟ ಹುಡುಗಿಯು ತಮ್ಮ ಮನೆಯ ಜವಾಬ್ದಾರಿಯನ್ನು ಹೇಗೆ ನಿಭಾಯಿಸುವಳು, ಇವಳು ಹುಲಿಯನಿಗೆ ಹಳ್ಳದಲಿ ಮಜ್ಜನ ಮಾಡಿಸುವಳು. ಭೂತಾಯಿ ಮೀನ ಕರುಬೆರಳಲಿ ಕುಣಿಸುವಳು ಗಟ್ಟಿ ಗುಂಡಿಗೆಯವಳು, ಈ ನಮ್ಮ ಪುಟ್ಟ ಕೆಂಚವ್ವ, ಇಲ್ಲಿ ಹೆಣ್ಣು ಪುರುಷನಿಗಿಂತ ಯಾವುದರಲ್ಲಿಯೂ ಕಡಿಮೆಯಲ್ಲ ಎಂಬುದನ್ನು ಸವಿತಾ ಅವರ ಈ ಕವಿಯಲ್ಲಿ ವ್ಯಕ್ತಪಡಿಸಿದ್ದಾರೆ.

ನಾನು ತಾಯಿಯಲ್ಲ
ನಾನು ಹೆಂಡತಿಯಲ್ಲ
ನಾನು ಮಗಳಲ್ಲ

ತೊಲಗಾಚೆ
ಇನ್ನು ನಾ ನಿನ್ನ
ಪೊರೆವವಳಲ್ಲ
(ಕಾಡುಲಿಲ್ಲಿ ಹೂವುಗಳು)

ಹೆಣ್ಣಿಗೆ ನಮ್ಮಲ್ಲಿ ಅನೇಕ ಸ್ಥಿತಿಗಳನ್ನು ಮತ್ತು ಗುಣಗಳನ್ನು ಆರೋಪಿಸಲಾಗಿದೆ. ಆಕೆ ತಾಯಿ, ಮಗಳು, ಹೆಂಡತಿ ಇತ್ಯಾದಿಯಾಗಿ ಗಂಡಸರ ಜೊತೆಗೆ ಮಾತ್ರ ಅವಳಿಗೆ ಅಸ್ತಿತ್ವ ಅವಳಿಗೆ ಇಲ್ಲವೆನ್ನುವ ಪುರುಷರ ನಿರ್ವಚನಗಳನ್ನು ಈಕೆ ನಿರಾಕರಿಸುತ್ತಾಳೆ. ಹೆಣ್ಣಿಗೆ ಅಸ್ತಿತ್ವ ಮಾತ್ರವಲ್ಲ ಆಕೆಯನ್ನು ಮಮತೆ, ವಾತ್ಸಲ್ಯ, ಶಾಂತಿ, ಇತ್ಯಾದಿಯಾಗಿ ಲಕ್ಷಣಗಳಿಂದ ಲಾಕ್ಷಣೀಕರಿಸುವ ಪುರುಷ ವ್ಯಾಖ್ಯಾನವನ್ನು ಈ ಕವಿತೆ ನಿರಾಕರಿಸುತ್ತದೆ. ಈ ಕವಿತೆಯು ಹೆಣ್ಣಿನ ಸ್ವಂತಿಕೆಯ ಪ್ರಶ್ನೆಯನ್ನು ಈ ಕವಿತೆ ಎತ್ತಿಹಿಡಿಯುತ್ತದೆ. ಮುರಿಯುತ್ತದೆ. ಹೀಗೆ ಗಂಡು ಎಂದರೆ ಸ್ತ್ರೀ ವಿರೋಧಿ, ಮೋಸಗಾರ, ಈತ ನಂಬಿಕೆಗೆ ಅರ್ಹನಲ್ಲ ಎಂದು ಆತ ಸ್ತ್ರೀಶೋಷಕ, ಹೆಣ್ಣನ್ನು ಅಧೀನವಾಗಿ ಇರಿಸಿರುವಂತಹವನು ಎಂಬ ನಂಬಿಕೆಯಿದೆ.

ನಾನು ಮಮತೆಯಲ್ಲ
ನಾನು ಸಹನೆಯಲ್ಲ
ನಾನು ಶಾಂತಿಯಲ್ಲ
ತೊಲಗಾಚೆ
ಇನ್ನು ನಾ ನಿನ್ನೆ
ನಂಬುವವಳಲ್ಲ
(ಅದೇ ಕವನ)

ಈ ಕವಿತೆಯು ಆಕ್ರಮಣ ಶೀಲ ಪುರುಷ ವರ್ಗವನ್ನು ದೂಷಿಸುತ್ತಾ ಮುಂದಿನ ಹೆಣ್ಣು ಸಂಕುಲಕ್ಕೆ ನಿರ್ದಯತೆಯಿಂದಿರುವ ಪುರುಷನನ್ನು ಸಂಹರಿಸಲು ಎರುವಾಗುವಂತೆ ಎಚ್ಚರಿಕೆ ಅಹಂಕಾರದ ಮಾತುಗಳು ಈ ಕವಿತೆಯ ಮೂಲಕ ವ್ಯಕ್ತಗೊಂಡಿದೆ.

ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಶೋಷಣೆಗೆ ಒಳಗಾಗಿ ನರಳುವಂತಾಗಿದೆ. ಆಧುನಿಕ ಕಾಲದಲ್ಲೂ ಮೌಢ್ಯದ ಮೂಲಕ ಈ ಧೋರಣೆ ಮುಂದುವರೆದು ಮನುಷ್ಯನ ವೈಚಾರಿಕ ಪ್ರಜ್ಞೆಗೆ ಸವಾಲೆನಿಸಿದೆ. ಹೆಣ್ಣು ಮಗುವಿನ ಜನನ ಸಂದರ್ಭದಲ್ಲಿ ಕಂಡುಬರುವ ಕೌಟುಂಬಿಕ ಹಾಗೂ ಸಾಮಾಜಿಕ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಪುರುಷ ಪ್ರತಿಷ್ಠೆಯ ಅಟ್ಟಹಾಸವನ್ನು ವಿಡಂಬಿಸಿದ್ದಾರೆ. ಹೆಚ್ಚಿನ ಅಸಹಾಯಕತೆ, ದುಗುಡ, ದುಮ್ಮಾನಗಳಿಗೆ ಸ್ತ್ರೀ

ಸಂವೇದನೆಯೊಂದಿಗೆ ಸಾಮಾಜಿಕ ಧೋರಣೆ ಬಹುಮುಖ್ಯ ಎಂಬುದನ್ನು ಈ ಕವಿತೆಯು ಬಿಂಬಿಸುತ್ತದೆ.

ಅದೇ ಆ ಶಿವನ ವೇಷಧಾರಿ
ನಾನಿದ್ದ ಬಸ್ಸಿನಲ್ಲಿಯೇ ಇದ್ದ
ನನ್ನೊಂದಿಗೆ ಬಸ್ಸಿನಿಂದಿಳಿದ
(ಕಾಡುಲಿಲ್ಲಿ ಹೂವುಗಳು)

ಪ್ಲಾಸ್ಟಿಕ್ ಹಾವು, ತಗಡಿನ ಚಂದ್ರ, ಹುಲಿ ಚಿತ್ರದ ಅರ್ಧಲುಂಗಿ, ಹವಾಯಿ ಚಪ್ಪಲಿ, ಗಿಲೀಟು ಒಡವೆಗಳು, ಆಧುನಿಕತೆಯ ಒಡೆತನವನ್ನು ವಿಂಡಬಿಸುವ ಒಂದು ಧಾಟಿ ಇಲ್ಲಿ ಮೂಡಿಬಂದಿದೆ. ಇಲ್ಲಿರುವ ಕೃತಕ ಆಭರಣಗಳು ವಾಸ್ತವ ಮತ್ತು ಬಣ್ಣದ ತಳುಕಿನ ಪ್ರಪಂಚವನ್ನು ಭಿನ್ನ ಮಗ್ಗಲುಗಳಲ್ಲಿ ತೋರಿಸಿ ಕೊಡುತ್ತವೆ. ಅಷ್ಟೇ ಅಲ್ಲದೆ ಪುರುಷ ಹೆಣ್ಣಿನ ಮೇಲೆ ವಿಧಿಸಿರುವ ಶಾಸ್ತ್ರಬದ್ಧ ನಿಯಮಗಳನ್ನು ಈ ರೂಪಕಗಳ ಮೂಲಕ ವಿಡಂಬನೆಗೆ ಗುರಿಪಡಿಸಿದ್ದಾರೆ.

ಈ ಕವನ ವೇಷಧಾರಿಯ ಸಂಭ್ರಮದ ಸ್ಥಿತಿಯನ್ನಷ್ಟೇ ವರ್ಣಿಸುತ್ತಿಲ್ಲ. ಅವನ ಸದ್ಯದ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಅದು ಮರೆಮಾಚುವುದಿಲ್ಲ. ಆದರೆ ನಿರೂಪಕಿ ಈ ವೇಷಧಾರಿಯನ್ನು ಕೇವಲ ಬಡವನೋರ್ವನ ಬೇಡುವ ಕೈ ಹಸಿದ ಹೊಟ್ಟೆಯಾಗಿ ಮಾತ್ರ ಬಿಂಬಿಸುತ್ತಿಲ್ಲ. ಒಂದೇ ವ್ಯಕ್ತಿಯೊಳಗಣ ಹಲವು ಸಾಧ್ಯತೆಗಳನ್ನು ಅವುಗಳೆಲ್ಲ ಅಭಿನ್ನ ಎಂಬ ಪದದಲ್ಲಿ ಕವನ ಸೂಕ್ಷ್ಮವಾಗಿ ಹೆಣೆದಿದೆ. ಹಾಗಾಗಿ ನಿರೂಪಕಿಯ ಅನುಭವ ನಿಧಾನ ನಿಧಾನವಾಗಿ ವಿಸ್ತಾರಗೊಳ್ಳುತ್ತ ಹೋಗುತ್ತದೆ.

ನಾ ಮುಂದೆ ಅವ ಹಿಂದೆ
ಜಾತ್ರೆಯ ಕೌಂಟರಿನಲ್ಲಿ
ಟಿಕೇಟು ಕೊಳ್ಳುವಾಗಲೂ
ಬೆನ್ನ ಹಿಂದೆಯೇ ಇದ್ದ
ಗಿಲೀಟು ಒಡವೆಯಂಗಡಿಯಲ್ಲಿ
(ಅದೇ ಕವನ)

ಕವನದ ಕೊನೆಯ ಹಂತಕ್ಕೆ ಬರುತ್ತಿದ್ದಂತೆ ಕ್ರಮೇಣ ಅನುಭಾವ ಎಂಬ ಸ್ಥಿತಿಯನ್ನು ತಲುಪಿಬಿಡುತ್ತದೆ. ಬೇಡುವ ಬಡವನ ಕೈ ರುದ್ರ ನೋಡಿದ್ದ ಬೊಗಸೆ ಎಂದು ತೋರಿಸುವ ನಿರೂಪಕಿ ವಾಸ್ತವಿಕ ಎಲ್ಲಾ ಸಮಸ್ಯೆಗಳನ್ನು ವಿಡಂಬಿಸುತ್ತಾ, ಅನುಭವದೊಂದಿಗೆ ಮೈ ತಳೆಯುತ್ತದೆ. ಒಟ್ಟಾರೆಯಾಗಿ ಇಹ ಪರ ಮುಂತಾದ ಆಲೋಚನೆಗಳು, ವಾಸ್ತವದ ನೆಲೆಗಟ್ಟಿನಲ್ಲಿ ಒಂದೇ

ಆಗಿ ಬಡತನದ ಹಸಿವು, ಜೀವನದ ನೋವುಗಳು, ಆಧುನಿಕತೆಯೊಂದಿಗೆ ಸಮೀಕರಣಗೊಂಡು ಅನುಭವವಾಗುವುದರ ಜೊತೆಯಲ್ಲೇ ಅನುಭಾವದ ಸ್ಥಿತಿಯನ್ನು ತಲುಪಿದೆ.

ಮೆಲ್ಲನೆ ಬಳಿ ಸಾರಿ ಗೋಣ ಬಗ್ಗಿಸಿ
ಮಗ ಹಸಿದಿದ್ದಾನೆ
ಹೆಂಡತಿಗೆ ಕಾಯಿಲೆ ಅಂದ
ಬಾಡಿದ ಮುಖ, ಬಸಿದಿತ್ತು ದುಃಖ
(ಅದೇ ಕವನ)

ಈ ಕವನದಲ್ಲಿ ದೈವಿಕತೆಯನ್ನು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ಬಗೆಯನ್ನು ಪಾತ್ರಗಳಲ್ಲಿ ಕಟ್ಟಿಕೊಟ್ಟಿರುವುದು ಮನೋಜ್ಞವಾಗಿದೆ. ಲೇಖಕಿಯು ಶಿವನನ್ನು ಪುಟ್ಟ ಪರ್ಸಿನ ಮೂಲೆ ಮೂಲೆಯನು ತಡವಿ ರುದ್ರನೋಡಿದ್ದ ಬೊಗಸೆಗೆ ಐದರ ನೋಟಿರಿಸಿ ಇಷ್ಟೇ ಅಂದೆ. ಅದು ಮಿಂಚಂತೆ ಹೊಳೆದು ತಳಾಂಗು ತದಿಗಿಣ ತೋಂ ಎಂದು ನಾಟ್ಯದ ಮಟ್ಟಿನಲಿ ಕುಣಿದು ಅರ್ಧ ನಿಮೀಲಿತ ನೇತ್ರನಾಗಿ ಶಿವನು ನಟರಾಜನ ಭಂಗಿಯಲ್ಲಿ ನಿಂತುಬಿಟ್ಟಿದ್ದಾನೆ.

ಆರ್ಥಿಕವಾಗಿ ಬಲಾಢ್ಯವಾದ ರಾಷ್ಟ್ರಗಳು, ಹಿಂದುಳಿದ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯ ಮೇಲೆ ನಡೆಸುವ ದಬ್ಬಾಳಿಕೆಯನ್ನು ಸವಿತಾ ಅವರು ಈ ಕವನದಲ್ಲಿ ನಿರೂಪಿಸಿದ್ದಾರೆ.

ಷೇರುಪೇಟೆ ಕುಸಿಯುತಿದೆ
ಮಾರುಕಟ್ಟೆ ನಡುಗುತಿದೆ
ಕರಡಿಯೊಂದು ಕುಣಿಯುತಿದೆ
ಗೂಳಿಯೊಂದು ತಿವಿಯುತಿದೆ
(ದರುಶನ,)

ಈ ಕವನವು ಕೊನೆಯಲ್ಲಿ ತಾನು ಕುಡಿಕೆಯಲ್ಲಿ ಕೂಡಿಟ್ಟ ಹಣ ನನಗೆ ಸಾಕು ಎಂಬ ಆಶಯದೊಂದಿಗೆ ಮುಗಿಯುತ್ತದೆ. ಬುಡಬುಡಕೆಯವನು ಕಣಿ ಹೇಳುವ ರೀತಿಯಲ್ಲಿ ಮಾರುಕಟ್ಟೆ ಪರಿಸ್ಥಿತಿಯನ್ನು ವಿವರಿಸಲಾಗಿದೆ. ಜನರನ್ನು ಆತಂಕದ ಸ್ಥಿತಿಯಲ್ಲಿಡಲು ಬೃಹತ್ ಕಂಪನಿಗಳು, ಶ್ರೀಮಂತ ದೇಶಗಳು ಬಳಸುವ ತಂತ್ರವಿದು.

ಪುಟ್ಟ ಮೀನು ಭಾರಿ ಹಡಗನ್ನು
ಮುಳುಗಿಸುವುದೆಂತ ನಿಜವೇನೇ?
ಗೆದ್ದಲುಹುಳು ಭಾರಿ ಸೌಧವನ್ನು

ಕಬಳಿಸುವುದಂತೆ ನಿಜವೇನೇ?

(ಅದೇ)

ಮಾರುಕಟ್ಟೆಯಲ್ಲಿ ಇಂತಹ ಸುದ್ದಿಗಳಿಂದ ಹೆದರಿಕೊಳ್ಳುವ ಜನರ ವಿವೇಚನೆ ಕಳೆದುಕೊಂಡವರಂತೆ ಮಾರುಕಟ್ಟೆ ನಿಯಂತ್ರಿಸುವವರ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಈ ಕೆಟ್ಟ ಸ್ಥಿತಿಯನ್ನು ಕೆಲವು ದೃಷ್ಟಾಂತಗಳ ಮೂಲಕ ಇದನ್ನು ಸ್ಪಷ್ಟಪಡಿಸಲಾಗಿದೆ. ಪುಟ್ಟ ಮೀನು ಭಾರಿ ಹಡಗನ್ನು, ಬೃಹತ್ ಕಟ್ಟಡವನ್ನು ಉರುಳಿಸುವ ದೃಷ್ಟಾಂತ ನೀಡಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳು, ಅವುಗಳ ಹಿನ್ನೆಲೆಯಿಂದ ಕೆಲವೇ ಶ್ರೀಮಂತ ದೇಶಗಳು ಶ್ರೀಮಂತರು ಮಾರುಕಟ್ಟೆಯನ್ನು ನಿಯಂತ್ರಣಗೊಳಿಸುವುದನ್ನು ತನ್ಮೂಲಕ ಬಹುಸಂಖ್ಯೆಯ ಬಡ ಮಾಧ್ಯಮ ವರ್ಗಗಳ ಹಣಕಾಸಿನ ಪರಿಸ್ಥಿತಿಗಳನ್ನು ನಿಯಂತ್ರಿಸುವುದನ್ನು ಕವಿತೆ ಸೂಚಿಸುತ್ತವೆ. ಇಲ್ಲಿ ಹೆದರಿಸುತ್ತಿರುವ ತಂಗಿ, ಹೆದರಿದಂತೆ ಕಂಡರೂ ದಿಟ್ಟ ಉತ್ತರ ನೀಡುವ ಅಕ್ಕ ಶ್ರೀಮಂತರ ಮತ್ತು ಬಡದೇಶಗಳಾಗಿ ಕಾಣುತ್ತಿವೆ. ಈ ಕವನದಲ್ಲಿ ಸಾಮಾಜಿಕ, ಆರ್ಥಿಕ ವ್ಯವಹಾರಗಳಲ್ಲಿ ಕೆಳವರ್ಗದ ಜನರು ಪಡುವ ಕಷ್ಟ ತೊಂದರೆಗಳನ್ನು ಈ ಕವನದಲ್ಲಿ ಹೇಳಲಾಗಿದೆ.

ಜಾತಿ ಅಸಮಾನತೆ

ಅವರು ತ್ರಿಶೂಲಗಳನ್ನು ಹಿಡಿದಿದ್ದಾರೆ

ಇವರು ತಲವಾರುಗಳನ್ನು ಹಿಡಿದಿದ್ದಾರೆ

ಅಲ್ಲಾ ಎಂದರೆ ನೇರ ಸ್ವರ್ಗಕ್ಕೆ ಅಟ್ಟುತ್ತಾರೆ

ರಾಮ ಎಂದರೆ ಇಲ್ಲೇ ನರಕದಲ್ಲಿ ಉಳಿಸುತ್ತಾರೆ.

(ಗುಜರಾತಿಗೆ ಕವಿ ಸ್ಪಂದನೆ ದರುಶನ)

ಸವಿತಾ ನಾಗಭೂಷಣ ಅವರ ಈ ಕವನದಲ್ಲಿ ಆಶಯ ವಾಸ್ತವದ ನೆಲೆಯಲ್ಲಿ ಸಾಧ್ಯವಾಗಬಹುದೇ ಎಂಬ ಸಂಶಯ ಸುಳಿಯದೇ ಹೋಗುವುದಿಲ್ಲ. ಹಿಂಸೆಗೆ ಹಿಂಸೆಯೇ ಉತ್ತರವಾದರೆ ಅದರ ಅಂತ್ಯ ಮನುಕುಲದ ಅಂತ್ಯದೊಂದಿಗೆ ಪರಿಸಮಾಪ್ತಿಗೊಳ್ಳುತ್ತದೆ. ಮನುಕುಲದ ಇತಿಹಾಸದಲ್ಲಿ ಹಿಂಸೆಯಷ್ಟೇ ಶಾಂತಿಗೂ ಸ್ಥಾನವಿದೆ. ಬುದ್ಧ, ಬಸವ, ಗಾಂಧಿ, ಮಂಡೇಲಾ ಎಲ್ಲರ ಕನಸು ಶಾಂತಿಯೇ ಅಲ್ಲವೇ. ಶಾಂತಿಗೆ ಸಿಕ್ಕ ವಿಜಯ ಸಮರಕ್ಕೆ ದೊರೆತದ್ದುಂಟೇ ಎಂಬ ವಿಶಾಲ ದೃಷ್ಟಿಕೋನದಿಂದ ನೋಡಿದಾಗ ಸವಿತಾ ತನ್ನ ಲೇಖನಿಯಿಂದ ಇನ್ನೇನು ಮಾಡಲು ಸಾಧ್ಯ ಎಂಬುದಾಗಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ.

ದರ್ಗಾದಲ್ಲಿ ಅತ್ತರ ಘಮ ಘಮಿಸುತ್ತದೆ

ದೇಗುಲದಲ್ಲಿ ಗಂಧ ಪರಿಮಳಿಸುತ್ತಿದೆ

ದೇವರೇ

ಹಗೆತನದ ಹುಟ್ಟಡಗಲಿ

ಗೆಳೆತನವು ನಿತ್ಯ ಒದಗಿ ಬರಲಿ (ಅದೇ)

ಇದು ಕವಿಯ ಆಶಯ ಮಾತ್ರವಾಗದೆ ಪ್ರತಿ ಮನಸ್ಸಿನ ಆಶಯವೂ ಆದಾಗ ಕವಿಯ ಕನಸು ಸಾಕಾರಗೊಳ್ಳಬಹುದು. ಕೋಮುಗಲಭೆಯಂತಹ ಜ್ವಾಲೆಯನ್ನಡಗಿಸಲು ಯಾವುದೇ ಕಾಯಿದೆ ಕಟ್ಟಳೆಗಳಿಂದಲೂ ಸಾಧ್ಯವಿಲ್ಲ. ಸಹನೆ, ಸಹಬಾಳ್ವೆಗಳು ಮಾತ್ರ ಇದನ್ನು ನಿವಾರಿಸಲು ಶಕ್ತವಾದವು ಎಂಬ ಮೌಲ್ಯವನ್ನು ಈ ಕವಿತೆ ಎತ್ತಿ ಹಿಡಿಯುತ್ತದೆ. ಸಾವಿರಾರು ವರ್ಷಗಳಿಂದ ಹೊಂದಾಣಿಕೆಯೊಂದಿಗೆ ಬದುಕುತ್ತಿದ್ದ ಭಾರತೀಯ ಪರಂಪರೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಬಿತ್ತಿದ ಒಡೆದು ಆಳುವ ವಿಷ ಬೀಜ ಭಾರತದ ಅಖಂಡತೆಯನ್ನು ಛಿದ್ರಗೊಳಿಸಿದ್ದು, ತನ್ಮೂಲಕ ಈ ದೇಶ ಕೋಮುದಳ್ಳುರಿಯಲ್ಲಿ ಪರಿತಪಿಸಿದ್ದು, ಗಾಂಧಿಯನ್ನು ಬಲಿ ತೆಗೆದುಕೊಂಡಿದ್ದು ಈ ಎಲ್ಲಾ ಚಾರಿತ್ರಿಕ ಕಹಿ ಸತ್ಯಗಳೊಂದಿಗೆ ಧಾರ್ಮಿಕ ಮೂಲಭೂತವಾದಿಗಳು ಸ್ವಾರ್ಥ ರಾಜಕಾರಣಿಗಳು ಒಂದಲ್ಲಾ ಒಂದು ಬಗೆಯಲ್ಲಿ ಅದನ್ನು ಜೀವಂತವಾಗಿರಿಸಿ ತಮ್ಮ ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಿದ್ದಾರೆ. ಸವಿತಾ ಅವರು ಈ ಕವಿತೆಯಲ್ಲಿ ಇರುವುದು ಒಂದೇ ಜಾತಿ ಅದು ಮಾನವ ಜಾತಿ, ನಮ್ಮ ದೇಶ ಬಹುಸಂಸ್ಕೃತಿಗಳ ನಾಡು. ನಾವು ಎಲ್ಲಾ ಜಾತಿಯೊಂದಿಗೆ ಹೊಂದಾಣಿಕೆಯಿಂದ ಜೀವನ ನಡೆಸುವುದು ನಮ್ಮ ಕರ್ತವ್ಯ ಎಂಬುದು ಈ ಕವಿತೆಯ ಆಶಯವಾಗಿದೆ.

ಹಿಂದೂ ಹುಡುಗ ಮುಸ್ಲಿಂ ಹುಡುಗಿಯನ್ನು

ಮದುವೆಯಾದರೆ ಏನಾಗುತ್ತೆ

ಏನೂ ಆಗೊಲ್ಲ

ಮುದ್ದಾದ ಎರಡು ಮಕ್ಕಳಾಗುತ್ತೆ!

(ಏನಾಗುತ್ತೆ, ದರುಶನ)

ಈ ಕವನದಲ್ಲಿ ಹಿಂದು ಮತ್ತು ಮುಸ್ಲಿಂ ಜನಾಂಗವನ್ನು ಮತ್ತು ದೇವರ ಆರಾಧನೆಯನ್ನು ಕುರಿತಂತೆ ಹೇಳಲಾಗಿದೆ. ಇದರ ಹಿಂದೆ ಕೇವಲ ಸ್ಥಳೀಯ ಶಕ್ತಿಗಳು ಮಾತ್ರವಲ್ಲ. ಜಾಗತಿಕವಾದ ಆರ್ಥಿಕ, ರಾಜಕೀಯ ಹುನ್ನಾರಗಳೂ ಕೂಡ ಇವೆ. ಜಾಗತೀಕರಣದ ಸ್ಪರ್ಧೆಯಲ್ಲಿ ಮುಂದುವರೆಯುತ್ತಿರುವ ದೇಶದ ಮೇಲೆ ನಿಯಂತ್ರಣ ಸಾಧಿಸಲು ಅದರ ಮುನ್ನೆಡೆಗೆ ಅಡ್ಡ ಹಾಕಲು ಬೇರೆ ಬೇರೆ ಅಂತರ್ದೇಶಿಯ ಹಿತಾಸಕ್ತಿಗಳು ಪ್ರಯತ್ನಿಸುತ್ತಿರುತ್ತವೆ.

ಹಿಂದೂಸ್ಥಾನ-ಪಾಕಿಸ್ಥಾನ ಒಂದಾದರೆ ಏನಾಗುತ್ತೆ?
ಏನೂ ಆಗೊಲ್ಲ
ಒಂದು ಹಳೆಯ ರೋಗ ವಾಸಿಯಾಗುತ್ತೆ?
(ಅದೇ ಕವನ)

ಹಾಗಾದರೆ ಇವುಗಳಿಗೆಲ್ಲ ನೀಡಬಹುದಾದ ಉತ್ತರವೊಂದೆ. ಉದಾಸೀನ ಮತ್ತು ಸಹಬಾಳ್ವೆ ಇದರ ಸಾಧ್ಯ ಸಾಧ್ಯತೆಗಳೇನೆ ಇದ್ದರೂ ಇಂತಹ ಮೌಲ್ಯವೊಂದರ ಸ್ಥಾಪನೆಗೆ ಆದರ್ಶವಾದದ ಮೊರೆ ಹೋಗಲೇಬೇಕಾಗಿದೆ. ಎಲ್ಲ ಬಗೆಯ ಆತಂಕ ಕಲಹಗಳ ಮೂಲವೂ ಮನಸ್ಸಿನಲ್ಲಿಯೇ ಇದೆ. ಅಂತರಂಗವೊಂದು ಶಾಂತವಾಗಿದ್ದಲ್ಲಿ ಬಹಿರಂಗದ ಕಲಹಗಳಿಗೆ ಅವಕಾಶವಾದರೂ ಎಲ್ಲಿದೆ. ಈ ಕವನದ ನಿರೂಪಕಿಯದು ಈ ರೋಗವಾಸಿಯಾಗುವುದು ಅನೇಕ ರೋಗಗ್ರಸ್ತ ಮನಸ್ಸುಗಳಿಗೆ ಬೇಡವಾದ ಸಂಗತಿ. ಈ ಸತ್ಯವನ್ನು ಸವಿತಾ ನಾಗಭೂಷಣ ನಿರೂಪಿಸಿದ್ದಾರೆ.

ನನಗೆ ಇಬ್ಬರ ಮಕ್ಕಳು । ಒಬ್ಬ ಈಶ್ವರ ಒಬ್ಬ ಅಲ್ಲಾ
ಎಲ್ಲಿರುವೆ ಕಂದಾ? । ಇಲ್ಲಮ್ಮಾ ಕಾಬಾದಲ್ಲಿ ಕಲ್ಲಾಗಿ
ಕಲ್ಲಾಗಿ?
ಕಲ್ಲಾಗಿಯೇ ಇರದಿರು ಕಂದಾ
ಸದಾ ಓಗೊಡು ಕರುಳ ಕರೆಗೆ
(ಈಶ್ವರ ಅಲ್ಲಾ ಮೇರೆ ಲಾಲ್, ದರುಶನ)

ಕೋಮುವಾದಗಳಿಗಂತೂ ಏನೂ ಹೇಳದ ಅಸಹಾಯಕತೆ ಉಳಿದಿರುವುದು ಅವರ ದೈವಗಳನ್ನೇ ಮಾತನಾಡಿಸುವುದು ಅಥವಾ ಉದ್ದೇಶಿಸಿ ಮಾತನಾಡುವುದು. ಈ ಪರೋಕ್ಷ ತಂತ್ರದ ಮೂಲಕ ಕವಿಯತ್ರಿ ಹೇಳ ಹೊರಟಿರುವ ಕಿವಿಮಾತು ವಾಚ್ಯವಾಗಿರದೆ ಧ್ವನಿಪೂರ್ಣವಾಗಿದೆ.

ಎಲ್ಲಿರುವೆಯೋ ಕಂದಾ?
ಇಲ್ಲಿ ಕೈಲಾಸದಲಿ ಮಂಜಾಗಿ
ಮಂಜಾಗಿ?
ಕರಗುತ್ತಲೇ ಇರದಿರು ಕಂಡ
ಸದಾ ಓಗೊಡದಿರು ಕೃತ್ರಿಮ ಮೊರೆಗೆ
(ಅದೇ ಕವನ)

ಕಲ್ಲು ಕರಗುವ, ಮಂಜು ಘನಿಸುವ ಅವಶ್ಯಕತೆ ಇದೆ. ಹೀಗೆ ಪರಸ್ಪರ ಒಳ್ಳೆಯತನಗಳು ವಿನಿಮಯವಾಗಬೇಕು. ಋಣಾತ್ಮಕ ಅಂಶಗಳು ದೂರವಾಗಬೇಕು. ಇದು ಅವಾಸ್ತವವೆನ್ನಿಸಿದರೂ

ಕವಿಯಿಂದ ಇಷ್ಟಾದರೂ ಸಾಧ್ಯವಿದೆ ಎನ್ನುವುದೇ ಸಮಾಧಾನ ಪಡಬೇಕಾದ ಸಂಗತಿ. ಇದು ಕೂಡ ಆದರ್ಶ ಸ್ಥಿತಿಯ ಪರಿಕಲ್ಪನೆ ಮಾತ್ರವೆನ್ನಿಸುತ್ತದೆ. ವಾಸ್ತವದಲ್ಲಿ ಇದೆಲ್ಲ ಸಾಧ್ಯವಾಗುವುದು ಅನುಮಾನವೆನ್ನಿಸಿದರೂ ಮನುಷ್ಯರು ಭೌತಿಕ ಪ್ರಪಂಚದಲ್ಲಿ ಬದುಕುತ್ತಿದ್ದರೂ ಅವರನ್ನು ಆಳುತ್ತಿರುವುದು, ಮುನ್ನೆಡೆಸುತ್ತಿರುವುದು ಭಾವನಾ ಪ್ರಪಂಚವೇ. ಈ ಹಿನ್ನೆಲೆಯಲ್ಲಿ ಇಂತಹ ಆದರ್ಶಗಳನ್ನು ಒಪ್ಪಿಕೊಳ್ಳಬೇಕಾಗಿದೆ. ಕೋಮುವಾದವು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿನ ಸ್ವಾರ್ಥ ಸಾಧಕರ ಹುಳುಕುಗಳನ್ನು ಮುಚ್ಚಿಕೊಳ್ಳುವ ಸಾಧನವಾಗಿದೆ. ಇಲ್ಲಿ ಧರ್ಮ ಇನ್ನೊಂದು ಧರ್ಮದ ಮೇಲೆ ಸೇಡು ತೀರಿಸಿಕೊಳ್ಳುವ ಸಾಧನವಾಗಿ ಹೆಣ್ಣನ್ನು ಬಳಸಿಕೊಳ್ಳಲಾಗಿದೆ. ಒಂದು ಸಾತ್ವಿಕ ಮುಸ್ಲಿಂ ಆಗಲಿ, ಹಿಂದೂವಾಗಲಿ ಕಟ್ಟಾ ಧಾರ್ಮಿಕ ಸಂಪ್ರದಾಯ ವಾದಿಗಳಾಗಿದ್ದರೂ ಅವರು ತಮ್ಮ ಧರ್ಮವನ್ನು ನಿಷ್ಠೆಯಿಂದ ಪಾಲಿಸುತ್ತಾರೆ. ವಿನಃ ಬೇರೆ ಧರ್ಮವನ್ನು ದ್ವೇಷಿಸುವುದಿಲ್ಲ.

ನಾನು ನನ್ನ ದೇಶದ ಗಡಿಯನ್ನು
ಕೊಳೆಯದ ಹೆಣಕ್ಕೆ ಹೋಲಿಸುತ್ತೇನೆ
ನಿತ್ಯ ಕಾವಲು ಕಾಯುವ ನೂರು
ಕಣ್ಣುಗಳಿಗಾಗಿ ದುಃಖಿಸುತ್ತೇನೆ.
ಹಸಿರು ಉಸಿರಾಡಿದ ಮರಗಳಿಗಾಗಿ
ಗೂಡು ಕಟ್ಟಿದ ಹಕ್ಕಿಗಳಿಗಾಗಿ
(ಯುದ್ಧ ಕಾಡುಲಿಲ್ಲಿ ಹೂವುಗಳು,)

ಪ್ರಸ್ತುತ ಕವಿತೆಯು ದೇಶದ ಗಡಿಕಾಯುವ ಸೈನಿಕರಿಗೆ ಸಮೀಕರಿಸಿ ಬರೆದಿದ್ದಾರೆ. ಅಷ್ಟೇ ಅಲ್ಲದೆ ಯುದ್ಧ ಎಂಬ ಪರಿಕಲ್ಪನೆಯ ಅಡಿಯಲ್ಲಿ ಅನೇಕ ರೀತಿಯ ಆಯಾಮಗಳೊಂದಿಗೆ ಗುರುತಿಸಿಕೊಳ್ಳಬಹುದು. ಸೈನಿಕರು ಆತ್ಮ ಸಾಕ್ಷಿಯಾಗಿ, ನಿಷ್ಠೆಯಿಂದ ದೇಶದ ರಕ್ಷಣೆಯಲ್ಲಿ ತೊಡಗಿ ಇಡೀ ತಮ್ಮ ದೇಹವೇ ಕಲ್ಲುಗಳಾಗಿ ನಿಂತು ದೇಶದ ಸೇವೆಯಲ್ಲಿ ತೊಡಗಿರುತ್ತಾರೆ. ಇದನ್ನು ಕೊಳೆಯದ ಹೆಣಕ್ಕೆ ಹೋಲಿಸಿದ್ದಾರೆ. ಅಂದರೆ ಕೆಲವೊಂದು ಹೆಣಗಳು ತೊನ್ನು ಇತರೆ ರೋಗದಿಂದ ಬಳಲುವ ಹೆಣಗಳು ಕೊಳೆಯುವುದಿಲ್ಲ. ಇಲ್ಲಿ ಅಷ್ಟೇ ನಿಷ್ಠೆಯಿಂದ ದೇಶ ರಕ್ಷಣೆಯಲ್ಲಿ ತೊಡಗಿರುತ್ತಾರೆ. ಹೀಗಾಗಿ ಇವತ್ತಿನ ವ್ಯವಸ್ಥೆಯಲ್ಲಿ ತಮ್ಮ ಪತ್ನಿ ಕುಟುಂಬವನ್ನು ಬಿಟ್ಟು ನಮಗೆ ಕಾವಲು ಕಾಯುವ ಸೈನಿಕರಿಗೆ ಅಭಿನಂದನೆಗಳನ್ನು ಸಲ್ಲಿಸಬಹುದು ಮತ್ತೆ ಅವರ ಬಗ್ಗೆ ಆಲೋಚನೆ ಮಾಡಬಹುದು.

ಕೆಂಪು ಸೂರ್ಯನನ್ನು ಹಣೆಗಿರಿಸಿಕೊಂಡು
ಹಳದಿ ಸೇವಂತಿಗೆಯನ್ನು ಮುಡಿಗಿರಿಸಿಕೊಂಡು

ನಿರೀಕ್ಷೆಯಲ್ಲಿ ನಲುಗಿ ಹೋಗುವ
ನೂರು ಹೆಣ್ಣುಗಳಿಗಾಗಿ ದುಃಖಿಸುತ್ತೇನೆ (ಅದೇ ಕವನ, ಪು.೫೭)

ಯುದ್ಧ ಎಂಬ ಪದವು ಹಲವು ಅರ್ಥಗಳನ್ನು ಕೊಡಬಹುದು. ಗಡಿಗಳಲ್ಲಿ ಆಗುವ ಗಲಾಟೆ, ಗಲಭೆಗಳಾಗಿರಬಹುದು. ಉದಾಹರಣೆಗೆ ಮಹಾರಾಷ್ಟ್ರ ಮತ್ತು ಕರ್ನಾಟಕವಾಗಿರಬಹುದು. ಆಂಧ್ರ ಮತ್ತು ಕರ್ನಾಟಕವಾಗಿರಬಹುದು. ಇವು ಗಡಿ ವಿವಾದದ ಯುದ್ಧ ಪ್ರತೀಕದ ಗಡಿಯಲ್ಲಿನ ಸ್ಥಿತಿಯನ್ನು ನೋಡಬಹುದು. ಯುದ್ಧ ಮುಂದೆ ಸಾಂಕೇತಿಕವಾಗಿ ದೇಶದ ಗಡಿಭಾಗ ಹಸಿರುನೊಂದಿಗೆ ಮರ ಹಕ್ಕಿಗಳೊಂದಿಗೆ ಗುರುತಿಸಿ. ಸೂರ್ಯ ಬೆಳದಿಂಗಳ ರಾತ್ರಿ ಇನ್ನೂ ಮುಂತಾದವುಗಳನ್ನು ಸಾಂಕೇತಿಕ ರೂಪದಲ್ಲಿ ಬಳಸಲಾಗಿದೆ ಮತ್ತು ಹಲವು ಲಯಗಳನ್ನು ಒಳಗೊಂಡ ಕವಿತೆ. ಯುದ್ಧ ನನ್ನನ್ನು ಕಂಗೆಡಿಸುತ್ತದೆ. ಬುದ್ಧ ನನ್ನನ್ನು ಸಂತೈಸುತ್ತಾನೆ ಎನ್ನುವ ಪರಿಯು ಇಡೀ ಜಗತ್ತು ಅಥವಾ ಸಮುದಾಯಗಳ ಸರ್ವಶಾಂತಿದೂತನ ವಾಣಿಯಾದ ಶಾಂತಿ, ನೆಮ್ಮದಿಯನ್ನು ಒಳಗೊಂಡ ಪರಿಯಿಂದ ಯುದ್ಧಕ್ಕೆ ಮುಕ್ತಿಯಾಡುತ್ತಾರೆ.

ದಿಕ್ಕಿಲ್ಲದಂಗೆ ರಾಶಿ ಬಿದ್ದಿದ್ದ
ಟೊಮೊಟೋ, ಆಲೂಗಡ್ಡೆ, ಮೆಕ್ಕೆಜೋಳದ
ಜತೆಗೆ ಕಂಗಲಾಗಿ ಕೂತಿದ್ದ
ನಿನ್ನ ಚಿತ್ರಾನೂ ಮುಖಪುಟದಾಗೆ
ನೋಡ್ದೆ ಕಣಪ್ಪಾ
(ಜಾಗತೀಕರಣದ ಹೊಸಿಲಲ್ಲಿ ನಿಂತಿರುವ ರೈತನಿಗೊಂದು ಕಿವಿಮಾತು,
ಕಾಡುಲಿಲ್ಲಿ ಹೂವುಗಳು)

ಈ ಕವಿತೆಯು ಜಾಗತಿಕ ಬದಲಾವಣೆಯ ಕುರಿತಾದ ಅದು ಮೇಲಾಗಿ ಭಾರತದ ಬೆನ್ನೆಲುಬು ಆಗಿರುವ ರೈತನ ಕುರಿತಾಗಿ ಬರೆಯಲಾಗಿದೆ. ಹಿಂದೆ ರೈತನಿಗೆ ಆದಮ್ಯವಾದ ಒಂದು ಸ್ಥಾನವನ್ನು ಭಾರತದಲ್ಲಿ ಕೊಟ್ಟಿರುವುದನ್ನು ನೋಡಬಹುದು. ಇಂದು ತಂತ್ರಜ್ಞಾನಾದ ಅವಿಷ್ಕಾರ ಮತ್ತು ಆಧುನಿಕ ಜಗತ್ತಿಗೆ ಅನುಕೂಲಕ್ಕಾಗಿ ರೈತನಿಗೆ ಸ್ವಲ್ಪಮಟ್ಟಿಗೆ ಬೆಳೆದ ಬೆಳೆಗಳಿಗೆ ಫಲ ಸಿಗುತ್ತದೆ. ಬೆಳೆದ ವಸ್ತುಗಳಿಗೆ ಅಚ್ಚುಕಟ್ಟದ ಬೆಲೆ ಮತ್ತು ಮಾರುಕಟ್ಟೆಯಲ್ಲಿ ಆಗುವ ಅವ್ಯವಹಾರಗಳಿಂದ ರೈತನು ಕಂಗಾಲಾಗಿದ್ದಾನೆ. ಇಂತಹ ಸುದ್ದಿಯನ್ನು ಸವಿತಾ ನಾಗಭೂಷಣ ಅವರು ತಮ್ಮ ಕವಿತೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಅಲ್ಲಾ ಕಣಪ್ಪಾ
ಭಾರತಾಂಬೆಯ ಬೆನ್ನುಲುಬು

ಅಂತ ಯಾಮಾರಿ ಕುಂತಿದ್ಯಲ್ಲಾ
ಈಗ ನೋಡು
ನೀ ಯಾರ ಅಂತ
ಕೇಳೋರು ಇಲ್ಲ
(ಅದೇ ಕವನ)

ಹಸಿರು ಪೇಟಾ ರೈತರ ಸಂಕೇತವಾಗಿದೆ. ಇಲ್ಲಿ ಕವಿಯತ್ರಿಯು ಮುಂದೆ ನೀನು ಕೂಡ ಬದಲಾದ ಸಮಾಜದಲ್ಲಿ ಜೀನ್ಸ್ ಪ್ಯಾಂಟು, ರಂಗೀಲಾ ಷರಟು ತೊಟ್ಕೊಂಡು ಜಾಗತೀಕರಣ ಹೊಸ್ತಿಲಲ್ಲಿ ನಿಂತಿರು ಎಂಬ ಮಾತುಗಳನ್ನು ಈ ಕವಿತೆಯಲ್ಲಿ ಹೇಳುವುದನ್ನು ಕಾಣಬಹುದು. ಕವಿತೆಯು ಆಧುನಿಕ ಜಾಗತೀಕರಣದಲ್ಲಿ ಯಾವ ರೀತಿಯ ಬೆಳವಣಿಗೆ ಕಂಡಿದ್ದು, ಅದು ರೈತನಿಗೆ ಯಾವುದರಿಂದ ಉಪಯುಕ್ತವಾಗಿಲ್ಲ. ಹೀಗಾಗಿ ಸವಿತಾ ಅವರು ಬದಲಾದ ಸಮಾಜವನ್ನು ಇಟ್ಟುಕೊಂಡು ಕವಿತೆಯನ್ನು ಪ್ರಸ್ತುತ ಪಡಿಸಿದ್ದಾರೆ. ರೈತನ ಕಲ್ಪನೆಯು ತನ್ನ ಜೀವನದ ಅನುಭವಗಳು ಮುಂದೆ ತನ್ನ ಮಕ್ಕಳ ಜೀವನದ ಮೇಲೆ ಪ್ರಭಾವ ಬೀರುವಂತಹ ಹೈಟೆಕ್ ಆಸ್ಪತ್ರೆ, ರಾತ್ರಿ, ಹಗಲು ಉರಿಯುವಂತಹ ದೀಪ ಸೌಲಭ್ಯ ಕುಡಿಯೋ ನೀರು ಬಾಟ್ಲಿನಲ್ಲಿ ಬರುವಂತಹ ಅನುಭವ ನಮ್ಮ ಹಳ್ಳಿಗಳಿಗೆ ಬಸ್ಸುಗಳ ಸೌಲಭ್ಯದಂತಹ ವ್ಯವಸ್ಥೆಯನ್ನ ಅವರಿಗೆ ರಾಮಕೃಷ್ಣ ಅನ್ನೋದು ಬ್ಯಾಡ ಕಂಪ್ಯೂಟರ್ ದೇವತೆಯನ್ನು ಪೂಜಿಸು ನಿನಗೆ ಮೋಕ್ಷ ಸಿಗುತ್ತದೆ ಎನ್ನುವಂತಹ ಭರವಸೆಯ ಮಾತುಗಳನ್ನು ಈ ಕವನದಲ್ಲಿ ಹೇಳಲಾಗಿದೆ.

ಗಕ್ಕಂದೆ ನಿಂತೆ ಒಂದು ಕ್ಷಣ
ಶುರುವಾಯಿತು ಅನುಮಾನ
ಅವೊತ್ತು ಇಡೀ ದಿನ
ಬೆಕ್ಕಿನದೇ ಧ್ಯಾನ
(ಬೆಕ್ಕು ಅಡ್ಡ ಹೋಯಿತು, ಕಾಡುಲಿಲ್ಲಿ ಹೂವುಗಳು.)

ಈ ಕವನವು ಸಮಾಜದಲ್ಲಿ ಇರುವಂತಹ ಮೂಢನಂಬಿಕೆಯನ್ನು ಕುರಿತು ಹೇಳುತ್ತದೆ. ನಮ್ಮ ಜನ ಯಾವುದೇ ಶುಭ ಸಮಾರಂಭಗಳಿಗೆ ಹೊರಟಾಗ ಅವರಿಗೆ ಬೆಕ್ಕು ಅಡ್ಡ ಹೋದರೆ ನಮ್ಮ ಕೆಲಸವಾಗಲ್ಲ ಎಂಬುದು. ನಮಗೆ ಕೆಡಕು ಆಗುತ್ತದೆ ಎಂಬ ಮನೋಭಾವನೆಯನ್ನು ಹಿರಿಯರು ಬೆಳಸಿಕೊಂಡು ಬಂದಿದ್ದಾರೆ. ಆದರೆ ಹಳ್ಳಿಗಳಲ್ಲಿ ಮನೆಯಲ್ಲಿ ಇರುವಂತಹ ದವಸಧಾನ್ಯಗನ್ನು ಇಲಿಗಳ ಕೈಯಿಂದ ಕಾಪಾಡುವಂತಹ ಕೆಲಸವನ್ನು ಬೆಕ್ಕು ಮಾಡುತ್ತದೆ. ಬೆಕ್ಕು ವಾಸನೆಯಿಂದ ಆಹಾರವನ್ನು ಕಂಡುಕೊಳ್ಳುವಂತಹ ಗುಣ ಹೊಂದಿದೆ. ಸವಿತಾ ಅವರು

ಬೆಕ್ಕನ್ನು ರೂಪಕ, ಪ್ರತಿಮೆಯ ಗುಣಗಳನ್ನು ಈ ಕವನದಲ್ಲಿ ಹೇಳಿದ್ದಾರೆ. ಇದರ ಜೊತೆಯಲ್ಲಿ ಸಮಾಜದಲ್ಲಿ ಇರುವಂತಹ ಬೆಕ್ಕಿನ ತಪ್ಪುಗ್ರಹಿಕೆಯನ್ನು ಅದು ಒಂದು ಪ್ರಾಣಿ ಆದ್ದರಿಂದ ಮನುಷ್ಯನಿಗೆ ಯಾವ ಕೆಡಕು ಅಪಶಕುನಗಳು ಆಗುವುದಿಲ್ಲ ಎಂದು ಈ ಕವನದಲ್ಲಿ ವ್ಯಕ್ತಪಡಿಸಿದ್ದಾರೆ. ಮನುಷ್ಯ ಮತ್ತು ಮೂಢನಂಬಿಕೆಯ ಹುಡುಕಾಟದೊಂದಿಗೆ ಅನಿಷ್ಟ ಸಂಪ್ರದಾಯದ ವಿರುದ್ಧ ಧ್ವನಿಯನ್ನು ಎತ್ತಿದ್ದಾರೆ. ಮುಂದೆ ಕವಿಯೊಬ್ಬ ಮೀನಿಗೂ ಜೀವ ಬರುವ ಹಾಗೇ ಮನುಷ್ಯನ ನಡುವೆ ಸಾಧಿತವಾಗಬೇಕಾಗುವ ಲಯಗಳನ್ನು ಕಟ್ಟುವ ಮೂಲಕ ಸಂಕೇತಗಳನ್ನು ಮತ್ತು ರೂಪಕಗಳನ್ನು ಬಳಸಿಕೊಂಡಿದ್ದಾರೆ.

ಒಬ್ಬ ಮನುಷ್ಯ ಹಸಿವೆಯಿಂದ
ಎಷ್ಟು ನರಳಬಹುದೋ
ಅಷ್ಟು ಧಾರುಣವಾಗಿ ಅವನು ನರಳಿದ್ದ
ಒಂದು ತುಂಡು ರೊಟ್ಟಿಗಾಗಿ
ಎಷ್ಟು ಹೋರಾಡಬಹುದೋ
ಅಷ್ಟು ತೀವ್ರವಾಗಿ ಅವನು ಹೋರಾಡಿದ್ದ
(ಕೋವಿ ಹಿಡಿಯದ ಕೈಗಳೇ ಕಂಬನಿ ಒರೆಸಬೇಕು, ದರುಶನ)

ಇದು ಇಡೀ ದೇಶವೇ ಸಂತಸದಲ್ಲಿರುವಾಗ ತಾನೂ ಕೂಡ ಆ ಸಂಭ್ರಮದಲ್ಲಿ ಸಹಜತೆಯನ್ನು ಬಿಂಬಿಸುತ್ತದೆ. ಈ ಕವನ ಶೋಷಣೆಯ ಅರಿವು ಶೋಷಣೆಗೆ ಒಳಗಾದ ಜನರಿಗಾದಾಗ, ಎಚ್ಚರಿಕೆಯು ಮೂಡಿದಾಗ ಪರಿವರ್ತನೆಗೆ ಹಾತೊರೆಯುವುದು ಸಹಜ ಸ್ವಾಭಾವಿಕ. ಇಲ್ಲಿ ಶೋಷಿತರು ತಮ್ಮ ಶೋಷಣೆಯ ವಿರುದ್ಧ ಪ್ರತಿಭಟನೆ ನಡೆಸಿದಾಗ ವಾಸ್ತವಕ್ಕೆ ಹೆಚ್ಚು ಹತ್ತಿರವಾಗುತ್ತದೆ. ಏಕೆಂದರೆ ನೋವುಂಡವರಿಗೆ ಮಾತ್ರ ನೋವಿನ ಸ್ಥಿತಿ ಅರಿವಾಗಿರುತ್ತದೆ. ಈ ಕವನದಲ್ಲಿ ದೇಶವನ್ನು ಯಾರೇ ಆಳಿದರೂ ದುಡಿಯುವ ಕೈಗಳಿಗೆ ರಕ್ಷಣೆಯಿಲ್ಲ ಎನ್ನುವ ನಿರಾಶಾಭಾವ ಎಲ್ಲರನ್ನೂ ಕಾಡುತ್ತಿದೆ. ದೀನ, ದಲಿತರ ಬಾಳಿನ ಉಸಿರನ್ನು ಕಿತ್ತುಕೊಂಡು ಬದುಕಿನ ರಾಜ ಪ್ರಭುತ್ವವನ್ನು ಕುರಿತು ಹೇಳುತ್ತದೆ. ಕೋವಿ ಹಿಡಿದ ಕೈಗಳ ನೋವು, ಸಂಕಟವಿದೆ. ಇಂದಾದರೂ ಪರಿಹಾರ ದೊರಕಬಹುದೆನ್ನುವ ಆಸೆ ಕಮರಿ ಹೋಗಿದೆ. ಈ ಕಾವ್ಯದ ಮೂಲ ಆಶಯ ಮಾನವ ಬದುಕನ್ನು ಹಸನುಗೊಳಿಸುವುದು. ನಮ್ಮ ದೇಶದಲ್ಲಿ ಅಷ್ಟು ಸೈನಿಕರು ಕೋವಿ ಹಿಡಿದು ಕೈ, ಕಾಲು, ಕಣ್ಣು ತಮ್ಮ ಪ್ರಾಣವನ್ನು ಕಳೆದುಕೊಂಡು ಯುದ್ಧದಲ್ಲಿ ಹೋರಾಡಿ ತಮ್ಮ ಪ್ರಾಣವನ್ನು ಲೆಕ್ಕಿಸದೇ ನಮ್ಮ ತಾಯ್ನಾಡನ್ನು ಕಾಪಾಡಿಕೊಂಡು ಬಂದು ವೀರ ಮರಣದ ಘನತೆಯೊಂದಿಗೆ ಸಾಯುತ್ತಾರೆ. ಲೇಖಕಿಯು ಈ ಕವನದಲ್ಲಿ

ಬದುಕು ಬೆಳಗಿಸಲು ಹೊಸ ಅಸ್ತ್ರಗಳೇನಾದರೂ ನಿನ್ನ ಬಳಿ ಇವೆಯಾ ಎಂದು ಪ್ರಶ್ನೆಯನ್ನು ಹಾಕುತ್ತಾಳೆ.

ಯುದ್ಧ ನನ್ನನ್ನು ಕಂಗೆಡಿಸುತ್ತದೆ
ಬುದ್ಧ ನನ್ನನ್ನು ಸಂತೈಸುತ್ತಾನೆ (ಅದೇ ಕವನ)

ಜಗತ್ತು ಅಥವಾ ಸಮುದಾಯಗಳು ಸರ್ವ ಶಾಂತಿದೂತನ ವಾಣಿಯಾದ ಶಾಂತಿ, ನೆಮ್ಮದಿಯನ್ನೊಳಗೊಂಡ ಪರಿಯಿಂದ ಯುದ್ಧಕ್ಕೆ ಮುಕ್ತಿಯಾಡುತ್ತಾರೆ.

ವರ್ಗ ಅಸಮಾನತೆಯ ನೆಲೆಗಳು
ಮುತ್ತಿನ ಹನಿಗಳನ್ನು
ಕೆಂಡದ ತುಟಿ ಹೀರಿತು
ಮುಗುಳು ನಕ್ಕ ಚಿಗುರನ್ನು
ನೆಲ ನಿಷ್ಕರುಣೆಯಿಂದ ನುಂಗಿತು
ಹಸಿದ ಒಡಲು ಬಾದಾಮಿ
ಕಣ್ಣುಗಳನ್ನು ಬಿಡಲಿಲ್ಲ.
(ಹಸಿವು, ಕಾಡುಲಿಲ್ಲಿ ಹೂವುಗಳು)

ಭಾರತದಲ್ಲಿ ಇಂದು ಅನ್ನ ಕೆಲವರಿಗೆ ಮೋಜಾಗಿದ್ದರೆ ಅಸಂಖ್ಯಾತರಿಗೆ ಬದುಕಾಗಿದೆ. ಅನ್ನವಿಲ್ಲದೆ ಹಸಿವಿನಿಂದ ಸಾಯುವವರ ಸಂಖ್ಯೆ ಅಧಿಕ. ಜಮೀನ್ದಾರ ಪದ್ಧತಿಯಲ್ಲಿ ದಿನವೆಲ್ಲ ದುಡಿಸಿಕೊಂಡು ಒಂದ್ಹೊತ್ತಿನ ಗಂಜಿಯನ್ನು ನೀಡದಂತೆ ಜೀತದಾಳನ್ನು ಹಸಿವಿಗೆ ದೂಡುತ್ತಾರೆ. ತಾವು ತಿಂದು ಎಸೆದ ಎಲೆಗಳಲ್ಲಿಯ ಎಂಜಲನ್ನು ತಿನ್ನುವ ನಾಯಿ, ನರಿಗಳೊಂದಿಗೆ ಮನುಷ್ಯ ಪೈಪೋಟಿ ನಡೆಸಿದ್ದಾನೆ. ಮುತ್ತಿನ ಹನಿ ಎಂದರೆ ಮಳೆಯ ನೀರನ್ನು ಕೆಂಡದಂತಹ ಬಿಸಿಲಿನಿಂದ ಕೂಡಿದ ಭೂಮಿ ನುಂಗಿತು. ಹಸಿದ ಭೂಮಿ ತಾಯಿ ತನ್ನ ಒಡಲನ್ನು ತೆರೆದು ಚಿಗುರಿದ ಮರ, ನೆಲವನ್ನು ನುಂಗಿತು ಎಂಬ ಲಯಗಳಿಂದ ಕೂಡಿದ ಕವಿತೆಯಾಗಿದೆ.

ತಾಯಿಯ ವಾತ್ಸಲ್ಯಪೂರಿತ
ಕಣ್ಣುಳ್ಳ ಸೂರ್ಯನೆನ್ನೇ ಕೇಳಿದೆ
ನಿನಗೇನಾದರೂ ಹೇಳುವುದಿದಿಯೇ?
ಅವನು ಸುಮ್ಮನೆ
ಉರಿಯತೊಡಗಿದ
(ಅದೇ ಕವನ)

ಈ ಕವಿತೆಯಲ್ಲಿ ಹಸಿವು ಎಂಬ ಪರಿಕಲ್ಪನೆಯು ಒಂದನ್ನೊಂದು ಅವಲಂಬಿತವಾಗಿರುವುದನ್ನು ಕಾಣಬಹುದು. ಇಲ್ಲಿ ಹಸಿದ ಒಡಲು ನೆಲವನ್ನು ನುಂಗಿತ್ತು ಮತ್ತು ಒಂದು ಹಿಡಿ ತಿರುಳು ಜಗತ್ತಿನ ನಾಡಿಯಾದ ನೀರು, ನೆಲ ಮತ್ತು ಆಕಾಶದ ಮಳೆಯನ್ನು ನುಂಗಿ ಪ್ರೇಮದ ಒಡಲನ್ನು ಬರಿದಾಗಿಸುವುದು, ವಾತ್ಸಾಲ್ಯದಿಂದ ಸೂರ್ಯನನ್ನೇ ಪ್ರಶ್ನಿಸುವ ಪರಿಯನ್ನು ನೋಡಬಹುದು. ಲಯ ಬದ್ಧವಾದ ಕವಿತೆಯು ಹಸಿವಿನ ಮೂಲ ಸಂಕೇತವಾದ ಸೂರ್ಯ ಸುಮ್ಮನೆ ಉರಿಯತೊಡಗಿದ. ಇಲ್ಲಿ ಹಸಿವಿನ ಹಲವು ಮುಖಗಳನ್ನು ವಿಶ್ಲೇಷಿಸಬಹುದು. ಹನಿಗಳನ್ನು ಭೂಮಿ ಹಸಿದು ಕುಡಿಯುತ್ತದೆ. ಮತ್ತೆ ಚಿಗುರಿದ ಗಿಡಗಳನ್ನು ನೆಲವು ಹೀರಿತು ಹೀಗೆ ಹಸಿವನ್ನು ಸವಿತಾ ಅವರ ಈ ಕವನದಲ್ಲಿ ಕಾಣಬಹುದು.

ಒಕ್ಕಲೆಬ್ಬಿಸದಿರಿ ನನ್ನ
ಈ ತುಂಡು ನೆಲವೆ
ನನಗೆ ಅನ್ನ ಚೆನ್ನ
ಅಗೋ ಅದೇ
ನಾ ಕೈಯಾರೆ ಬೆಳೆದ
ನಿಂಬೆ ದಾಳಿಂಬೆ
(ಮನವಿ, ದರುಶನ)

ಭಾರತ ಕೃಷಿ ಪ್ರಧಾನ ದೇಶ. ಮುಗಿಲಿನ ಮಳೆಯನ್ನು ಅವಲಂಬಿಸಿ ಕೃಷಿಗೆ ತೊಡಗಿರುವ ಈ ದೇಶದಲ್ಲಿ ಜೀವನೋಪಾಯಕ್ಕೆ ಸಾಕಾಗುವಷ್ಟು ಆಹಾರವನ್ನು ಬೆಳೆಯಲಾಗುತ್ತಿಲ್ಲ. ಅನ್ನ, ಹಸಿವು, ಸಾವು ಮಾನವನ ಬದುಕಿನಲ್ಲಿ ಅವಶ್ಯಕ ಅನಿವಾರ್ಯಗಳು. ಊಟವಿದ್ದರೆ ಮಾತ್ರ ಅದೇ ವಿಷವಾದಾಗ ಉಸಿರಾಡಲು ಸಾಧ್ಯವಿಲ್ಲ. ದಿನದಿಂದ ದಿನಕ್ಕೆ ಕೃಶನಾಗುತ್ತಾ ಹೋಗುವ ಮನುಷ್ಯ ಕೊನೆಗೊಂದು ದಿನ ಸಾವಿನ ಸಮಾಧಿ ಸೇರುತ್ತಾನೆ. ಶ್ರೀಮಂತ ವರ್ಗ, ದೀನ ದಲಿತರನ್ನು ತಮ್ಮ ಮನೆಗಳಲ್ಲಿ ಜೀತಕ್ಕಿಟ್ಟುಕೊಂಡು ಅವರ ಬಡತನವನ್ನು ಬಂಡಾವಾಳವಾಗಿ ಮಾಡಿಕೊಂಡು ತುಳಿಯುತ್ತಾ ಬಂದಿದ್ದಾರೆ. ಹೀಗೆ ತುಳಿತಕ್ಕೆ ಒಳಗಾದವರ ನೋವು, ಸಹನೆ, ಸಿಟ್ಟು, ಆಕ್ರೋಶ, ಹಸಿವು ಎಲ್ಲವನ್ನು ಕೆಳವರ್ಗದವರೇ ನುಂಗಿಕೊಂಡು ಇರಬೇಕು.

ಈ ಕಾಡಿನಲ್ಲಿ ಇದರ ಹಾಡಿನಲ್ಲಿ
ಬೆರೆತು ನಾನೀಗ ಅಭಿನ್ನ
ಒಮ್ಮೆ ಯೋಚಿಸಿ
ಬೇರು ಕಿತ್ತೆಸೆಯುವ ಮುನ್ನ
(ಅದೇ ಕವನ)

ರೈತನು ತನ್ನ ಬೆವರನ್ನು ಗಂಗೆಗೆ ಹೋಲಿಸಿ ಅದು ಹಳ್ಳವಾಗಿ ತುಂಬಿ ಹರಿಯುತ್ತದೆ ಎಂದು ಈ ಕವನ ಹೇಳುತ್ತದೆ. ನಮ್ಮ ಜನರು ಜಾಗತೀಕರಣವೆಂಬ ನೆಪದಲ್ಲಿ ಪರಿಸರವನ್ನು ನಾಶಮಾಡುತ್ತಾರೆ. ಆದ್ದರಿಂದ ಮಳೆಯು ಕಡಿಮೆಯಾಗುತ್ತದೆ. ರೈತನು ಮಳೆಯನ್ನು ನಂಬಿಕೊಂಡು ಜೀವನವನ್ನು ನಡೆಸುತ್ತಾನೆ. ಆದರೆ ಮಳೆಯು ಸರಿಯಾದ ಸಮಯದಲ್ಲಿ ಮಳೆಯಾಗದೆ ಹೋದರೆ ರೈತನ ಬೆಳೆಯು ನಾಶವಾಗುತ್ತದೆ. ಆಗ ರೈತನು ಸಾಲವನ್ನು ಮರುಪಾವತಿಯನ್ನು ಮಾಡಲು ಸಾಧ್ಯವಾಗದೇ ತನ್ನ ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ. ಲೇಖಕಿಯು ಈ ಕವನದಲ್ಲಿ ಉಳಿದಿದೆ ತುಸುವೆ ತ್ರಾಣ ಪಣಕ್ಕಿಟ್ಟೇನು ಪ್ರಾಣ ಎಂದು ರೈತನ ಕುರಿತು ಹೇಳುತ್ತಾರೆ.

ಕುಟುಂಬ
ನನ್ನ ಅಜ್ಜಿಯದು
ತುಂಬು ಸಂಸಾರ
ನನ್ನ ಅವ್ವನಿಗೆ
ನಾಲ್ಕು ಮಂದಿ ಮಕ್ಕಳು ನನಗೆ
ಒಬ್ಬಳೇ ಹೆಣ್ಣುಮಗಳು
ಎಲ್ಲ ನೆನಪಾಗುವುದು
(ಬೆಳಸು, ಕಾಡುಲಿಲ್ಲ ಹೂವುಗಳು)

ಈ ಕವನದಲ್ಲಿ ಒಂದು ಕುಟುಂಬದಲ್ಲಿರುವಂತಹ ಪ್ರೀತಿಯನ್ನು ಅವರ ಮಧ್ಯೆ ಹೊಂದಿಕೊಂಡು ಹೋಗುವಂತಹ ಧಾರಾಳ ಮನಸ್ಸಿನ ತುಡಿತವನ್ನು ಲೇಖಕಿಯು 'ಬೆಳಸು' ಎಂಬ ಕಾವ್ಯದ ಮೂಲಕ ಹೇಳಿದ್ದಾರೆ. ನಮ್ಮ ಹಿಂದಿನ ಪೀಳಿಗೆಯಲ್ಲಿ ಅವಿಭಕ್ತ ಕುಟುಂಬವಿತ್ತು. ಅದರಲ್ಲಿ ಕೆಲವೊಂದು ಕುಟುಂಬಗಳಲ್ಲಿ ಬಡತನದಿಂದ ಅವರುಗಳು ಅನ್ನವನ್ನು ಹಂಚಿಕೊಂಡು ಹೊಂದಾಣಿಕೆಯಿಂದ ಜೀವನ ನಡೆಸುತ್ತಿದ್ದರು. ಆದರೆ ಈ ಕವನದಲ್ಲಿ ಕುಟುಂಬದಲ್ಲಿ ಇರುವಂತಹ ಸದಸ್ಯರು ದ್ವೇಷವನ್ನು ಬಿಟ್ಟು ಅವರು ಜೀವನದಲ್ಲಿ ಎಲ್ಲರಂತೆ ಸಿರಿವಂತರಾಗಬೇಕು ಏನಾದರೂ ಸಾಧನೆಯನ್ನು ಮಾಡಬೇಕು ಎಂಬ ಹಂಬಲವನ್ನು ಹೊಂದಿದ್ದಾರೆ. ಕುಟುಂಬದಲ್ಲಿ ಎಷ್ಟೇ ಮನಸ್ತಾಪ, ನೋವು ನಲಿವುಗಳು ಇದ್ದರು ಕೂಡ ಬೇರೆಯವರಿಗೆ ನೋವಾಗದಂತೆ ಒಂದು ವೇಳೆ ಕಿತ್ತಾಡಿದರು ರಾಜಿಯಾಗುತ್ತಾರೆ.

ನಾನು ನನ್ನ ತಂಗಿ
ತಮ್ಮಂದಿರು ಹಂಚಿಕೊಂಡೆವು
ಅನ್ನದಂತೆಯೇ ಪ್ರೀತಿಯನ್ನು

ಸಾಧಿಸಿದೆವು ದ್ವೇಷವನ್ನು
ಬಿಟ್ಟುಕೊಟ್ಟೆವು ಹಠವನ್ನು
ಒಟ್ಟಾಗಿಯೇ ಕಂಡೆವು ಕನಸುಗಳನ್ನು
(ಅದೇ ಕವನ)

ಕೆಳವರ್ಗದ ಕುಟುಂಬಗಳಲ್ಲಿ ತನ್ನ ತಂಗಿ ಅಣ್ಣ, ತಮ್ಮ, ಅಪ್ಪನಿಗೆ ಯಾರಿಗೆ ತೊಂದರೆಯಾದರೂ ಆರೋಗ್ಯದಲ್ಲಿ ಏರುಪೇರಾದರೂ ಅವರನ್ನು ನೋಡಿ ಮರುಗುವಂತಹ ಗುಣವನ್ನು ನಮ್ಮ ಕುಟುಂಬಗಳಲ್ಲಿ ಇವೆ. ಕೆಲವೊಂದು ಕುಟುಂಬಗಳಲ್ಲಿ ಸದಸ್ಯರು ಯಾವ ಕೆಲಸವನ್ನು ಮಾಡಬೇಕು ಎಂದರೂ ಎಲ್ಲರ ಜೊತೆಯಾಗಿ ಮಾತನಾಡಿ ಪರಸ್ಪರ ಜೊತೆಯಾಗಿ ಹೆಜ್ಜೆಗಳನ್ನು ಹಾಕುತ್ತಾರೆ. ತನ್ನ ತಾಯಿ ನೋಯುವಳೆಂದು ಅವರಲ್ಲಿ ಎಲ್ಲರಂತೆ ನಾವು ಕೂಡ ಸಿರಿವಂತರಾಗಬೇಕು ಎಂಬುದು, ಜೀವನದಲ್ಲಿ ಏನಾದರೂ ಸಾಧನೆಯನ್ನು ಮಾಡಿ ತಂದೆ ತಾಯಿಯನ್ನು ನೋಡಿಕೊಳ್ಳಬೇಕು ಎಂಬುದು ಅವರ ತುಡಿತವಾಗಿರುತ್ತದೆ.

ಕೆಳವರ್ಗದ ಕುಟುಂಬಗಳಲ್ಲಿ ಮಕ್ಕಳು ಅವರ ವಿದ್ಯಾಭ್ಯಾಸದ ಜೊತೆಗೆ ಕೃಷಿಯಲ್ಲಿ ತಂದೆ ತಾಯಿಗಳಿಗೆ ಸಹಾಯವನ್ನು ಮಾಡುತ್ತಾರೆ. ಅವರಿಗೆ ಜೀವನಕ್ಕೆ ಆಧಾರವೆಂದರೆ ಕೃಷಿಯಾಗಿರುತ್ತದೆ. ತಾಯಿಯು ತನ್ನ ಮಗಳಿಗೆ ಹೊಂದಾಣಿಕೆಯ ಗುಣವನ್ನು ಹೇಳುತ್ತಾಳೆ. ಮಗಳಿಗೆ ಸಂಬಂಧಗಳ ಬೆಲೆಯನ್ನು ತಿಳಿಸಿಕೊಡುವಂತಹ ಗುಣ ಈ ಕವನದಲ್ಲಿದೆ. ಹೆಣ್ಣು ಚಿಕ್ಕ ವಯಸ್ಸಿನಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿ ಬೆಳೆಯುವಂತಹ ಗುಣವನ್ನು ತಿಳಿಸಿದ್ದಾರೆ. ಹೆಣ್ಣು ತಾನು ಬೆಳೆಸಿದಂತಹ ಸಸಿಯು ಭರಭರ ಬೆಳೆದು ಅದು ಮರವಾಗಿ ತನ್ನ ಸ್ವಾರ್ಥವೇ ಅದರ ಫಲವಾಗಿದೆ ಎಂದು ಹೇಳುತ್ತಾರೆ. ತಾಯಿಯು ಮಗಳನ್ನು ಮದುವೆ ಮಾಡಿಕೊಟ್ಟಾಗ ಅವಳನ್ನು ಹಕ್ಕಿಗಳಿಗೆ ಹೋಲಿಸಿ ಹೇಳಿದ್ದಾಳೆ. ನನ್ನ ಮಗಳು ಬೇರೆಯವರ ಮನೆಯ ದೀಪವನ್ನು ಬೆಳಗಲು ಹೋಗುತ್ತಾಳೆ. ಅವಳಿಗೆ ರೆಕ್ಕೆಗಳು ಇಲ್ಲ, ಬೇರೆಯವರ ಜೀವನಕ್ಕೆ ಆಧಾರವಾಗಿದ್ದಾಳೆ. ತಾಯಿಗೆ ಒಳಗೊಳಗೆ ಮುಳುವಾಯಿತು ತನ್ನ ವೇದನೆಯೆಂದು ತನ್ನ ಪ್ರೀತಿಯನ್ನು ಹೇಳಿಕೊಳ್ಳುತ್ತಾಳೆ.

ಇಷ್ಟು ದೊಡ್ಡ ಮನೆ
ಯಾರು ಸಂಭಾಳಿಸುವರು?
ಇಷ್ಟು ಚಂದದ ತೋಟ
ಯಾರು ನೋಡಿಕೊಳ್ಳುವವರು?
ಒಡವೆ ವಸ್ತು ಸೀರೆ

ಯಾರಿಟ್ಟು ನಲಿವರು?

(ನಿನ್ನ ನಂತರ, ಕಾಡುಲಿಲ್ಲಿ ಹೂವುಗಳು)

ತಾನು ಮಾಡಿದ ಆಸ್ತಿಯು ತನ್ನವರಿಗೆ ಸೇರಬೇಕು ಎನ್ನುವ ಹಂಬಲವು ಕಾರಣವಾಗಿರಬಹುದು. ಈ ಕಲ್ಪನೆಯು ಪಾತಿವ್ರತ್ಯವನ್ನು ವೈಭವೀಕರಿಸಿದಂತೆ ತಾಯ್ತನವನ್ನು ಉದಾತ್ತೀಕರಿಸಿದೆ. ಎಲ್ಲ ಸ್ತ್ರೀಯರು ತಾಯಂದಿರಾಗುತ್ತಾರೆಂದು ಹೇಳಲಾಗುವುದಿಲ್ಲ. ಹೆಣ್ಣುಮಕ್ಕಳು ಎಂದಿದ್ದರೂ ನೆರೆಮನೆಗೆ ಹೋಗುವವರು ಎನ್ನುವ ಕಲ್ಪನೆಯಲ್ಲಿ ಹೆಣ್ಣು ಅಕ್ಕರೆಯ ಗಂಡನು ಮುದ್ದಾದ ಮಕ್ಕಳ ಜೊತೆಯಾಗಿ ಜೀವನವನ್ನು ನಡೆಸುತ್ತಾಳೆ. ನಮ್ಮಲ್ಲಿ ಇರುವಂತಹ ಸಂಪ್ರದಾಯದಲ್ಲಿ ನಮ್ಮ ಹೆಣ್ಣುಮಕ್ಕಳಿಗೆ ಒಡವೆ, ಸೀರೆಯೆಂದರೆ ಅವರಿಗೆ ಪ್ರಿಯವಾದ ವಸ್ತುಗಳು. ಅಂತಹ ವಸ್ತುಗಳನ್ನು ಯಾರಿಟ್ಟು ನಿಲ್ಲುವರು ಕೆಲವು ಕುಟುಂಬಗಳಲ್ಲಿ ಗಂಡುಮಕ್ಕಳು ಇರುತ್ತಾರೆ. ಅಂಥವರಿಗೆ ಹೆಣ್ಣುಮಗು ಬೇಕು ಎಂಬ ಕನಸು ಕಂಡಿರುತ್ತಾರೆ. ನಮ್ಮ ಸಮಾಜದಲ್ಲಿ ಮಗುವಿಗಾಗಿ ಹಂಬಲಿಸಿದ್ದು ಕಡಿಮೆ, ಹೆಣ್ಣುಮಗುವನ್ನು ಅನ್ಯವಾಗಿ ಕಾಣುವ ಕುಟುಂಬಗಳು ಮಗಳ ಬೆಳವಣಿಗೆ ಖರ್ಚು ಮಾಡಿದ ಹಣವನ್ನು ವ್ಯರ್ಥ ಎಂದು ಪರಿಗಣಿಸುತ್ತಾರೆ. ಪುರುಷ ಪ್ರಧಾನ ಸಮಾಜವು ಮಾಡಿದ ಕೆಲಸಕ್ಕೆ, ಹಾಕಿದ ಹಣಕ್ಕೆ ನಿರೀಕ್ಷಿತ ಪ್ರತಿಫಲವನ್ನು ಅಪೇಕ್ಷಿಸುತ್ತದೆ. ಮಗಳ ಮದುವೆ ಮಾಡಲು ಹೇರಳವಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ಒಡವೆ ವಸ್ತ್ರಗಳನ್ನು ಉಡುಗೊರೆಯಾಗಿ ಕೊಡಬೇಕಾಗುತ್ತದೆ ಎಂಬ ಕೊರಗು ತಂದೆ ತಾಯಿಗಳಿಗೆ ಇರುತ್ತದೆ.

ಹೆಣ್ಣಿನ ಜೀವನವು ಮದುವೆಯಾಗಿ ಮಕ್ಕಳಾದರೆ ಅವರ ಜೀವನ ಮುಗಿಯುತ್ತದೆ ಎಂದು ಹೇಳಲಾಗುವುದಿಲ್ಲ. ಜೀವನವೇ ಒಂದು ನಾಟಕವಿದ್ದಂತೆ, ಅದರಲ್ಲಿ ನಾವುಗಳು ಪಾತ್ರಧಾರಿಗಳು. ಜೀವನ ಮುಗಿಯುವವರೆಗೂ ನಟನೆಯನ್ನು ಮಾಡಬೇಕು ಎಂಬುದನ್ನು ಲೇಖಕಿಯು ಹೇಳಬಯಸುತ್ತಾರೆ.

ಮಗನಿಗೆ ದೊಡ್ಡ ವಹಿವಾಟು
ಮುಂಬಯಿಯಲ್ಲಿ
ಮಗಳು ಮದುವೆಯಾಗಿ
ಮಕ್ಕಳೊಂದಿಗೆ ಕಲ್ಕತ್ತೆಯಲ್ಲಿ
ಹಣ್ಣು ಹಣ್ಣು ಮುದುಕ–ಮುದುಕಿ
ಸಾಗರದ ಒಂದು ಮೂಲೆ ಚಿಕ್ಕಹಳ್ಳಿಯಲ್ಲಿ
(ಬಾಳಸಂಜೆ, ಕಾಡುಲಿಲ್ಲಿ ಹೂವುಗಳು)

ನಮ್ಮ ಸಮಾಜವ್ಯವಸ್ಥೆಯಲ್ಲಿ ಬಾಲಕರು ತಂದೆಯ, ಬಾಲಕಿಯರು ತಾಯಿಯ ಪಡಿಯಚ್ಚಿನಲ್ಲಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂಬುದನ್ನು ನೀರಿಕ್ಷಿಸುತ್ತದೆ. ಎಲ್ಲ ತಂದೆ-ತಾಯಿಗಳು ಕೂಡ ತಮ್ಮ ಮಕ್ಕಳು ಓದಿ ವಿದ್ಯಾವಂತರಾಗಬೇಕು ಎಂಬುದು ಅವರ ಕನಸು ಆಗಿರುತ್ತದೆ. ಎಷ್ಟೇ ಕಷ್ಟವಾದರೂ ತಂದೆ-ತಾಯಿ ತಮ್ಮ ಮಕ್ಕಳು ಓದಿ ಒಳ್ಳೆಯ ಕೆಲಸ, ಉದ್ಯೋಗವನ್ನು ಪಡೆದುಕೊಂಡರೆ ತಂದೆ ತಾಯಿಗಳಿಗಿಂತ ಸಂತೋಷಪಡುವವರು ಈ ಜಗತ್ತಿನಲ್ಲಿ ಬೇರೆಯಾರೂ ಇಲ್ಲ. ಅಂತಹ ತಂದೆ ತಾಯಿಗಳನ್ನು ವಯಸ್ಸಾದ ಮೇಲೆ ಅವರ ಜೊತೆಗೆ ಮಕ್ಕಳ ಕಾಣದ ಊರಿನಲ್ಲಿ ಪರಿಚಯವಿಲ್ಲದೆ ಇರುವಂತಹ ಜನರ ಮಧ್ಯೆ ಜೀವನ ನಡೆಸುತ್ತಾರೆ. ತಮ್ಮ ಹೆಂಡತಿ, ಮಕ್ಕಳು, ತಮ್ಮ ಕುಟುಂಬವೆಂದು ತಮ್ಮ ಕೆಲಸದಲ್ಲಿ ತೊಡಗಿಕೊಂಡಿರುತ್ತಾರೆ. ಮಗನು ಮುಂಬಯಿಯಲ್ಲಿ, ಮಗಳು ಕಲ್ಕತ್ತೆಯಲ್ಲಿ ಆದರೆ ತಂದೆ-ತಾಯಿ ಮಾತ್ರ ಸಾಗರದ ಒಂದು ಮೂಲೆಯ ಹಳ್ಳಿಯಲ್ಲಿ ತಮ್ಮ ಮಕ್ಕಳು ವಾಪಸ್ಸು ಬರುತ್ತಾರೆ ಎಂಬ ಭರವಸೆಯಲ್ಲಿ ಕನಸು ಕಾಣುತ್ತಾರೆ. ದೂರದಿಂದಲೇ ಮಗಳು ಫೋನಿನಲ್ಲಿ ಹೇಗಿರುವೆಯಮ್ಮ ಎಂದು ವಿಚಾರಿಸಿದರೆ ಯಾವ ಪ್ರತಿಫಲ. ಈ ಕಡೆ ಮಗನು ನಾನಿಲ್ಲದಿದ್ದರೆ ಮುಳುಗಿಯೇ ಹೋಗುವುದು ಕಂಪನಿ ಎಂದು ನೆಪವನ್ನು ಒಡ್ಡಿ ಕಾಗದ ಗೀಚಿರುವನು. ತಂದೆ-ತಾಯಿಗಳಿಗೆ ಎಷ್ಟೇ ಆಸ್ತಿ, ಮನಿಯಾರ್ಡರ್ ಕಳುಹಿಸಿದರೆ ಯಾವ ಪ್ರಯೋಜನ? ಅವರಿಗೆ ಆಸ್ತಿಯೆಂದರೆ ಮಕ್ಕಳು. ಅವರೇ ಜೊತೆಯಲ್ಲಿ ಇಲ್ಲದಿದ್ದರೆ ಬೇಸರದ ಜೀವನ ಕಳೆಯುತ್ತಾರೆ. ನಮ್ಮ ಸಮಾಜದಲ್ಲಿ ಅದು ಎಷ್ಟು ಕುಟುಂಬಗಳು ತಂದೆ ತಾಯಿಗಳಿಗೆ ಮಕ್ಕಳು ಜೊತೆಯಲ್ಲಿ ಇರಬೇಕು ಎಂಬ ಹಂಬಲದಲ್ಲಿ ಜೀವನ ನಡೆಸುತ್ತಾರೆ.

ಇಲ್ಲೇ ಇರು ಆಡಿಕೊಂಡಿರು
ಎಲ್ಲಿಯೂ ಹೋಗದಿರು
ಹೊಂಗುಟ್ಟಿತು ಮಗು
ಮುಖದ ತುಂಬ ನಗು
ಹೊರಳುತ್ತಾ ಉರುಳುತ್ತಾ
ಅಂಬೆಗಾಲನು ಇರಿಸಿತು
ಲಜ್ಜೆ ಬಟ್ಟೆಯ ತೊಟ್ಟು
(ತಾಯಿ ಮಗುವಿನ ಆಟ, ದರುಶನ)

ಮಕ್ಕಳ ಬೆಳವಣಿಗೆಗೆ ತಾಯಿಯ ಕಾಳಜಿ ಹೆಚ್ಚಾಗಿರುತ್ತದೆ. ಆದರೆ ಮಕ್ಕಳನ್ನು ಕುರಿತ ಆಕಾಂಕ್ಷೆಯು ತಾಯಿಯು ತನ್ನ ಮಗುವನ್ನು ನೀನೆಮ್ಮ ನಮ್ಮ ತಂದೆ ಎಂಬ ಮುದ್ದಾದ ಮಾತುಗಳನ್ನು ಮಗುವಿಗೆ ತನ್ನ ತಾಯಿಯು ಹೇಳುತ್ತಾಳೆ. ತಾಯಿಯು ತನ್ನ ಮಗು ಹೊರಳುತ್ತಾ ಉರುಳುತ್ತಾ ಅಂಬೆಗಾಲನ್ನು ಇರಿಸಿತು. ಮಗು ಲಜ್ಜೆ ಬಟ್ಟೆಯ ತೊಟ್ಟು ಇವೆಲ್ಲಾ ಚಟುವಟಿಕೆಗಳನ್ನು

ತನ್ನ ಮಕ್ಕಳಲ್ಲಿ ಕಾಣುವ ಹಂಬಲವನ್ನು ತಾಯಿ ವ್ಯಕ್ತಪಡಿಸುವಳು. ಇಲ್ಲಿ ತಾಯಿ ಮಕ್ಕಳನ್ನು ಒಂದುಗೂಡಿಸಿರುವರು. ಈ ಕವಿತೆಯಲ್ಲಿ ಕಂದನನ್ನು ತಾಯಿ ದೈವೀಕರಿಸುವಳು. ತಾಯಿಯಾದವಳು ಮಗುವನ್ನು ಮುದ್ದಿಸುತ್ತಾ ಹೋಗುತ್ತಾಳೆ. ತಾಯಿಗೆ ತನ್ನ ಮಗುವಿನ ಆಟವನ್ನು ನೋಡಿ ತನ್ನ ಗಂಡನನ್ನು ತನ್ನ ನೋವನ್ನು ಮರೆಯುವಂತೆ ಮಾಡುತ್ತದೆ. ಮಗನ ಬಗ್ಗೆ ಕಾಳಜಿಯನ್ನು ಹೊಂದಿರುವ ಹೆಣ್ಣು ರಕ್ಷಕಿಯೂ ಆಗುವ ಕಲ್ಪನೆಯಿದೆ. ಈಗಿನ ಜಾಗತೀಕರಣದ ಪ್ರಭಾವದಿಂದ ಶ್ರೀಮಂತ ಕುಟುಂಬಗಳಲ್ಲಿ ತಂದೆ–ತಾಯಿಗಳು ಮಕ್ಕಳ ಜೊತೆಗೆ ಆಟವಾಡುವುದೇ ಕಡಿಮೆ. ಕೆಲಸ ಕೆಲಸವೆಂದು ಮಗುವಿಗೆ ಬೊಂಬೆಯನ್ನು ಕೊಟ್ಟು ಅವರನ್ನು ನೋಡಿಕೊಳ್ಳಲು ಬೇರೆಯ ಕೆಲಸದವಳನ್ನು ನಿರ್ಮಿಸಿ ಬಿಡುತ್ತಾರೆ. ಆಗ ಮಗು ಗೊಂಬೆಗೆ ತಾಯಿಯಂತೆ ಅದನ್ನು ಆರೈಕೆಯನ್ನು ಮಾಡುತ್ತದೆ. ತಾಯಿ ಮಗುವಿಗೆ ಹಾಲುಣಿಸಿ ಜೋಗುಳ ಹಾಡಿಸಿ ಮಗುವನ್ನು ಮಲಗಿಸುವುದು, ತಾಯಿ ತನ್ನ ತಾಯ್ತನದ ಸುಖವನ್ನು ಪಡೆಯುತ್ತಾಳೆ? ಮಗು ಎಷ್ಟು ಹೊತ್ತು ಗೊಂಬೆಯ ಜೊತೆಗೆ ಆಟವನ್ನು ಆಡಿ ಬೇಸರಗೊಂಡು ಹೋ... ಎಂದರಚಿತು. ಆಗ ಮಹದಾಯಿ ಬಂದು ಬೆವರನೊರೆಸುತ್ತಾ ಸೀರೆ ಕೊಡವುತ್ತ ಗೊಂಬೆಯನೆತ್ತಿಟ್ಟು ಮಗುವಿಗೆ ಮುತ್ತಿಟ್ಟು ತಾಯಿ ಸಾಕಿನ್ನು ಆಟ ಎಂದು ಎದೆಗೆ ಒತ್ತಿಕೊಂಡು ಮರೆಯಾದಳು. ತಾಯಿ ಮತ್ತು ಮಗುವಿನ ಆಟವನ್ನು ನೋಡುವಂತಹ ದೃಶ್ಯ ಅಪರೂಪದ್ದಾಗಿದೆ ಎನ್ನುತ್ತ ತಾಯ್ತನದ ಸಂಭ್ರಮ, ಹೆಣ್ತನದ ಸಡಗರಗಳಲ್ಲಿ ಹೆಣ್ಣಿಗೆ ಮಗುವೇ ಜೀವನ. ಹೆಣ್ತನ, ತಾಯ್ತನ ಎರಡಕ್ಕೂ ಇಲ್ಲಿ ಮನ್ನಣೆ ಸಿಕ್ಕರೆ ಅವಳ ಬಾಳು ಪರಿಪೂರ್ಣ.

ವಿವಾಹ ಮತ್ತು ಪ್ರೇಮ
ಅಚ್ಚಚ್ಚು ಬೆಲ್ಲದಚ್ಚು
ಅಲ್ಲಿ ನೋಡು ಇಲ್ಲಿ ನೋಡು
ಸಂಪಂಗಿ ಮರದಲ್ಲಿ ಕಾಗೆ ನೋಡು
ಗೆಳತಿ ಗುಣಗುಣಿಸಿದಳು
ನಾನು ನೋಡಿದೆ ಮರದ ಮೇಲೆ
ಕುಳಿತುಕೊಂಡು ಹುಳವೊಂದನ್ನು
ಅವುಚಿ ಹಿಡಿದು ಕಾಗೆ ಕೂಗುತ್ತಿತ್ತು.
(ಕಾಗೆ ಮತ್ತು ಕೋಗಿಲೆ, ಕಾಡುಲಿಲ್ಲಿ ಹೂವುಗಳು)

ಎರಡು ಒಂದೇ ಬಣ್ಣವಿರುವ ಪಕ್ಷಿಗಳ ಕುರಿತು ಈ ಕವಿತೆ ಹೇಳುತ್ತದೆ. ಮಕ್ಕಳು ಹಾಡುವಂತಹ ಕಣ್ಣುಮುಚ್ಚಾಲೆ ಬಗ್ಗೆ ಹೇಳುತ್ತದೆ. ಗೆಳತಿಯ ಜೊತೆಗೆ ಸಂಭಾಷಣೆಯನ್ನು ನಡೆಸುವಂತಹ ಎರಡು ವಿಭಿನ್ನ ಮನಸ್ಸುಗಳ ಕುರಿತ ಪ್ರಸಂಗವಿದೆ. ಕಾಗೆಯು ಒಂದು

ಹುಳುವನ್ನು ಹಿಡಿದು ತಂದು ತನ್ನ ಬಳಗವನ್ನು ಕರೆಯುವುದು. ಕೋಗಿಲೆ ಕೂಗುವಂತಹ ಧ್ವನಿ ಕಿವಿಗೆ ಕೇಳುವುದಕ್ಕೆ ಇಂಪಾಗಿದೆ. ಎರಡು ಪಕ್ಷಿಗಳಲ್ಲಿ ಯಾವುದನ್ನು ಆರಿಸಿಕೊಳ್ಳಬೇಕು ಏತ-ಧೂತ ಎಂದು ಆ ನಾಯಕಿಯು ಯಾವ ಪಕ್ಷಿ ಬೇಕು ಎಂಬ ದ್ವಂದ್ವದ ಸೂಚನೆಯಿದೆ.

ಕೋಗಿಲೆ ಮತ್ತು ಕಾಗೆ ಕಾ.. ಕಾ... ಕೂಹೂ... ಕೂಹೂ... ಎಂಬ ಧ್ವನಿಗಳ ಸಂಕೇತದ ಮೂಲಕ ತಿಳಿಸಿದ್ದಾರೆ. ಮೂರು ಶಬ್ದಗಳ ಮೂಲಕ ಮನಸ್ಸಿನಲ್ಲಿ ಆಗಿರುವ ತಲ್ಲಣಗಳನ್ನು ಕುರಿತು ಹೇಳುತ್ತದೆ. ಆ ಧ್ವನಿಗಳ ಎರಡು ಪ್ರತೀಕಗಳನ್ನು ಕವಿತೆ ಹೇಳುತ್ತದೆ. ಕಿವಿಗೆ ಕಿರಿ ಕಿರಿ ಕಣ್ಣಿಗೆ ನೋಡಿದ ದೃಶ್ಯ ಆಹಾ! ಆಹಾ! ಅಯ್ಯೋ! ಎಂತಹ ಧ್ವನಿ ಬೇಸರದ ಕಿವಿಯಿಂದ ಕೇಳಿದ್ದು ಕಣ್ಣಿನಿಂದ ನೋಡಿದ ದೃಶ್ಯ ಕೋಗಿಲೆಯು ತನ್ನ ಮೊಟ್ಟೆಯನ್ನು ಬೇರೆ ಗೂಡಿನಲ್ಲಿಟ್ಟು ತನ್ನ ತಾಯ್ತನವನ್ನು ಮರೆತಿರುವುದು ಕಂಡು ಮನಸ್ಸಿಗೆ ನೋವು.

ನಾನು ನೋಡಿದೆ
ಮರದ ಮೇಲೆ ಕುಳಿತುಕೊಂಡು
ಕೋಗಿಲೆ ಹಾಡುತ್ತಿತ್ತು
ಕುಹೂ.. ಕೂಹೂ... ಕುಹೂ...
ಆಹಾ! ಎಂಥಾ ದನಿ
ಕಿನ್ನರಿ ಕಿವಿ ತುಂಬಿತು
(ಅದೇ ಕವನ)

ಕಣ್ಣಿಗೆ ಕಾಣಿಸಿದ, ಕಿವಿಗೆ ಕೇಳಿದ ಎರಡು ಪ್ರಸಂಗಗಳು ಕಾಗೆಯ ತಾಯ್ತನವನ್ನು ಕೋಗಿಲೆಯ ಕಟುಕತನವನ್ನು ಲೇಖಕಿಯು ಎರಡು ಮರಗಳನ್ನು ಆರಿಸಿಕೊಂಡು ಅದರಲ್ಲಿ ಸಂಪಿಗೆ ಮತ್ತು ಮಾವಿನ ಮರವನ್ನು ತೆಗೆದುಕೊಂಡು ಎದೆಯಲ್ಲಿ ಕಾಗೆಯ ತಾಯ್ತನವನ್ನು ಮತ್ತು ಕೋಗಿಲೆಯ ಧ್ವನಿಯನ್ನು ಕಂಠದಲ್ಲಿ ಇಡುವುದು ಕಲೆ ಮತ್ತು ಹೃದಯವಂತಿಕೆ ಬೇಕು ಎಂಬುದನ್ನು ಈ ಕವಿತೆ ಹೇಳುತ್ತದೆ. ಕಲೆಯಾತ್ಮಕವಾಗಿ ಕೋಗಿಲ ಮೂಡಿಬಂದರೆ, ಹೃದಯವಂತಿಕೆಗೆ ಕಾಗೆ ಸಂಕೇತವಾಗಿ ಮೂಡಿಬಂದಿದೆ. ಸಾಮಾನ್ಯವಾಗಿ ಎಲ್ಲರೂ ಕೋಗಿಲೆಯ ಗುಣವನ್ನು ಇಷ್ಟಪಡುತ್ತಾರೆ. ಆದರೆ ಕಾಗೆಯನ್ನು ಕೀಳರಿಮೆಯಿಂದ ಕಾಣುತ್ತಾರೆ. ಕಾಗೆಯ ಗುಣವೆಂದರೆ ಕೋಗಿಲೆಯು ಹೋಗಿ ತನ್ನ ಮೊಟ್ಟೆಯನ್ನು ಕಾಗೆಯ ಗೂಡಿನಲ್ಲಿಟ್ಟು ಬಂದರೆ ಕಾಗೆಯು ಅದನ್ನು ಸಂರಕ್ಷಿಸಿ ಅದು ಬೆಳೆಯುವವರೆಗೆ ಜೊತೆಗೆ ಇರುತ್ತದೆ. ಅದು ಯಾವಾಗ ಬೆಳೆದು ದೊಡ್ಡದಾಗಿ ಕೂಹೂ ಕೂಹು ಎಂದು ಕೂಗುತ್ತದೆಯೋ ಆಗ ಕಾಗೆಯು ಇದು ತನ್ನ ಮಗುವಲ್ಲ ಎಂಬ ಕಲ್ಪನೆಗೆ ಬರುತ್ತದೆ. ಅದಕ್ಕೆ ಲೇಖಕಿಯು ಕಾಗೆ ಮತ್ತು ಕೋಗಿಲೆಯನ್ನು ಕುರಿತು ತನ್ನ ಗೆಳತಿಯ ಜೊತೆಗೆ ಸಂಭಾಷಣೆಯಲ್ಲಿ ಕವಿತೆ ಮುಗಿಯುತ್ತದೆ.

ಹತ್ತು ಜನರು ಓದಿಯಾದ ಮೇಲೆ
ನನ್ನ ಕೈಸೇರಿತು ಮಹಮದನ ಪತ್ರ
ತನ್ನೂರಿನ ಬಗ್ಗೆ
ತನ್ನ ಅಕ್ಕತಂಗಿಯರ ಬಗ್ಗೆ
ಮಲ್ಪೆಯ ಮೀನು, ಸಮುದ್ರದ ಹಿನ್ನೀರು
ಗೇರು ಹಣ್ಣು, ಗುಳ್ಳದ ಬಗ್ಗೆ
(ಮಹಮದನ ಪ್ರೇಮಪತ್ರ, ಕಾಡುಲಿಲ್ಲಿ ಹೂವುಗಳು)

ಈ ಕಾವ್ಯವು ಬಾಲ್ಯದ ಗೆಳೆಯನಿಗೆ ಬರೆದ ಓಲೆ ಇನ್ನು ಇಂತಹ ಗೆಳೆತನವೂ ಸಾಧ್ಯವಿಲ್ಲದ ಸಾಮಾಜಿಕತೆಯನ್ನು ಕುರಿತು ಹೇಳುತ್ತದೆ. ಹೆಣ್ಣಿನ ಚಹರೆಗಳನ್ನು ಬದಲಿಸಿವೆ. ಹೆಣ್ಣಿನ ಜೈವಿಕತೆಗೆ ಕೌಟುಂಬಿಕ, ಸಾಮಾಜಿಕ ನಿರ್ಬಂಧತೆಯಿದೆ. ತನ್ನ ಗೆಳೆಯನು ತನ್ನೂರಿನ ಬಗ್ಗೆ ತನ್ನ ಅಕ್ಕತಂಗಿಯರ ಕುರಿತು ಬರೆದಿರುವಂತಹ ಪತ್ರ ಹೆಣ್ಣಿನ ಭಾವನೆಗಳ ಸಂವಹನಕ್ಕೆ ಭಾಷೆ ತೊಡಕಾಗುತ್ತದೆ ಎಂಬುದು ಈ ಕವಿತೆ ತಿಳಿಸುತ್ತದೆ. ಹೆಣ್ಣು ಗಂಡಿನ ಅನುಭವ ಲೋಕಗಳು ಬೇರೆ ಬೇರೆಯಾದ ವ್ಯವಸ್ಥೆಯಲ್ಲಿ ಸಂವಹನದ ಮೂಲಕ ಮಾತನಾಡುವಂತಹದ್ದು ತನ್ನ ಬಾಲ್ಯದ ಗೆಳೆಯನು ಈದ್ ಮನೆಗೆ ಬರಲೇಬೇಕೆಂದು ತನ್ನ ಮನೆಯ ಬಗ್ಗೆ ಅವರು ಪತ್ರದಲ್ಲಿ ಬರೆಯುತ್ತಾ ಹೋಗಿದ್ದಾರೆ. ಆದರೆ ತನ್ನ ಗೆಳೆಯನ ಮೇಲೆ ತನಗೆ ಯಾವ ಪ್ರೀತಿಯೂ ಇಲ್ಲ. ಆದರೆ ಜನರು ಅದಕ್ಕೆ ಪ್ರೀತಿಯ ಮುದ್ರೆ ಒತ್ತಿ ಹೇಳಿದ್ದಾರೆ. ತನ್ನ ಗೆಳೆಯನ ಜೊತೆಯಲ್ಲಿ ಅವನನ್ನು ಭೇಟಿಯಾಗಬೇಕು ಎಂದರೆ ಅವರಿಗೆ ಮಸೀದಿಯೂ ಅಡ್ಡ ಬರುತ್ತಿತ್ತು. ಲೇಖಕಿಯು ಅವನ ಪ್ರೀತಿ ಹೂವಿನಷ್ಟೇ ತಾಜಾ, ಕೋಮಲ, ವಜ್ರದಷ್ಟೇ ಹೊಳಪು ಎಂದು ವಜ್ರಕ್ಕೆ ಹೋಲಿಸಿದ್ದಾರೆ. ಜನರು ತನ್ನ ಬಗ್ಗೆ ಅವರು ಹೇಳಿದ ಹಾಗೆ ನಾನು ಮಹ್ಮದ್‌ನನ್ನು ಪ್ರೀತಿಯನ್ನು ಮಾಡುತ್ತೇನೆ ಎಂದು ಲೇಖಕಿಯು ಈ ಕವನದಲ್ಲಿ ಅಂತರಜಾತಿಯ ಪ್ರೇಮವನ್ನು ಒಪ್ಪಿಕೊಳ್ಳುವಂತಹ ರೀತಿಯನ್ನು ಜನರು ಗಾಳಿ, ಬೆಂಕಿಯು ಸೇರಿಕೊಂಡು ಗಾಳಿಯು ಜೋರಾಗಿ ಉರಿದರೆ ಬೆಂಕಿಯು ಉರಿಯುತ್ತದೆ. ಆದರೆ ಜನರು ಯಾವುದೇ ವಿಷಯನ್ನು ಆದರೂ ಎಷ್ಟು ಹೊತ್ತು ಮಾತನಾಡಬಹುದು. ಆವರಿಗೆ ಬೇರೆಯ ವಿಷಯ ಸಿಗುವವರೆಗೆ ಎಷ್ಟು ಹೊತ್ತು ಉರಿದರೇನು ಅಂತಹ ಉರಿಯೊಳಗೆ ಬಿರಿಯುತ್ತಿತ್ತು. ಬಿರಿದು ತಾನೇ ಬೆಳಗುತ್ತಿತ್ತು. ಅವರ ಮಧ್ಯೆ ಪ್ರೇಮ ಪುಷ್ಪ ಅರಳುತ್ತಿತ್ತು. ಪ್ರೇಮದಲ್ಲಿ ಅವರ ಮಧ್ಯೆ ಎಷ್ಟೇ ಅಡೆತಡೆಗಳು ಬಂದರೂ ಅವರು ಒಂದಾಗುತ್ತಾರೆ ಎಂಬುದರ ಮೂಲಕ ಕವಿತೆ ಮುಗಿಯುತ್ತದೆ.

ಈ ಒಂದು ಕ್ಷಣದ ಹಿಂದೆ
ನಿನ್ನ ಬಾದಾಮಿ ಕಣ್ಣುಗಳ

ಪರಿಚಯ ನನಗಿರಲಿಲ್ಲ
ನಿನ್ನ ಬೆವರಿನ ಪರಿಮಳಕ್ಕೆ
ನನ್ನ ಮೂಗು ಅರಳುತ್ತದೆಯೆಂದು
ನನಗೆ ಗೊತ್ತಿರಲಿಲ್ಲ.
(ಈ ಒಂದು ಕ್ಷಣದ ಹಿಂದೆ, ಕಾಡುಲಿಲ್ಲಿ ಹೂವುಗಳು)

ಈ ಕವಿತೆಯಲ್ಲಿ ಗೆಳೆಯನ ಚಾಂಚಲ್ಯ, ದೃಢತೆಯಿಲ್ಲದ ಪ್ರೀತಿಯ ಪರಿಚಯವಾಗುತ್ತದೆ. ಕಲ್ಪನೆಯಲ್ಲಿ ಪ್ರೀತಿಯ ಅನಾದಿ, ಅನಂತ ಬೆವರು ಕಣ್ಣೀರು ನೆತ್ತರುಗಳಿಂದಲೇ ಈ ಪ್ರೀತಿ ಪ್ರೇಮದಷ್ಟು ರಂಜಕವೂ ರೋಚಕವೂ ಆದ ಅನುಭವವು ಜೀವನದಲ್ಲಿ ಬೇರೊಂದಿಲ್ಲ. ಬದುಕಿನ ಯಾವುದೇ ಹಂತದಲ್ಲಿ ಹೆಚ್ಚು ನೋವನ್ನು ಅನುಭವಿಸುವವಳು ಹೆಣ್ಣು. ಪ್ರೀತಿ ಪ್ರೇಮಗಳು ಈ ರೀತಿಯ ಸ್ಪಂದನೆಯುಳ್ಳದ್ದು ಅದು ಮನಸ್ಸಿನಲ್ಲೇ ಗಟ್ಟಿಯಾಗುವಂಥದ್ದು. ಹೆಣ್ಣಾಗಿ ಹುಟ್ಟಿದ ಜೀವವೊಂದು ತನ್ನ ಬದುಕಿನಲ್ಲಿ ಅಂಥದ್ದೊಂದು ಕ್ಷಣವನ್ನು ಅನುಭವಿಸಿ ಹೊರಬಂದೇ ಇರುತ್ತಾಳೆ. ಗಂಡು ಹೆಣ್ಣು ಒಬ್ಬಳ ಕಣ್ಮುಚ್ಚಿ ಮತ್ತೊಬ್ಬಳಿಗೆ ಮುತ್ತಿಟ್ಟು ಹೆಣ್ಣಿನ ಪ್ರೀತಿ ಮರೆತ ಸಂಗತಿಗಳೇ ಹೆಚ್ಚು. ಗಂಡು ಯಾವುದೇ ಸಮಯದಲ್ಲಿ ಹೆಣ್ಣನ್ನು ಒಂದೇ ಆಗಿ ಮತ್ತು ಆ ಕ್ಷಣವೇ ಬೇರೆಯಾಗಿ ಕಾಣುವಂತಹದ್ದು. ಎಂದಿನಿಂದಲೂ ಪುರುಷ ಸ್ತ್ರೀಯನ್ನು ಸ್ತ್ರೀ ಪುರುಷನನ್ನು ಪರಸ್ಪರ ಬಯಸುತ್ತಾ ವರಿಸುತ್ತಾ ಬಂದಿದ್ದಾರೆ. ತನ್ನ ಭೌತಿಕ ಬದುಕಿನ ಯಶಸ್ಸಿನ ಕಡೆಗೆ ಗಂಡಿನ ನೋಟವಿರುತ್ತದೆ. ಹೆಣ್ಣು ತನ್ನ ಪ್ರೀತಿಯನ್ನು ಅವನ ತುಟಿಯಲ್ಲಿ ವಸಂತನ ನಗುವನ್ನು ಕಂಡು ಓಡಿ ಬಂದಿದ್ದೆನಾದರೂ ಅವಳ ಪ್ರೀತಿ ಮಂಜಿನಲ್ಲಿ ಇಡಿಯಾಗಿ ಹೂತು ಹೋಗಿದ್ದೇನೆ ಎಂದು ನಾವು ಇಷ್ಟಪಡುವರು ನಮ್ಮ ಜೊತೆಯಲ್ಲಿಯೇ ಇದ್ದರೆ ಸಮಯ ಕಳೆದು ಹೋಗಿದ್ದು ತಿಳಿಯುವುದಿಲ್ಲ. ಹಾಗೆಯೇ ಬೆಳಗಿದ ಸೂರ್ಯನನ್ನು ಭೇಟಿಯಾಗೋಣ ಎಂದು ಕರೆದಿರುವನು. ಮುಸ್ಸಂಜೆಗೆ ಹೋಗೋಣ ಎಂಬ ಬೇಸರದ ಮಾತುಗಳನ್ನು ಮಹಿಳೆ ಕವನದಲ್ಲಿ ಹೇಳಿದ್ದಾರೆ.

ಯಾರಲ್ಲಿ? ಯಾರಿದ್ದೀರಿ?
ಬಂದಿದ್ದೇನೆ, ಬಾಗಿಲು ತೆರೆಯಿರಿ
ಈತನಕ ಇದ್ದಳು, ಈಗಿಲ್ಲ
ಎಂದರೆ ಹೇಗೆ ನಂಬಲಿ
ಕಿಟಕಿಗಳ ತೆರೆದುಕೊಳ್ಳಿಪ
ಬಾಗಿಲುಗಳ ತೆರೆದುಕೊಳ್ಳಿ

ಬಂದಿದ್ದೇನೆ, ಕರೆದುಕೊಳ್ಳಿ
(ನೋಡಬೇಡ ತಿರುಗಿ, ಕಾಡುಲಿಲ್ಲಿ ಹೂವುಗಳು)

ಈ ಕವಿತೆಯಲ್ಲಿ ಕಾಯಿಸಿ ಬೇಸರ ತರಿಸಿದ ಗೆಳೆಯ ಅವಳನ್ನು ಸೇರಲು ಬಂದಿರುತ್ತಾನೆ. ಆದರೆ ಆಕೆ ಅವನಿಗಾಗಿ ಬರುವ ಮುಂಚೆ ತಾರೆಯರನ್ನು ಎಣಿಸುತ್ತಿದ್ದಳು. ಈಗ ಆಕಾಶ ಅವಳಿಗೆ ಬಟಾಬಯಲು ಎಂಬಂತೆ ಅವಳ ಸುತ್ತ-ಮುತ್ತಲು ಕತ್ತಲು ಅವನಿಗಾಗಿ ಮೊದಲು ಕವಿತೆ ಬರೆಯುತ್ತಿದ್ದಳು. ಈಗ ಮೌನವಾಗಿ ಕಾವಲು ನೆನಪುಗಳ ನೆರಳು ಆಗುತ್ತಿದ್ದೇವೆ. ಗಂಡಿನ ಪ್ರೀತಿಗೆ ರಭಸ ಹೆಚ್ಚು, ಹೆಣ್ಣಿನ ಪ್ರೀತಿಗೆ ವ್ಯಾಪ್ತಿ ವಿಶಾಲವಾದದ್ದು. ಹೆಣ್ಣು ಗಂಡನ್ನು ಆಳಲಾರಳು. ಅವಳು ಅವರು ಬರುವ ದಾರಿಯಲ್ಲಿ ಅವನಿಗಾಗಿ ನಿಮಿಷ ನಿಮಿಷ ಸಾಯುತ್ತಾ ಹೋಗುತ್ತಾಳೆ. ಹೆಣ್ಣಿನ ಪ್ರೀತಿಗೆ ತಕರಾರಿದೆ, ಅಸಹನೆಯಿದೆ, ಅಸಮಾಧಾನವಿದೆ, ಸಹಬಾಳ್ವೆಯ ಆಶಯವಿದೆ, ಜೀವನ ಪ್ರೀತಿಯಿದೆ, ಪ್ರತಿರೋಧವಿದೆ, ಗಂಡಿನ ಬದುಕಿನಲ್ಲಿ ಹೆಣ್ಣಿನ ಪ್ರೀತಿಯ ಸ್ಥಾನಮಾನ ಯಾವುದು ಎಂಬುದೇ ಕೊನೆಗೆ ರಹಸ್ಯವಾಗಿಯೇ ಉಳಿಯುತ್ತದೆ. ಆಕೆ ಅವನಿಗಾಗಿ ಬರೆದ ಕವಿತೆಗಳು ಬೆಂದು ಬೂದಿಯಾಗಿರುವ ಸೂಚನೆಯನ್ನು ಗೆಳತಿ ಅವುಗಳನ್ನು ಹಠಮಾರಿ ಗಾಳಿ ಇಡಿಯಾಗಿ ಹಂಚಿಕೊಳ್ಳುತ್ತಿದೆ. ತಡಮಾಡದೆ ಕಸಿದುಕೊ ಎಂದು ಕಾಯಿಸಿ ಬೇಸರ ಮಾಡಿದ ಗೆಳೆಯನಿಗೆ ಒಡೆದು ಹೋದ ಕನ್ನಡಿ, ಮುರಿದು ಹೋದ ಮನಸ್ಸುಗಳನ್ನು ಎಂದು ಜೋಡಿಸಲಾಗುವುದಿಲ್ಲ. ದಯವಿಟ್ಟು ಹೋಗು ಯಾವತ್ತಿಗೂ ಇಲ್ಲ ನಿನ್ನ ಹುಡುಗಿ ಕದ ಮುಚ್ಚಿಕೊ ಎಂಬ ತಿರಸ್ಕಾರದಿಂದ ಕವಿತೆ ಮುಕ್ತಾಯವಿದೆ.

ಪ್ರೀತಿ ಅದೇನು? ಎಂದು
ಯಾಕೆ ಕೇಳುತ್ತೀರಿ?
ಕಡಲನ್ನು ನೋಡಿದ್ದೀರಾ?
ಹಾಗಾದರೆ ಸುಮ್ಮನಿರಿ
ಪರಿಚಯಿಸಿ ಅಂದಿರಾ?
ತುಂಬಾ ಸುಲಭ
ಒಮ್ಮೆ ಅಗಸವನ್ನು
ಕಣ್ಮುಂದೆ ಕರೆಯಿರಿ
(ಪ್ರೀತಿ, ಕಾಡುಲಿಲ್ಲಿ ಹೂವುಗಳು)

ಈ ಕವಿತೆಯಲ್ಲಿ ಕಡಲಿನ ವಿಸ್ತಾರಕ್ಕೆ, ಆಕಾಶದ ಅಗಲಕ್ಕೆ ಹೋಲಿಸುವ ಪ್ರೀತಿ ಪ್ರಕೃತಿಯ ಮೂಲ ರೂಪವಾಗುತ್ತದೆ. ಹೆಣ್ಣಿನೊಂದಿಗೂ ಗಂಡು ನೆಮ್ಮದಿಯಾಗಿ ಬದುಕಲಾರ, ಹೆಣ್ಣಿನ

ಹೊರತಾಗಿಯೂ ಬದುಕಲಾರ. ಪ್ರೀತಿ ಎಂಬುದು ಪ್ರಕೃತಿ ಮನುಷ್ಯನ ನಡುವಿನ ವ್ಯತ್ಯಾಸದ ನೆಲೆಗಳನ್ನು ಸವಿತಾ ಅವರು ತಮ್ಮ ಕಾವ್ಯದಲ್ಲಿ ವಿವರಿಸುತ್ತಾರೆ. ಪ್ರೀತಿಯು ಎಲ್ಲರಿಗೂ ಇಷ್ಟವಾಗುತ್ತದೆ ಅದನ್ನು ತಿಳಿಯಲು ಒಬ್ಬರು ಇನ್ನೊಬ್ಬರನ್ನು ಪರಸ್ಪರ ಅರಿತುಕೊಂಡಾಗ ಮಾತ್ರ ಅದನ್ನು ತಿಳಿಯಲು ಸಾಧ್ಯವಾಗುತ್ತದೆ. ಪ್ರೀತಿಯಲ್ಲಿ ಬಣ್ಣವಿದೆ, ರುಚಿಯಿದೆ, ವಾಸನೆಯಿದೆ ಎಂದು ಹೇಳುತ್ತಾರೆ. ಪ್ರೀತಿಯು ಹೂವಾಗಿ ಹಣ್ಣಾಗಿ ಮತ್ತೆ ಪ್ರೀತಿಯನ್ನು ಹೆರುವ ಬೀಜವಾಗುತ್ತದೆ. ಪ್ರೀತಿಯು ಕೊನೆಯಾಗುತ್ತದೆ.

> ನಿನ್ನ ಸಿಟ್ಟು ಸೆಡವುಗಳನ್ನು
> ಧಿಕ್ಕರಿಸುತ್ತೇನೆ
> ನೀನು ಮೈಯೆಲ್ಲಾ
> ಬಂದೂಕಾಗಿರುವ ತನಕ
> ಈ ಪ್ರೇಮಮಯ
> ಸಮುದ್ರ ಪ್ರವೇಶಕ್ಕೆ ನಿಷೇಧವಿದೆ.
> (ಧಿಕ್ಕರಿಸುತ್ತೇನೆ, ಕಾಡುಲಿಲ್ಲಿ ಹೂವುಗಳು)

ಈ ಕವಿತೆಯಲ್ಲಿ ಹೆಣ್ಣು ತನ್ನ ಚರಿತ್ರೆಯನ್ನು ತಾನೇ ನಿರ್ಮಿಸುವ ಹಂಬಲ. ಅವರಿಗೆ ಆಯ್ಕೆಯ ಹಕ್ಕಿನ ತುಡಿತ ಅವಳನ್ನು ಕಾಡಿದೆ. ಶಿಕ್ಷಿತಳಾಗುವ ಬಯಕೆ, ಸ್ವಾವಲಂಬನೆಯ ಕನಸು, ಗಂಡಿನಿಂದ ಭಿನ್ನವಾದ ನೆನಪುಗಳ ಕುರಿತು ಹೇಳುವಂತಹದ್ದು. ಲೇಖಕಿಯರು ಗೆಳೆಯನನ್ನು ಸುಕೋಮಲ ಹೂವುಗಳನ್ನು ಅವನ ಕೆಂಡದಂತಹ ಕಣ್ಣುಗಳು, ಕೋಗಿಲೆಯ ಹಾಡುಗಳನ್ನು ನಿಷ್ಕರುಣೆಯಿಂದ ಸುಡುವುದನ್ನು ಧಿಕ್ಕರಿಸುತ್ತೇನೆ. ಪ್ರಕೃತಿಯ ಸೂಕ್ಷ್ಮ ಸಂಗತಿಗಳೊಂದಿಗೆ ಬದುಕಿನ ವೈದೃಶ್ಯಗಳನ್ನು ಬೆರೆಸಿ ನೋಡುವ ಮತ್ತು ಆ ಮೂಲಕ ಬದುಕಿನ ಸತ್ಯಗಳನ್ನು ಗ್ರಹಿಸಲು ಪ್ರಕೃತಿ ಇಲ್ಲದೆ ಮನುಷ್ಯನಿಲ್ಲ, ಜೀವಸಂಕುಲವಿಲ್ಲ ಎಂಬುದೂ ಸತ್ಯ. ಮನುಷ್ಯನ ಬದುಕು ಭೂಮಿಯ ಆಕಾಶದ ನಿಮಯಗಳಲ್ಲೇ ರೂಪಿತವಾಗಬೇಕು ಎಂಬುದನ್ನು ಬಯಸುತ್ತದೆ. ಹೀಗಾಗಿಯೇ ಇಲ್ಲಿನ ಧಿಕ್ಕಾರಕ್ಕೆ ವ್ಯಾಪ್ತಿ ಹೆಚ್ಚು. ಕೇವಲ ಮನುಷ್ಯನಿಗಾಗುವ ಅನ್ಯಾಯಕ್ಕೆ ಮಾತ್ರ ಈ ಧಿಕ್ಕಾರವಲ್ಲ. ಹೂವಿಗೆ, ಕೋಗಿಲೆಯ ಹಾಡಿಗೆ, ನದಿಗಳಿಗೆ, ಕಾಡುಗಳಿಗೆ ಆಗುವ ಅನ್ಯಾಯಕ್ಕೂ ಇಲ್ಲಿ ಧಿಕ್ಕಾರವಿದೆ. ಜ್ವಾಲಾಮುಖಿಗಳನ್ನೇ ಒಡಲಿಂದ ನೆಲದ ಪ್ರಕೃತಿಯನ್ನು ತಮ್ಮ ಪಾಡಿಗೆ ಬಿಟ್ಟು ತಂಪಾದ ಕಾಡುಗಳನ್ನು ತಣ್ಣನೆಯ ನದಿಗಳನ್ನು ನಿರಾಕರಿಸಿದರೆ ಮಾತ್ರ ನಿನ್ನನ್ನು ಒಪ್ಪಿಕೊಳ್ಳುತ್ತವೆ. ಗಂಡು ಹೆಣ್ಣಿನ ಪ್ರೀತಿಯಲ್ಲಿ ಅವಳು ಸೂರ್ಯನನ್ನು ಎಣಿಸಿ ತಣ್ಣನೆಯ ಮೋಡಗಳನ್ನು ತಂಪಾದ ಚಂದ್ರರನ್ನೂ ನಿರಾಕರಿಸಬೇಕು. ಪ್ರಕೃತಿಯಲ್ಲಿ ಇರುವಂತಹ ಯಾವುದೇ ಪ್ರಾಣಿ, ಪಕ್ಷಿಗಳು, ಜ್ವಾಲಾಮುಖಿಯೇ ಆಗಲಿ ಸೂರ್ಯನೇ ಆಗಲಿ ಯಾರ

ಮೇಲಿನ ಸಿಟ್ಟಿನಿಂದ ಅವರುಗಳು ಸುಟ್ಟ ದಾಖಲೆಗಳು ಇಲ್ಲ. ತನ್ನ ಗೆಳೆಯನನ್ನು ಭೂಮಿಯ ಆಕಾಶದ ನಿಯಮಗಳನ್ನು ಮೀರಿ ನೀನು ನನ್ನ ಪ್ರೀತಿಯನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಧಿಕ್ಕರಿಸುತ್ತೇನೆ ಎಂಬುದರ ಮೂಲಕ ಕಾವ್ಯ ಮುಗಿಯುತ್ತದೆ.

ಕೊಟ್ಟದ್ದು ಪಾಷಾಣವಲ್ಲ
ಪ್ರೀತಿ
ತುಂಬಿದೆ ತುಳುಕಿದೆ
ತೊರೆದು ಭೀತಿ
ಇನ್ನು ಕಾಯಲಾರೆ
ನಿನಗಾಗಿ ಸಾಯಲಾರೆ
(ಹುಚ್ಚು, ದರುಶನ)

ಸವಿತಾ ಅವರು ತಮ್ಮ ಕಾವ್ಯದಲ್ಲಿ ಪ್ರೀತಿ ಎಂದರೇನು ಎಂಬುದನ್ನು ಹೇಳಲು ಹೊರಟಿದ್ದಾರೆ. ಹೆಣ್ಣಿನ ಅಸಹಾಯಕತೆ, ಗಂಡಿನ ಯಜಮಾನ ಮನುಷ್ಯನ ಸಂಬಂಧಗಳ ಗೋಜಲುಗಳು ಕನಸುಗಳನ್ನು ಆಸೆಗಳನ್ನು ಛಿದ್ರಗೊಳಿಸುವ ಕಟುವಾಸ್ತವದ ತಿಳುವಳಿಕೆಯನ್ನು ಒದಗಿಸುತ್ತದೆ. ಗಂಡು-ಹೆಣ್ಣಿನ ಪ್ರೀತಿ ಎನ್ನುವುದು ಒಂದು ಭ್ರಮೆ. ಅದಕ್ಕೊಂದು ಹುಚ್ಚು ಜಗಿತವಿದೆ. ಗಂಡು ಹೆಣ್ಣಿನ ಸಂಬಂಧದಲ್ಲಿ ಭಾವನೆಗಳಲ್ಲಿ, ಏರುಪೇರಾಗುವ ಬಹುಮುಖ್ಯ ವ್ಯತ್ಯಾಸವೇ ಇದು. ಗೆಳೆಯನಿಗೆ ನಿನ್ನ ಪ್ರೀತಿಯನ್ನು ನಮ್ಮಿಬ್ಬರ ನಡುವೆ ಇದ್ದು ಹೋಗಲಿ ಹೆಣ್ಣಿಗೆ ಒಂದು ಸಾರಿ ತಿರಸ್ಕಾರದ ಮನೋಭಾವ ಬಂದರೆ ಅವಳಿಗೆ ಅವರನ್ನು ನೋಡುವಂತಹ ಆಸಕ್ತಿಯು ಬರುವುದಿಲ್ಲ. ಹೆಣ್ಣನ್ನು ನಾವು ಸಹನೆಗೆ ಹೋಲಿಸುತ್ತೇವೆ. ಗೆಳೆಯನಿಗೆ ಅವಳು ನಾಕು ರಸ್ತೆ ಬೇಕಾದರು ಹಾಡುವೆ ಆದರೆ ನಿನ್ನ ಜೊತೆಗೆ ಮಾತ್ರ ಬರಲಾರೇನು. ಪ್ರೀತಿಯಲ್ಲಿ ಹುಚ್ಚು ಹಿಡಿದವರಿಗೆ ಸುಮ್ಮನೆ ನಗುತ್ತಾರೆ. ಕಾರಣವಿಲ್ಲದೆ ಅಳುತ್ತಾರೆ. ಹೆಣ್ಣಿನ ಮನಸ್ಸಿನಲ್ಲಿ ಎಂತಹ ದುಃಖ ಬೇಕಾದರೂ ಇರಲಿ ಆದರೆ ಅವಳು ಅವುಗಳನ್ನು ತೋರಿಸದೆ ಎಲ್ಲರ ಜೊತೆಯಲ್ಲಿಯೇ ನಗುತ್ತಾ ಇರುತ್ತಾಳೆ. ಗೆಳೆಯನು ಅಥವಾ ಜಗತ್ತು ಆ ನೋವು ದುಃಖವೆನೆಂದು ಅದು ಕೇಳಲಿ ಅಲ್ಲಿಯವರೆಗೆ ನಾ ಸುಮ್ಮನಿರುವೆ ಎಂದು ಹೆಣ್ಣಿನ ದೃಢ ನಿರ್ಧಾರದೊಂದಿಗೆ ಕವಿತೆಯು ಮುಕ್ತಾಯವಾಗುತ್ತದೆ.

ಅಧ್ಯಾಯ – ಆರು

ಸವಿತಾ ನಾಗಭೂಷಣ ಅವರ ಧಾರ್ಮಿಕ ಗ್ರಹಿಕೆಯ ನೆಲೆಗಳು

ಅಧ್ಯಾಯ ೬

ಸವಿತಾ ನಾಗಭೂಷಣ ಅವರ ಧಾರ್ಮಿಕ ಗ್ರಹಿಕೆಯ ನೆಲೆಗಳು

ಸವಿತಾ ನಾಗಭೂಷಣ ಅವರು ತಮ್ಮ ಕಾವ್ಯಗಳಲ್ಲಿ ಸಾಮಾಜಿಕ ನೆಲೆಯಲ್ಲಿ ಮಾನವನಿಗೆ ಅವನ ಬದುಕಿನ ಪರಿಮಿತಿಯಲ್ಲಿಯೇ ವಿಶಿಷ್ಟವಾದ ಜವಾಬ್ದಾರಿ ಹೊಣೆಗಾರಿಕೆಯಿರುತ್ತದೆ. ದೇವರು, ಧರ್ಮ, ನಂಬಿಕೆ, ಆಚಾರ, ವಿಚಾರ, ನಿಷ್ಠೆ ನಿಯಮಗಳು ವ್ಯಕ್ತಿಯನ್ನು ಸಮಾಜ ದ್ರೋಹಿ ಕೃತ್ಯವೆಸಗದಂತೆ ತಡೆಹಿಡಿದಿವೆ. ರಾಮ, ಕೃಷ್ಣ, ಶಿವ ಇಂತಹ ದೈವಪಾತ್ರಗಳು ಏಕಕಾರಿ ವ್ಯಕ್ತಿತ್ವ ಇರುವ ಪಾತ್ರಗಳಲ್ಲ. ಹೆಣ್ಣು ಕಚ್ಚಿದ ಹಣ್ಣನ್ನು ತಿಂದ ರಾಮ, ಹಸಿವನ್ನು ಅಕ್ಷಯ ಪಾತ್ರೆಯಿಂದ ಅಡಗಿಸಿದ ಕೃಷ್ಣ, ಸತ್ತ ಹೆಂಡತಿಯನ್ನು ಹೊತ್ತು ತಿರುಗಿದ ಶಿವ. ಹೀಗೆ ಹಲವು ವರ್ತನೆಗಳು ಕಾವ್ಯಕ್ಕೆ ತುಂಬ ಪ್ರಿಯವಾಗಿದ್ದವೆ. ಅಕ್ಕ, ದ್ರೌಪದಿ, ಅಹಲ್ಯ, ಚಾಮುಂಡಿ, ಗಾಂಧಿ, ಕನಕ, ಕುವೆಂಪು, ಸೀತೆ, ರಾಮ, ಕೃಷ್ಣ, ಶಿವ, ಬಸವ, ಬುದ್ಧ ಹೀಗೆ ಪುರಾಣ ಚರಿತ್ರೆಯು ಹಲವಾರು ಪಾತ್ರಗಳ ಬಗ್ಗೆ ಬಂದಿರುವ ಕವಿತೆಗಳನ್ನೆಲ್ಲ ವಿಂಗಡಿಸಿ ಆಯಾ ವ್ಯಕ್ತಿಗಳ ಪ್ರತ್ಯೇಕ ಸಂಕಲನಗಳನ್ನು ತರುವಷ್ಟು ಕವಿತೆಗಳು ಬಂದಿವೆ. ಸವಿತಾ ಅವರು ಅಕ್ಕ, ಬಸವ, ಬುದ್ಧ ಇವರ ಬಗ್ಗೆ ಕಾವ್ಯಗಳನ್ನು ಬರೆದಿದ್ದಾರೆ. ಅಕ್ಕನೊಂದಿಗೆ ಸಂವಾದ ನಡೆಸುವ ದಾಟಿ, ಅಕ್ಕನಿಗೆ ಪ್ರಶ್ನೆ ಕೇಳುವ ಧಾಟಿ, ಅಕ್ಕನೇ ತಾವಾದ ಸ್ವಗತದ ಧಾಟಿ ಹೀಗೆ ಹಲವು ನೆಲೆಗಳಲ್ಲಿ ಅಕ್ಕನ ಬಗೆಗೆ ಕವಿತೆಗಳು ರಚನೆಯಾಗಿವೆ.

ಪುರಾಣಕ್ಕೆ ಯಾವುದೇ ಚಾರಿತ್ರಿಕ ಆಧಾರಗಳಿಲ್ಲ. ಆಯಾ ಕಾಲದ ಸಂದರ್ಭಕ್ಕೆ ತಕ್ಕಂತೆ ಪುರಾಣ ಮತ್ತು ಮಹಾಕಾವ್ಯಗಳನ್ನು ಹುಟ್ಟುಹಾಕಿದ್ದಾರೆ. ವರ್ತಮಾನದ ಸನ್ನಿವೇಶದಲ್ಲಿ ವಿಮರ್ಶಿಸಬಹುದೇ ವಿನಃ ಪುರಾಣವನ್ನು ಬದಲಾಯಿಸಲು ಸಾಧ್ಯವಿಲ್ಲ. ಹೀಗೆ ನಿರಾಕರಣೆಗೆ ಒಳಪಡುವ ಪಾತ್ರಗಳಲ್ಲಿಯೂ ಇರುವ ಮಾದರಿ ಗುಣಗಳನ್ನು ಹೆಕ್ಕಿ ತೆಗೆಯುವ ತನ್ಮೂಲಕ

ಪೌರಾಣಿಕ ಪಾತ್ರಗಳನ್ನು ಉನ್ನತೀಕರಿಸುವ ಪ್ರಯತ್ನವಾಗಿ ಇದನ್ನು ಗುರುತಿಸಬಹುದು. ನವೋದಯ ಕಾಲಘಟ್ಟದಲ್ಲಿ ಕುವೆಂಪು ಕೂಡ ಪೌರಾಣಿಕ ಪಾತ್ರಗಳನ್ನು ಉದಾತ್ತೀಕರಿಸುವ ಪ್ರಯತ್ನ ಮಾಡಿದ್ದನ್ನು ಈ ಸಂದರ್ಭದಲ್ಲಿ ನಾವು ಉಲ್ಲೇಖಿಸಬೇಕಾಗಿದೆ. ಪುರಾಣದ ಯಾವ ಪಾತ್ರಗಳು ಸಂಪೂರ್ಣವಾಗಿ ನಿರಾಕರಣೀಯ ಅಲ್ಲ. ಹಾಗೆಯೇ ಸಂಪೂರ್ಣವಾಗಿ ಅನುಕರಣೀಯವೂ ಅಲ್ಲ. ಅವರ ವರ್ತನೆಗಳು ಕೆಲವು ಅನುಕರಣೀಯವಾದರೆ ಕೆಲವು ನಿರಾಕರಣ ಪ್ರಶ್ನಿತರಾಗಿದ್ದರೆ ಮನೆಯಲ್ಲಿನ ಧಾರ್ಮಿಕ ವಾತಾವರಣದಿಂದ ದೈವಿಭಕ್ತಿ, ಪುರಾಣ, ಪ್ರವಚನ, ಹಾಡು, ಕೀರ್ತನೆಗಳು ಈ ವಾತಾವರಣದಲ್ಲಿ ಬೆಳೆದಿರಬಹುದು. ಅವರ ಸಾಹಿತ್ಯದಲ್ಲಿ ದೇವರ ಹಾಡು ಅನೇಕ ಬಗೆಯ ಸಂಕೀರ್ತನೆಗಳು, ಭಕ್ತಿಯ ಮಾದರಿಗಳನ್ನು ಕಾಣುತ್ತೇವೆ. ಪುರಾಣ ಚರಿತ್ರೆಗಳು ಕೆಲವರಲ್ಲಿ ಪ್ರಶ್ನೆಗಳನ್ನು ಹುಟ್ಟಿಸುತ್ತವೆ. ಕೆಲವರನ್ನು ಒಪ್ಪಿ ಬಾಳಲು ಒಪ್ಪಿಸಿವೆ. ಕೆಲವರಿಗೆ ಪರ್ಯಾಯಗಳು ಇಲ್ಲದೆ ಅನಿವಾರ್ಯವಾಗಿ ಅನುಸರಿಸಿಕೊಂಡು ಹೋಗಬೇಕಾಗುತ್ತದೆ. ಅಕ್ಕಮಹಾದೇವಿಯನ್ನು ದೇವತೆ ಅಂತ ಪೂಜಿಸುವ ಗಂಡಸರೇ ಗಂಡನನ್ನು ನಿರಾಕರಿಸುವ ಹೆಣ್ಣನ್ನು ಹಾದರಗಿತ್ತಿ ಅಂತ ಕರೆದುಬಿಡುತ್ತಾರೆ. ಇಂಥ ಅನೇಕ ಸಂಗತಿಗಳು, ಸಂಕಟಗಳು ಹೆಣ್ಣಿನ ಬಾಹ್ಯ ಬದುಕು ಮತ್ತು ಅಂತರಂಗದ ನಿಜದನಿಗಳಾಗಿ ಇಲ್ಲಿ ಅನಾವರಣಗೊಂಡಿವೆ. ಗಂಡುಗಳು ಅಯ್ಯೋ ನಾವು ಇವರಿಗೆ ಹೀಗೆಲ್ಲ ಭಾವನೆ ಇದೆ ಅಂತ ಅಂದ್ಕಂಡೇ ಇರ್ಲಿಲ್ಲ ಅಂತ ಬೆಚ್ಚಿ ಬೀಳುವ ಹಾಗೆ ಎಷ್ಟೋ ಒಳ ಮನಸ್ಸಿನ ಬೆಂಕಿಗಳು ಬರೆಯಲ್ಪಟ್ಟಿವೆ.

ಮಹಿಳೆಯು ರಾಮಾಯಣ ಮಹಾಭಾರತ ಕುಲ ಪುರಾಣ ಎಲ್ಲಾ ತಿಳಿದುಕೊಂಡಿರುತ್ತಾಳೆ. ಅವಳಿಗೆ ಅಕ್ಕಮಹಾದೇವಿಗೂ ಗೊತ್ತು ಸೀತೆ, ಸಾವಿತ್ರಿ, ದ್ರೌಪದಿ, ಶಕುಂತಲೆ ಎಲ್ಲರು ಗೊತ್ತು ಅವಳು ಹೊಲದಲ್ಲಿ ಯಂಟೆ ಚುಚ್ಚುವಾಗ, ಕೊನ್ನಾರಿಗದ್ದೆ ಗರಿಕೆ ತಂಡೆನೆಲ್ಲ ಆಯುವಾಗ ಹೇಳುತ್ತಿದ್ದ ಜನಪದ ಕಥೆಗಳು ಒಂದೇ ಎರಡೇ? ನೂರಾರು, ಅವಳೊಳಗೆ ನಮ್ಮ ಚರಿತ್ರೆ ಪುರಾಣಗಳೆಲ್ಲ ಅಂತಸ್ತವಾಗಿದೆ. ಪುರಾಣ ಚರಿತ್ರೆ ಸಂಕಥನಗಳ ದೃಷ್ಟಿಯಿಂದ ಓದುವಾಗೆಲ್ಲ ಇಷ್ಟೆಲ್ಲಾ ಚರಿತ್ರೆ ಪುರಾಣ ತಿಳ್ಕಂಡಿದಾಳಲ್ಲ ಇವು ಪ್ರಶ್ನೆ ಮಾಡೋ ಪುರಾಣ ಚರಿತ್ರೆಗಳು ಕೆಲವರಲ್ಲಿ ಪ್ರಶ್ನೆಗಳನ್ನು ಹುಟ್ಟಿಸುತ್ತವೆ. ಚರಿತ್ರೆ ಪುರಾಣಗಳು ವರ್ತಮಾನದ ವೈಚಾರಿಕ ಪ್ರಜ್ಞೆಯು ಪ್ರಕಟಗೊಳ್ಳಬಹುದಾದ ಸಾಮಗ್ರಿಯಾಗಿ ಬಳಕೆಯಾಗುತ್ತವೆ.

ಪುರಾಣ ಚಿಂತನೆ
ಗರ್ವವೆಂಬುದು
ಹೂವಿನ ಬಳಿ
ಸುಳಿಯದು
ಎಷ್ಟೊಂದು ಚೆಲುವು

ಘನವಾದ ಬಲವು ನಿರಂತರ
ಧ್ಯಾನದ ಫಲವು
(ಬುದ್ಧ ಮತ್ತು ಹೂವು ಹೊಳೆ ಮಗಳು)

ಪುರಾಣ ಚಿಂತನೆಯ ನೆಲೆಯಲ್ಲಿ ಬುದ್ಧನಿಗೊಂದು ಪೂರ್ವಜನ್ಮ ಕಲ್ಪಿಸಿ ಆತನು ತನ್ನ ಪೂರ್ವಜನ್ಮದಲ್ಲಿ ಒಂದು ಹೂವಾಗಿದ್ದ ಎಂದಿದ್ದಾರೆ. ಬುದ್ಧ ತನ್ನ ಪೂರ್ವಜನ್ಮದಲ್ಲಿ ಏನಾಗಿದ್ದ ಎಂಬುದು ಇಲ್ಲಿ ಮುಖ್ಯವಲ್ಲ. ಇದು ನೆಲ ಆಗೆದಂತೆ ದಾಖಲೆಗಳನ್ನು ಆಗೆದು ಸಂಶೋಧಿಸಬೇಕಾದ ಇತಿಹಾಸ ಅಲ್ಲ. ಆದರೆ ಇಂತಹ ನಿರೂಪಣೆಗಳು ಪ್ರತಿ ಪುರಾಣಗಳನ್ನು ಕಟ್ಟುತ್ತವೆ. ಹಾಗೆ ಕಟ್ಟುವ ಮೂಲಕ ಪುರಾಣವೆಂಬುದು ಆಗಿ ಹೋಗಿರುವ ಸಂಗತಿಯಲ್ಲ ಸಿದ್ಧ ಕಥನವಲ್ಲ ಅದು ನಿತ್ಯವೂ ಆಗುತ್ತಲೇ ಹೋಗುವ ಕಥನ ಪ್ರಕ್ರಿಯೆ ಎಂದು ಬಿಂಬಿಸುತ್ತವೆ. ಹೀಗೆ ಗರ್ವವಿಲ್ಲದ ಮೈತ್ರಿ, ಕರುಣೆಗಳನ್ನು ಸಿದ್ಧಿಸಿಕೊಳ್ಳಬೇಕಾದರೆ ಮೊಗ್ಗು ಹೂವಾಗಿ ಅರಳಬೇಕಾದಾಗ ಇರುವ ವ್ಯವಧಾನ ಇರಬೇಕು. ಇದು ಧ್ಯಾನ ಸ್ಥಿತಿಯಲ್ಲಿ ಸಾಧ್ಯವಾಗುವಂತಹುದು ಎಂಬುನದ್ನು ಕೆಲವೇ ಸಾಲುಗಳಲ್ಲಿ ಅರ್ಥಗರ್ಭಿತಗೊಳಿಸಿದ್ದಾರೆ.

ತಾನು ತುಂಬ ಸಣ್ಣವನು
ಅಂದುಕೊಂಡವನು
ಬೃಹತ್ ಬುದ್ಧನನ್ನು ಕೆತ್ತಿದ ಆಹಾ!
ಏನು, ಆಳ, ಅಗಲ, ವಿಸ್ತಾರ ಆಕಾಶದೆತ್ತರ
ಗುಲಾಬಿ ಮೃದು ಪಾದಗಳನ್ನು
ಕೆತ್ತುತ್ತಾ ಕೆತ್ತುತ್ತಾ
ಕಣ್ಣು, ತುಟಿ, ಮೂಗು
ಮುಂಗುರುಳ ಅರಳಿಸುತ್ತಾ
ನೆಲದಲ್ಲಿದ್ದವ ಮುಗಿಲು ಮುಟ್ಟಿದ
(ಬುದ್ಧ ಕವಿತೆ, ಕಾಡುಲಿಲ್ಲ ಹೂವುಗಳು)

ಬುದ್ಧ ಎಂದರೆ 'ಜ್ಞಾನ' ಎಂಬ ಅರ್ಥ ಕೂಡ ಇದೆ. ಯಾವ ಆಸೆ ದುಃಖಕ್ಕೆ ಕಾರಣವೆಂದು ಸಿದ್ಧಾರ್ಥ ಬುದ್ಧನಾಗ ಹೊರಟನೋ ಆ ಮೌಲ್ಯ ಅನುಸರಣೆಯಲ್ಲಿ ಕಷ್ಟಸಾಧ್ಯವಾಗಿರುವ ಹಾಗೆಯೇ ಕೆಲವೊಮ್ಮೆ ಇಷ್ಟವೂ ಆಗದಿರುವ ಸಾಮಾಜಿಕ ಸತ್ಯವನ್ನು ಹೇಳುತ್ತಲೇ ಆ ಮೌಲ್ಯದತ್ತ ಹಿಂಜರಿಕೆಗೆ ಕಾರಣವಾಗುವ ಸ್ವಾರ್ಥ, ಸ್ವಹಿತಗಳ್ಯಾವುದು ಎಂಬುದನ್ನು ಬುದ್ಧನ ಮೌನದೊಂದಿಗೆ ಅಂತಹ ಜ್ಞಾನವನ್ನು ತಾವು ಸಾಧಿಸಿಕೊಳ್ಳಲಾಗದಿರುವ ಹಿಂದಿನ

ವಸ್ತುಸ್ಥಿತಿಯ ಅರಿವಿನೊಂದಿಗೆ ತನ್ನ ಮಾನಸಿಕ ಅಸಹಾಯಕತೆಯ ಬಗ್ಗೆ ಬೇಸರ ಕೂಡ ಕವನದಲ್ಲಿ ಧ್ವನಿಸುತ್ತಿರುವಂತೆ ಭಾಸವಾಗುತ್ತದೆ. ಬುದ್ಧನ ಮೈತ್ರಿ ಮತ್ತು ಕರುಣೆಯ ಪ್ರಸ್ತುತತೆಯನ್ನು ಸಾಬೀತುಪಡಿಸುತ್ತದೆ. ನಮ್ಮ ಜನರು ಬುದ್ಧನು ಬಮಿಯಾನಿನ ಬೆಟ್ಟದಲ್ಲಿ ಸ್ವಲ್ಪ ದಿನಗಳ ಕಾಲ ತಂಗಿದ್ದ ಆದರೆ ಆ ಬೆಟ್ಟದೆ ಆದರೆ ಬುದ್ಧನಿಲ್ಲ ಎಂದು ಹೇಳುತ್ತಾರೆ.ಬಮಿಯಾನಿನಲ್ಲಿ ಬುದ್ಧ ಇರುವವರೆಗೆ ನೋಡಗರ ಕಂಗಳಿಗೆ ಅಲ್ಲಿ ಪ್ರತಿದಿನ ಹಬ್ಬವಾಗಿತ್ತು. ಆದರೆ ಈಗ ಎಲ್ಲವು ನಶ್ವರವಾಗಿದೆ. ಕಡಿದ ತಲೆ ಮುರಿದ ಕಾಲು, ಕುರುಡುಗಣ್ಣು, ಹರಿದ ಮೂಗು ಅವನ್ನು ನಿರಂತರ ಶೋಕದಿಂದ ಕೂಡಿದೆ. ನಂತರ ಅಧೋಗತಿಗೆ ಬರುವುದು ನಿಶ್ಚಿತ ಎಂದು ಹೇಳಬಹುದು. ಇದರ ಹಿಂದೆ ಸಮಕಾಲೀನ ಚಿಂತನೆಗಳ ಬಗ್ಗೆ ವ್ಯಂಗ್ಯವೂ ಇರಬಹುದು. ಬುದ್ಧನ ಸತ್ವ ವ್ಯಕ್ತಿತ್ವವನ್ನು ಹೀಗೆ ಬಿಡಿಸಿಡುವ ಕವನ ಬುದ್ಧನ ತಿರುವು ವಾಸ್ತವಾದಲ್ಲಿ ಬುದ್ಧ ಬಲ್ಲದ ಮೌಲ್ಯ ಎಂಬುದನ್ನು ಧ್ವನಿಸುತ್ತದೆ.

> ಬುದ್ಧನನ್ನು ಉಳಿಸಿ ಎಂದು ಯಾಕೆ
> ಮೊರೆಯಿಡುತ್ತೀರಿ? ನೀವೇ ಇತ್ತ
> ಮದ್ದು ಗುಂಡು, ಫಿರಂಗಿಗಳು ನೀವೇ ಇತ್ತ
> ಕ್ಷಿಪಣಿ, ರಾಕೆಟು, ಟ್ಯಾಂಕರುಗಳು
> ನಿಮ್ಮವೇ ತಂತ್ರ-ಮಂತ್ರಗಳು
> ಅವರ ಪಾಪದಲ್ಲಿ ನೀವೂ ಪಾಲುದಾರರು
> (ಅದೇ ಕವನ, ಕಾಡಲಿಲ್ಲ ಹೂವುಗಳು)

ಬುದ್ಧನನ್ನು ಜಾಗತೀಕರಣದ ಹೆಸರಿನಲ್ಲಿ ಅವರನ್ನು ಉಳಿಸಿ ಎಂದು ಯಾಕೆ ಮೊರೆಯಿಡುತ್ತೀರಿ. ಬುದ್ಧನನ್ನು ಹಣದ ಆಸೆಗಾಗಿಯೆ ಅವನನ್ನು ಹಿಂದಿನ ಜನಾಂಗದವರಿಗೆ ಬಮಿಯಾನಿನಲ್ಲಿ ಬುದ್ಧ ಇದ್ದ ಅನ್ನುವುದೇ ಗೊತ್ತಿರಲಿಲ್ಲ. ಜಾಹಿರಾತುಗಳಲ್ಲಿ ರೇಡಿಯೋ, ಟಿವಿ, ಪೋನು, ಪೇಪರಿನ ತುಂಬಾ ಬುದ್ಧ ಇಂಟರ್‌ನೆಟ್ಟಿನಲ್ಲಿ ಬುದ್ಧ. ನಮ್ಮ ಜನರು ಬುದ್ಧನನ್ನು ಗಾಳಿ, ಬೆಳಕು, ನೀರು ಇಲ್ದೇ ಇರೋ ಜಾಗದಿಂದ ಏರ್‌ಕಂಡೀಷನ್ ಹಾರಿನ ತನಕ ಬುದ್ಧನ ಬಗ್ಗೆ ಮಾತುಗಳು ಕೇಳಿಬರುತ್ತವೆ. ಬಮಿಯೋನಿನ ಬೆಟ್ಟದಲ್ಲಿ ಬುದ್ಧನನ್ನು ಬೆಳದಿಂಗಳ ಬೆಳದವರೆ ಈಗಿಲ್ಲ. ಜೀವನ ಎನ್ನುವುದು ಒಂದು ಕ್ಷಣಿಕ ಇದು ಶಾಶ್ವತವಲ್ಲ ಯಾರ ಜೀವನ ಯಾವಾಗ ಕೊನೆಯಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಜೀವನವೆನ್ನುವುದು ಒಂದು ಚಕ್ರ, ಅದು ತಿರುಗುತ್ತಿರುವಂತೆ ನಾವು ತಿರುಗಬೇಕಾಗುತ್ತದೆ. ಚಕ್ರವನ್ನು ಯಾರು ಕಟ್ಟಿದವರೂ ಇಲ್ಲ ಕೆಡವಿದವರೂ ಇಲ್ಲ. ಆಗ-ಈಗ ಎಂಬುದು ಬುದ್ಧ ನಿಂತಿದ್ದ ನೆಲ, ನೀರು, ಗಾಳಿ, ಆಕಾಶದ ಕಣಕಣದಲ್ಲೂ ಆತ ಹರಿದು ಹಂಚಿಹೋಗಿದ್ದಾನೆ. ಜನರು ಬುದ್ಧನನ್ನು

ಪ್ರತಿಯೊಂದು ವಸ್ತುವಿನಲ್ಲಿ ಅವನು ಇದ್ದಾನೆ ಎಂಬ ನಂಬಿಕೆಯನ್ನು ಹೊಂದಿದ್ದಾನೆ. ನಾವು ಸೇವನೆ ಮಾಡುವಂತಹ ನೀರು ಉಣ್ಣುವ ಅನ್ನದಲ್ಲಿ ಉಸಿರಾಡುವ ಗಾಳಿಯಲ್ಲಿ ಬುದ್ಧನಿರುತ್ತಾನೆ.

ಬುದ್ಧನನ್ನು ಇಂತಹ ಜಾತಿಯವರೇ ಪೂಜಿಸಬೇಕು ಎಂಬ ನಿಯಮವಿಲ್ಲ. ಅವನನ್ನು ಹಿಂದೂ, ಮುಸ್ಲಿಂ, ಜೈನ ಯಾವುದೇ ಪಂಗಡದಲ್ಲಿ ಆಗಲಿ ಪೂಜೆಯನ್ನು ಮಾಡಬಹುದು. ತಾಲಿಬಾನಿನ ಯೋಧನಿಗೆ ಅನಿಸಿದ್ದು ಕಷ್ಟದಲ್ಲಿರುವವರು ಮಂಡಿಯೂರಿ ಕೈ ಜೋಡಿಸಿ ಕಣ್ಮುಚ್ಚಿ ಪ್ರಾರ್ಥಿಸಿದರೆ ಬುದ್ಧನು ನಮ್ಮ ಕಣ್ಮುಂದೆ ಮೂಡುವನು. ಅವನು ಒಡೆದ ತುಟಿ ಹರಿದ ಮೂಗು ಯಾ ಅಲ್ಲಾ, ಬುದ್ಧ, ಬುದ್ಧ ಬುದ್ಧ ಎಂದು ಮಲಗಿದರೂ ಬುದ್ಧ ಎದ್ದರೂ ಬುದ್ಧ ಕನಸಲ್ಲಿ ಮನಸಲ್ಲಿ ನರನಾಡಿ ಮೂಳೆ ಮಾಂಸ ಮಜ್ಜೆಯಲ್ಲಿ ಬುದ್ಧ ಕಾಲ, ದೇಶ, ಭಾಷೆ, ಲಿಂಗ, ಜಾತಿ ಮೀರಿ ನಿಂತವನೆ ಬುದ್ಧ. ಸವಿತಾ ಅವರು ತಮ್ಮ ಕವನ ಸಂಕಲನದಲ್ಲಿ ಅಫ್ಘಾನಿಸ್ತಾನದ ಕೇಂದ್ರ ಭಾಗದ ಬಮಿಯಾನಿನಲ್ಲಿ ಬುದ್ಧ ವಿಗ್ರಹಗಳು ಇಸ್ಲಾಂ ಧರ್ಮಕ್ಕೆ ಅವಮಾನ ಮಾಡುತ್ತಿವೆ ಎಂಬ ಕಾರಣಕ್ಕೆ ತಾಲಿಬಾನ ಆಡಳಿತ, ದೇಶದಲ್ಲಿರುವ ಇಂತಹ ಬುದ್ಧನ ವಿಗ್ರಹಕ್ಕೆ ಫೆಬ್ರವರಿ ೨೬, ೨೦೦೧ರಂದು ಆದೇಶ ನೀಡಿತು. ಜಗತ್ತಿನ ಅತ್ಯಂತ ಎತ್ತರದ ಭಂಗಿಯಲ್ಲಿ ಬುದ್ಧ ಈಗಿಲ್ಲ.

ಕನಕ ಕುರಿ ಕಾಯುತ್ತಿದ್ದ
ಕೃಷ್ಣ ದನ ಮೇಯಿಸುತ್ತಿದ್ದ
ಪರಿಚಯವಾಯಿತು ಹೆಚ್ಚೇನಿಲ್ಲ
ಕನಕ ರೊಟ್ಟಿ ಒಯ್ಯುತ್ತಿದ್ದ
ಕೃಷ್ಣ ಬೆಣ್ಣೆ ಹಚ್ಚುತ್ತಿದ್ದ
ಹಂಚಿಕೊಂಡು ಉಂಡರು ಹೆಚ್ಚೇನಿಲ್ಲ
(ಕನಕ-ಕೃಷ್ಣ ಕಾಡಲಿಲ್ಲ ಹೂವುಗಳು)

ಈ ಕವಿತೆಯು ಕನಕ-ಕೃಷ್ಣ ಒಂದೇ ಜಾತಿಗೆ ಸೇರುವ ಭಿನ್ನ ಪಂಗಡಗಳು ಕನಕ ಕುರುಬರ ಜನಾಂಗಕ್ಕೆ ಸೇರಿದರೆ ಕೃಷ್ಣ ಯಾದವ ಕುಟುಂಬಕ್ಕೆ ಸೇರುತ್ತಾನೆ. ಈ ಎರಡು ಕುಲಗಳಲ್ಲಿ ಬೆಳೆಯುವಂತಹ ಮಕ್ಕಳೇ ಕನಕ-ಕೃಷ್ಣ ಇವರ ಪರಿಚಯವಾಗಿದ್ದ ಕುರಿ ಮತ್ತು ದನ ಮೇಯಿಸುತ್ತಿದ್ದಂತಹ ಸಂದರ್ಭದಲ್ಲಿ ಪರಿಚಯವಾದರೂ ಅವರು ಪ್ರತಿದಿನ ಜೊತೆಯಾಗಿಯೇ ದನ, ಕುರಿ ಕಾಯುವಾಗ ಜೊತೆಯಲ್ಲಿಯೇ ಊಟ ಮಾಡುತ್ತಿದ್ದರು. ಕನಕನ ರೊಟ್ಟಿಗೆ ಕೃಷ್ಣ ಬೆಣ್ಣೆಯನ್ನು ಹಚ್ಚುತ್ತಿದ್ದ ಅವರು ಹಂಚಿಕೊಂಡು ಉಣ್ಣುತ್ತಿದ್ದರು. ಪ್ರತಿದಿನ ಕನಕನಿಗೆ ಹಾಡುವ ಹುಚ್ಚು ಅವನು ಕುರಿಗಳ ಜೊತೆಗೆ ಹಾಡು ಕಟ್ಟಿ ಹಾಡುವಾಗ ಆ ಹಾಡಿಗೆ ಕೊಳಲನ್ನು

ಊದುವ ಹುಚ್ಚು ಕೃಷ್ಣನಿಗೆ ಆಗ ಅವರ ಗೆಳೆತನ ಇನ್ನೂ ಬಲವಾಯಿತು. ಕನಕ ತನ್ನ ಕುರಿಗಳಿಗೆ ಬ್ಯಾ... ಬ್ಯಾ... ಎಂದು ಅವುಗಳನ್ನು ಮಾತನಾಡಿಸುತ್ತಿದ್ದ ಕೃಷ್ಣ ದನಗಳಿಗೆ ಅಂಬಾ ಎಂದು ಕೂಗುತ್ತಿದ್ದ. ಆ ಎರಡು ಶಬ್ದಗಳು ಸೇರಿ ರೆರ್, ರೆರ್, ಮುರ್, ಮುರ್ ಕೂಗು ಹಾಕಿ ಕೂಡಿ ಹಾಡಿ ನಲಿದರು. ಹೆಚ್ಚೇನಿಲ್ಲ. ಕೃಷ್ಣನು ಮಹಾತುಂಟ ಅವನಿಗೆ ಕಳ್ಳತನ ಮಾಡುವುದು ತರಲೆ, ಜಗಳಗಂಟಿ ಆಗಿದ್ದನು. ಕೃಷ್ಣನು ಮಾಡುವಂತಹ ಎಲ್ಲ ತಪ್ಪುಗಳಿಗೆ ಕನಕ ಸಮರ್ಥನೆಯನ್ನು ಮಾಡುತ್ತಿದ್ದ ಕುಲದ ನೆಲೆಯಲ್ಲಿ ಕಾಲವು ಬದಲಾದಂತೆ ಕನಕನು ಮಣ್ಣಾದ, ಕೃಷ್ಣ ಕಲ್ಲಾದ ಅವರ ಕಲ್ಲು-ಮಣ್ಣಿನ ಕತೆ ಇದು ಹೆಚ್ಚೇನಿಲ್ಲ ಎಂದು ಕವಿತೆಯು ಮುಕ್ತಾಯವಾಗುತ್ತದೆ.

ಕಚ್ಚಿ ರುಚಿ ನೋಡಿದ
ಹೆಣ್ಣಿಗೆ ತುಟಿ ಹಚ್ಚಿದನಲ್ಲ
ಆ ರಾಮ ನನಗೆ ಪ್ರಿಯನಾಗಲಿ
ಬಂದಗಳು ಅನ್ನವನೆ ಉಕ್ಕಿಸಿ
ಹಸಿವಿನ ಸೊಕ್ಕಡಗಸಿದನಲ್ಲ ಆ ಕೃಷ್ಣ
ನನಗೆ ಪ್ರಿಯನಾಗಲಿ
(ರಾಮ-ಕೃಷ್ಣ-ಶಿವ ದರುಶನ)

ಪುರುಷೋತ್ತಮ ರಾಮ ಸೀತೆಯನ್ನು ಕಾಡಿಗಟ್ಟಿ ಪತ್ನಿಯನ್ನು ಸಂಶಯಿಸಿದ ಕಾರಣಕ್ಕೂ ಕೃಷ್ಣ ಕಂಡ ಕಂಡ ಹುಡುಗಿಯರ ಸೆರಗು ಹಿಡಿದು ಹೋಗುವುದಕ್ಕಾಗಿ ಲಂಪಟನಾಗಿರುವ ಕಾರಣಕ್ಕೂ ಶಿವ ಇದ್ದ ಹೆಂಡತಿಗೆ ಮರೆಮಾಚಿ ಇನ್ನೊಬ್ಬಳನ್ನು ಕದ್ದು ಮದುವೆಯಾದನೆಂಬ ಕಾರಣಕ್ಕೂ ಪುರುಷ ಪ್ರಧಾನ ವ್ಯವಸ್ಥೆಯ ಹುಸಿ ಆದರ್ಶಗಳ ಸಂಕೇತವಾಗಿ ತಿರಸ್ಕರಿಸಲ್ಪಟ್ಟಿದ್ದಾರೆ. ತನಗಾಗಿ ಹಗಲಿರುಳು ಕಾದು ಕಾದು ಧ್ಯಾನಿಸುತ್ತಿದ್ದ ಶಬರಿ ಕಚ್ಚಿ-ಕಚ್ಚಿ ರುಚಿ ನೋಡಿ ಕೊಡುತ್ತಿದ್ದ ಹಣ್ಣನ್ನು ರಾಮ ತಿನ್ನಲೇಬೇಕೆಂದೇನೊ ಇರಲಿಲ್ಲ. ಆದರೆ ಹಾಗೆ ಕಚ್ಚಿ ನೀಡುತ್ತಿರುವುದರ ಹಿಂದಿನ ಆಕೆಯ ಪ್ರೀತಿ, ಕಾಳಜಿಗಳ ಮುಂದೆ ಅವನು ಮಗುವಾಗುತ್ತಾನೆ. ತಂದೆ ತಾಯಿಗಳನ್ನು ವೃದ್ಧಾಶ್ರಮ ಸೇರಿಸುತ್ತಿರುವ ಸಮಕಾಲೀನ ಸಮಾಜಕ್ಕೆ ಮೇಲು-ಕೀಳುಗಳನ್ನು ತೊರೆಯುವ ನೈಜ ಪ್ರೇಮವನ್ನು ಮಾತ್ರ ಗುರುತಿಸುವಂತಹ ಈ ಆದರ್ಶ ಮಾದರಿಯಾಗುವ ಆಶಯ ಈ ಕವಿಗಿದ್ದಿರಬೇಕು.

ಸತ್ತು ಒರಗಿದ ಸತಿಯ
ಹೊತ್ತು ತಿರುಗಿದನಲ್ಲ
ಅತ್ತು ಸೊರಗಿದನಲ್ಲ ಆ ಶಿವನು

ನನಗೆ ಪ್ರಿಯನಾಗಲಿ
(ಅದೇ ಕವನ)

ಹಸಿವಿನಿಂದ ಸಾವಿರಾರು ಪ್ರಾಣಗಳು ದಿನಂಪ್ರತಿ ದೂರವಾಗುತ್ತಿರುವ ದುರ್ಭಿಕ್ಷದ ಪರಿಸ್ಥಿತಿಯಲ್ಲಿ ಕೃಷ್ಣನಂತೆ ಪವಾಡ ಮಾಡಲು ಸಾಧ್ಯವಿಲ್ಲದಿದ್ದರೂ ಉಳ್ಳವರು ಇಲ್ಲದವರಿಗೆ ಹಂಚುವ ಮೂಲಕ ಎಲ್ಲರೂ ಬದುಕಲು ಅವಕಾಶ ಮಾಡಿಕೊಡಬಹುದು. ಹೀಗೆ ಹಂಚಿ ತಿನ್ನುವ ಆದರ್ಶವೊಂದು ಇಂದಿನ ಅಗತ್ಯವಾಗಿದೆ. ಪತ್ನಿಯನ್ನು ಇನ್ನಿಲ್ಲದಂತೆ ಕಾಡಿಸುವ ಕೆಲವೊಮ್ಮೆ ಅವಳ ಪ್ರಾಣವನ್ನು ಸೆಳೆಯುವ ಪ್ರಸಂಗಗಳು ಕೂಡ ದಿನ ಬೆಳಗಾದರೆ ಸಾವಿರಾರು.

ಹೀಗಿರುವಾಗ ಪತ್ನಿಯ ಸಾವಿಗೆ ಪರಿತಪಿಸುವ ಔದಾರ್ಯವನ್ನು ಹೊಂದಿರುವ ಅಥವಾ ಬದುಕಿದ್ದಾಗಲೂ ಅರ್ಧಾಂಗಿಯೆಂದು ಗೌರವಿಸುವ ಆದರ್ಶ ಕೂಡ ಇಂದಿನ ಅಗತ್ಯವಾಗಿದೆ. ಕವನ ಪೌರಾಣಿಕ ಪಾತ್ರಗಳನ್ನು ಉಲ್ಲೇಖಿಸುತ್ತಿದ್ದರೂ, ಚಿಂತನೆಗಳು ಮಾತ್ರ ಸಮಕಾಲೀನ ಸಂಗತಿಗಳಿಗೆ ಪೂರಕವಾಗುವಂತಹವುಗಳೇ ಆಗಿವೆ. ಈ ಕವಿತೆಯು ಅವಾಸ್ತವದಿಂದ ವಾಸ್ತವದತ್ತ ಮುಖ ಮಾಡಿದೆ ಎಂದೇ ಹೇಳಬಹುದು.

ಬಜಾರಿನಲ್ಲಿ ಬುದ್ಧ
ರಾಮ, ಕೃಷ್ಣ, ಶಿವ, ಗಾಂಧಿ
ಅಂಬೇಡ್ಕರ ಅವರ ಜೊತೆಗೆ ಕುಳಿತಿದ್ದ
ಮೊಂಡು ಕೈ, ಹರಿದ ಅಂಗವಸ್ತ್ರ
ಬುದ್ಧ ಹೌದೋ ಅಲ್ಲವೋ ಎಂದು
ಅನುಮಾನಿಸುವಷ್ಟು ಚಿಂದಿಯಾಗಿದ್ದ
(ಬಜಾರಿನಲ್ಲಿ ಬುದ್ಧ, ದರುಶನ)

ಬುದ್ಧ, ಬಸವ, ಯೇಸು, ಗಾಂಧಿ, ಅಂಬೇಡ್ಕರ ಇಂತಹ ಮಹಾತ್ಮರ ನಿಜವಾದ ತಾಳ್ಮೆ ಮೌಲ್ಯಗಳು ಅವರು ಎಷ್ಟೇ ದಿನ ನಮ್ಮೊಂದಿಗೆ ಇದ್ದರೂ ನಮ್ಮದಾಗದೆ ಹೋಗುವ ವ್ಯಂಗ್ಯವೂ ಇವರನ್ನು ಕಾಡುತ್ತದೆ. ಒಂದಲ್ಲ ಒಂದು ಕಾರಣಕ್ಕೆ ಇವರೆಲ್ಲರೂ ಜಗವನ್ನು ಪೊರೆದವರು. ಇವರಿಗೆ ಲಿಂಗತಾರತಮ್ಯವೂ ಇಲ್ಲ. ಆದರೆ ಅದು ನಮ್ಮಲ್ಲಿದೆ. ಅಷ್ಟೇ ಬುದ್ಧನಂತೆ ಸಂಸಾರ ಬಿಟ್ಟು ಎದ್ದು ಹೋಗುವ ಅನೇಕರಿದ್ದಾರೆ. ಆದರೆ ಅವರಿಗೆ ಜ್ಞಾನೋದಯ ಮಾತ್ರ ಲಭಿಸುವುದಿಲ್ಲ ಅಷ್ಟೇ. ಬಜಾರಿನಲ್ಲಿನ ಬುದ್ಧನು ಒಣಗಿದ ಹೂವು, ಆರಿದ ದೀಪ, ಪುಸ್ತಕ, ಎಂಜಲು ತಟ್ಟೆ, ಒಣಗಿದ ಬಟ್ಟೆ ಹಣ್ಣು ತರಕಾರಿಯು ಒತ್ತರಿಸಿ ಅಂಗೈಯಲ್ಲಿ ಗುಡಿಸಿ, ಸಾರಿಸಿ ಜಾಗ ಮಾಡಿಕೊಟ್ಟಾಗ ಮೇಜಿನ ಮೂಲೆಯಲ್ಲಿ ಕೂತನು ಬುದ್ಧ. ಎಲ್ಲ ರೀತಿಯಲ್ಲೂ ಸರಿ ಆದರೆ ಅವನು

ಜ್ಞಾನೋದಯಕ್ಕಾಗಿ ಹೆಂಡತಿ ಮಕ್ಕಳನ್ನು ತೊರೆದು ಹೋದದ್ದು ಮಾತ್ರ ಸರಿಯಲ್ಲ. ಹೀಗೆ ಸಂಸಾರವನ್ನು ತ್ಯಜಿಸಿ ಸಂತರಾಗುವುದಕ್ಕಿಂತ ಸಂಸಾರದ ಒಳಗೆ ಇದ್ದು ಬಾಳುವುದೇ ಹೆಚ್ಚು ಕಠಿಣವಾದುದು ಎಂದು ಹಲವರು ಭಾವಿಸುತ್ತಾರೆ. ಮನಸ್ಸಿನ ಆಳದಿಂದ ಬುದ್ಧ ಎದ್ದು ಬಂದು ಈಗ ವ್ಯವಹಾರ ಮನೆ ಮಂದಿಯ ಮೋಹ, ಮದ, ಮತ್ಸರ, ಆತಂಕ, ಆವೇಶ, ದುಃಖ, ಕೋಪ ಎಲ್ಲವನ್ನು ಬಿಟ್ಟು ಸಾಧರಣ ಮನುಷ್ಯನಂತೆ ಬದುಕುವುದು ಬುದ್ಧ. ಅಂದರೆ ಅವನಿಗೆ ಒಂದು ಮುಖ ಮಾತ್ರ ಇಲ್ಲ. ಇವನು ಒಂದು ಅರ್ಥಕ್ಕೆ ಮಾತ್ರ ಪ್ರತೀಕವಾಗಿದೆ. ಜನರು ಬುದ್ಧನನ್ನು ಶೋಷಣೆ, ಘೋಷಣೆ, ಯುದ್ಧ ಕದನ ವಿರಾಮಗಳಿಗೆ ಸಮಾಜದಲ್ಲಿ ನಡೆಯುವಂತಹ ಜನರಿಗೆ ರೋಗರುಜಿನಗಳು ಮರಣ ಎಲ್ಲವುಗಳಿಗೆ ಬುದ್ಧನೇ ಕಾರಣ. ಅವನಿಂದಲೇ ಅದಕ್ಕೆ ಮುಕ್ತಿಯನ್ನು ಪಡೆಯುವಂತಹದು. ಬುದ್ಧನು ಸಮಾಜದಿಂದ ಈ ಜಗತ್ತನ್ನು ಬಿಟ್ಟು ಇಪ್ಪತ್ತು ವರ್ಷವಾಯಿತು. ಬುದ್ಧ ನಮ್ಮಲ್ಲಿಗೆ ಬಂದು ನಮ್ಮೊಂದಿಗೆ ಇದ್ದು ಜನರ ಕಷ್ಟ, ಸುಖಗಳನ್ನು ಎಲ್ಲದರಲ್ಲಿಯೂ ಭಾಗಿಯಾಗಿ ನಮ್ಮಿಂದ ದೂರವಾದರು ನಮ್ಮ ಜೊತೆಯಲ್ಲಿಯೇ ಇದ್ದಾರೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ.

ಅಷ್ಟಾಂಗ ಮಾರ್ಗಗಳಿಗೆ ನಮಿಸಿದೆವು ನಿಜ
ಆಚರಿಸಿದೆವೋ ಅನುಮಾನ
ಏರಿದ ಎತ್ತರ, ಇಳಿದ ಪ್ರಪಾತ
ಕವಿದ ಕಾರ್ಮೋಡ, ಕರಗಿದ ಕಾವಳಿ
ಇಲ್ಲದೆಯೂ ಇದ್ದಂತೆ ಜೊತೆಗಿದ್ದ
(ಅದೇ ಕವನ)

ಬುದ್ಧ ನಮ್ಮಿಂದ ದೂರವಾದರೂ ಅವನು ಸ್ವಲ್ಪವೂ ಬದಲಾಗಿಲ್ಲ. ಅದೇ ಗುಂಡುಮುಖ, ತುಂಡು ಬಾಯಿ, ಮೊಂಡು ಕೈ ಹರಿದ ಅಂಗವಸ್ತ್ರವನ್ನು ತೊಟ್ಟುಕೊಂಡು ಅದೇ ಮೌನ ಅದೇ ಸಮಾಧಾನದಲ್ಲಿದ್ದಾನೆ. ಒಂದು ಸಮಾಜದ ಸುತ್ತ-ಮುತ್ತ ಇರುವ ಪರಿಸರದೊಂದಿಗೆ ಬುದ್ಧನನ್ನು ಹೋಲಿಸಿ ಅವರ ಜೀವನದ ಸಾಧನೆಗಳನ್ನು ಕಾರ್ಯಗಳನ್ನು ಕುರಿತಂತೆ ಬುದ್ಧನನ್ನು ಸಮೀಕರಿಸಿ ಬರೆದಿದ್ದಾರೆ.

ಎಲ್ಲ ನೆನಪುಗಳಿಗೆ ವಿರಾಮ
ಹೋಗಿ ಬರುವೆ ರಾಮ
ಇರಿಸುವೆ ನನ್ನೆಸರ
ಉರಿಸಿಕೊ ನಿನ್ನೊಳಗೆ

ಹೋಗಿ ಬರುವೆ ರಾಮ
ನಾ ಬಲ್ಲೆ ನಿನ್ನೊಲುಮೆ
ಇತ್ತ ಬಿತ್ತಿ ಬೆಳದಿಹ ಪ್ರೇಮ
ಅತ್ತ ಬಿತ್ತಿ ಸುತ್ತಿಹ ನೇಮ
ಹೋಗಿ ಬರುವೆ ರಾಮ
(ಹೇರಾಮ್, ಕಾಡಲಿಲ್ಲ ಹೂವುಗಳು,)

ಅಂದರೆ ರಾಮನ ಭಕ್ತಿಯ ಹಾಗೆಯೇ ಪ್ರೀತಿಗಾಗಿ ಹೆಣ್ಣು ಹಂಬಲಿಸುವಂತಹ ಪ್ರಸಂಗವಿದೆ. ಹೆಣ್ಣಿಗೆ ಸಮಾಜ ಕೂಡ ಮಾಡುವ ಯಾವ ಸ್ಥಾನದಲಿಂದಲೂ ಪ್ರಗತಿಯಿಲ್ಲ. ಹೆಣ್ಣು ತನ್ನ ಪ್ರೀತಿಯ ಗಂಡನ ಕಾಪಾಡಿಕೊಳ್ಳುವ ದೃಷ್ಟಿಯಿಂದ ಅವನಿಂದ ದೂರ ಹೋಗುವಂತಹ ಪ್ರಸಂಗದಲ್ಲಿ ತನ್ನ ಮನಸ್ಸಿನಲ್ಲಿ ತನ್ನ ಪ್ರೀತಿಯ ವೇದನೆಯನ್ನು ಹೇಳುವಂತಹ ಪ್ರಸಂಗವಿದೆ. ಹೆಣ್ಣು ತನ್ನ ಗಂಡನಿಗೆ ನಿನ್ನ ಎಲ್ಲ ನೆನಪುಗಳಿಗೆ ವಿರಾಮ ನೀಡಿ ಹೋಗುತ್ತೇನೆ. ನಾ ಇಲ್ಲವೆಂದು ನನ್ನ ನೆನಪುಗಳನ್ನು ಮರೆಯಬೇಡ ಎಲ್ಲ ನೆನಪುಗಳನ್ನು ನಿನ್ನ ಎದೆಯೊಳಗೆ ಇರಿಸೊ ಎಂದು ಹೇಳುವಂತಹ ರೀತಿ ಹೆಣ್ಣು ಎಲ್ಲವನ್ನು ಅರ್ಥಮಾಡಿಕೊಳ್ಳುವಂತಹ ಗುಣವನ್ನು ಹೊಂದಿದ್ದಾಳೆ. ಹೆಣ್ಣು ತನ್ನ ಗಂಡನಿಗೆ ನೀ ನನ್ನ ಎಷ್ಟು ಪ್ರೀತಿಯನ್ನು ಮಾಡುತ್ತೀಯ ಎಂದು ನನಗೆ ಗೊತ್ತು. ಆದರೆ ಈ ಸಮಾಜಕ್ಕೆ ನಾನು ಉತ್ತರವನ್ನು ಕೊಡಬೇಕಾಗಿದೆ. ನಾ ಇಲ್ಲವೆಂದು ನೀನು ಕೊರಗದಿರು ಮರುಗದಿರು ನಾ ನಿನ್ನ ಬಿಟ್ಟು ಹೋದರೆ ಹಿಂಡನಗಲಿದಾ ಚುಕ್ಕಿ ಅದರೆ ಪ್ರಯಾಣ ಕಷ್ಟಕರವಾಗಿರುತ್ತದೆ. ಒಂಟಿ ರೆಕ್ಕೆಯ ಹಕ್ಕಿಯ ಮೇಲೆ ಹಾರಲು ಸಾಧ್ಯವೇ ಎಂದು ಪ್ರಶ್ನೆಯನ್ನು ಮಾಡುವಂತಹ ರೀತಿಯಿದೆ. ದೀಪ ಉರಿಯಬೇಕು ಎಂದರೆ ಎಣ್ಣೆ ಬೇಕು. ಎಣ್ಣೆ ಮುಗಿದ ಮೇಲೆ ಬತ್ತಿ ಜೋರಾಗಿ ಉರಿದು ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ನನ್ನ ನಿನ್ನ ಪ್ರೀತಿಯು ಹಾಗೆಯೇ. ಪ್ರಕೃತಿಯಲ್ಲಿ ಸಹಜವಾದ ನಿಯಮವಿದೆ. ಹಗಲು ಮುಗಿದ ಮೇಲೆ ಇರುಳು ಬರಲೇಬೇಕು. ಮನುಷ್ಯನಿಗೆ ಒಂದು ಸಾರಿ ಕಷ್ಟಗಳು ಬಂದರೆ ನಂತರ ಸುಖ ಬರಲೇಬೇಕು. ಜಗದ ಲೀಲೆಯನ್ನು ಬದಲಾಯಿಸಲು ಸಾಧ್ಯವಿಲ್ಲ. ನನಗೆ ನೀನು ಹೊರಡು ಹೊತ್ತಾಯಿತು. ಕ್ಷೇಮವಾಗಿ ಹೋಗಿ ಬಾ ಎಂದು ಹರಿಸಿ ಕಳಿಸು ಎಂದು ಹೆಣ್ಣು ತನ್ನ ಗೆಳೆಯನಿಗೆ ಹೇಳುವಂತಹ ರೀತಿಯಿದು.

ಹೊತ್ತಿ ಉರಿಯಿತದೆ ಉಂಡೆ
ಧಗ ಧಗ ಧಗ ಧಗ
ಹಿಮ್ಮೇಳನದಲಿ ಗೆವ್ವಿರುಳ ಚಂಡೆ
ಅಬ್ಬಾ! ಎಷ್ಟಾದರೂ ಗಂಡು ಗಂಡೆ

ಹೋಗುವೆನು ರಾಮ

ಅಗಸನ ಕತ್ತೆಗೆ ಸಮವಂತೆ

ಅರಸೊತ್ತಿಗೆಯ ನ್ಯಾಯ

ನಾ ಹೇಳೆ... ನೀ ಕೇಳೆ

ಹೋಗುವೆನು ರಾಮ

(ಅದೇ ಕವನ)

ಗಂಡಿನ ಪ್ರವೃತ್ತಿ ಮತ್ತು ಮೇಲ್ನೋಟದಲ್ಲಿ ಮಾತ್ರ ಸಾತ್ವಿಕರಂತೆ ತೋರಿಸಿಕೊಳ್ಳುವ ಆಷಾಢಭೂತಿತನವನ್ನು ಇಲ್ಲಿ ಹೇಳಲಾಗಿದೆ. ಸಮಾಜ ಇರುವುದೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅವರು ಹೇಳಿದಂತೆ ಕೇಳುವಂತಹ ಪ್ರಸಂಗವಿದೆ. ಸೀತೆಯ ಅಗ್ನಿ ಪ್ರವೇಶ ಮಾಡಿ ತನ್ನ ಪಾತಿವ್ರತ್ಯ ಪ್ರದರ್ಶಿಸಿದರೂ ರಾಮನ ಸಂಶಯಕ್ಕೆ ಕಾಡಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲಾಗಲಿಲ್ಲ. ರಾಮನು ತನ್ನ ಹೆಂಡತಿಯ ಮೇಲೆ ನಂಬಿಕೆ ಇದ್ದರು ಸಹ ಅಗಸನ ಮಾತಿನಿಂದ ಸೀತೆಯನ್ನು ಕಾಡಿಗೆ ಕಳುಹಿಸಿದ ಸೀತೆಯು ಹೆಣ್ಣು ತನ್ನ ಮಾತಿನ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾಳೆ. ಅಗಸನ ಮಾತಿನಿಂದ ಸೀತೆಯನ್ನು ಕಾಡಿಗೆ ಕಳುಹಿಸಿದ ಆದರೆ ಸೀತೆಯನ್ನು ಒಂದು ಮಾತು ನೀ ಹೇಗೆ? ಎಂದು ಕೇಳಲಿಲ್ಲ. ಆದರೆ ಸೀತೆಯು ಹೋಗಿ ಬರುವೆ ರಾಮ ಎಂದು ಹೇಳುವಳು.

ಮನುಷ್ಯನಿಗೆ ಒಂದು ಸಾರಿ ಕಷ್ಟ ಬಂದರೆ ಅವರಿಗೆ ಮೇಲಿಂದ ಮೇಲೆ ಕಷ್ಟಗಳು ಬರುತ್ತದೆ. ಗಾಯದ ಮೇಲೆ ಗಾಯ ಬಂದರೆ ಅದು ಹೇಗೆ ಮಾಯವಾಗುತ್ತದೆ. ಸೀತೆಯು ರಾಮನಿಗೆ ನನಗೆ ನಿನ್ನ ನೆನಪುಗಳನ್ನು ವಿರಾಮ ನೀಡಿ ನಿನ್ನ ತುಟಿಯೊತ್ತಿ ನೂರೊಂದು ಮುತ್ತನಿರಿಸಿ ನಿನ್ನ ಕಣ್ಣಿನ ಹನಿಗಳನ್ನು ಒರೆಸಿ ನನ್ನ ಮುಂದೆ ಕಣ್ಣೀರ ಕರೆದರೆ ಹೇಗೆ ಹೋಗಲಿ ರಾಮ ಮುನ್ನಡೆಸು ರಾಮ ನಾ ಹೋಗಿ ಬರುವೆ ಎಂದು ಹೆಣ್ಣಿನ ಅನುಭವವನ್ನು ಹೆಣ್ಣೊಬ್ಬಳೆ ಮನಕೆ ಮಿಡಿಯದೆ, ನಂಬಿದವನು ಕೈಕೊಟ್ಟು ಏಕಾಂಗಿಯಾಗಿ ನಿಂದ ಹೆಣ್ಣೊಬ್ಬಳ ಅಸಹಾಯಕ ಚಿತ್ರಣ ಇಲ್ಲಿದೆ. ಗಂಡನೇ ಸರ್ವಸ್ವ ವೆಂದು ನಂಬಿಕೊಂಡಿದ್ದಾಗಲೂ ತನ್ನ ಮೂಗಿನ ನೇರಕ್ಕಿಲ್ಲವೆಂಬ ನೆಪವಡ್ಡಿ ಮನೆಯಾಕೆ ಹೆಣ್ಣಾದವಳು ಸದಾ ಶೋಷಿತಳಾಗಿಯೇ ಬದುಕು ಸವೆಸಬೇಕೆ ಇಂಥವರಿಂದ ತನ್ನೊಳಗೆ ತಾನು ಬಿಡುಗಡೆಗೊಳ್ಳಲಾರಳೆ? ಹಾಗೆ ಬಿಡುಗಡೆಗೊಳ್ಳುವುದು ಏಕಾಏಕಿ ಸಾಧ್ಯವಾಗದಿದ್ದರು ಗಂಡಿನ ಅಲೋಚನೆಗೊಳೊಂದಿಗೆ ರಾಜಿಯಾಗುವುದು.

ಸವಿತಾ ಅವರು ಹಿಂದೂ ಧಾರ್ಮಿಕತೆಯನ್ನು ಮಾತ್ರ ವಲಯ ಜಗತ್ತಿನ ಬಹುತೇಕ ಧರ್ಮಗಳಿಂದ ಮೂಲಭೂತವಾದಿ ನಿಲುವುಗಳನ್ನು ತಮ್ಮ ಕಾವ್ಯಗಳು ವಿಂಡಬನೆಗೆ ಒಳಪಡಿಸಿರುವುದು ಕಂಡುಬರುತ್ತದೆ.

ಅಧ್ಯಾಯ – ಏಳು

ಸಮಾರೋಪ

ಅಧ್ಯಾಯ – ೭

ಸಮಾರೋಪ

ಪ್ರಸ್ತುತ ಕಿರುಪ್ರಬಂಧದಲ್ಲಿ ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆ ಎನ್ನುವ ವಸ್ತುವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಕವಿ ಕೇಂದ್ರಿತವಾಗಿರದೆ ಕಾವ್ಯಕೇಂದ್ರಿತ ನೆಲೆಯನ್ನು ಹೊಂದಿದೆ. ಇಪ್ಪತ್ತನೇ ಶತಮಾನದ ಉತ್ತರಾರ್ಧಕಾಲದಿಂದ ಇಪ್ಪತ್ತೊಂದನೇ ಶತಮಾನದ ಮೊದಲ ದಶಕದವರೆಗಿನ ಕಾಲ ವ್ಯಾಪ್ತಿಯಲ್ಲಿ ಬೆಳೆದುಬಂದ ಸವಿತಾ ನಾಗಭೂಷಣ ಅವರ ಕಾವ್ಯದ ವಿಶ್ಲೇಷಣೆಯಲ್ಲಿ ಸಂವೇದನೆ ಭಾಷಾ ಬಳಕೆ, ಸಂವಹನ ಕ್ರಮ ಮತ್ತು ಅವರ ಕವನ ಸಂಕಲನಗಳಿಂದ ಕವನಗಳ ನಿದರ್ಶನಗಳೊಂದಿಗೆ ಚರ್ಚಿಸಲಾಗಿದೆ. ಇವರ ಕಾವ್ಯಗಳು ಎಲ್ಲಾ ವೈಯಕ್ತಿಕ ಶೈಲಿಯಲ್ಲಿ ಕಾವ್ಯಗಳನ್ನು ರೂಪಿಸಿದ್ದಾರೆ. ಸವಿತಾ ಅವರು ಪ್ರಕೃತಿಯಲ್ಲಿ ಇರುವಂತಹ ಪರಿಸರದೊಂದಿಗೆ ತಮ್ಮನ್ನು ಹೋಲಿಸಿಕೊಂಡಿರುವಂತಹ ರೀತಿಯನ್ನು ಮಹಿಳೆಯ ಅನುಭಾವಿಕ ನೆಲೆಗಳನ್ನು ಪುರಾಣ ಮತ್ತು ಚರಿತ್ರೆಯಲ್ಲಿ ಇರುವಂತಹ ಅಂಶಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಸವಿತಾ ಅವರು ಪ್ರೀತಿ, ಪ್ರಣಯ, ವಿರಹಗಳಲ್ಲಿ ಗಂಡು–ಹೆಣ್ಣಿನ ಹೊಂದಾಣಿಕೆಯ ರೀತಿಯನ್ನು ಮತ್ತು ಸಮಾಜದ ಜೊತೆಗೆ ಮಹಿಳೆಯು ಹೇಗೆ ಪ್ರತಿರೋಧವನ್ನು ನಡೆಸಿಕೊಂಡು ಜೀವನ ನಡೆಸಬೇಕು? ಸಮಾಜದಲ್ಲಿ ಇರುವಂತಹ ವರ್ಗ ಅಸಮಾನತೆ, ಲಿಂಗ ಅಸಮಾನತೆ, ಜಾತಿ ಅಸಮಾನತೆಗಳನ್ನು ಕಾವ್ಯಗಳ ಮೂಲಕ ಚರ್ಚಿಸಲಾಗಿದೆ. ಮಹಿಳಾ ಸಂವೇದನೆಗೆ ಇಲ್ಲಿ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಪ್ರತಿಭಟನೆ ಎಂಬುದು ಸಾಮಾಜಿಕ, ಸಾಂಸ್ಕೃತಿಕ ಚೌಕಟ್ಟನ್ನು ಭೇದಿಸಿ ಹೊಸ ಆಲೋಚನಾ ಕ್ರಮಗಳ ನಿಲುವುಗಳನ್ನು ಸವಿತಾ ಅವರ ಕಾವ್ಯಗಳ ಮೂಲಕ ಚರ್ಚಿಸಲಾಗಿದೆ. ಇದರ ಜೊತೆಗೆ ಮಹಿಳೆಯು ಪುರುಷನಿಂದ ಹೇಗೆ ಶೋಷಿತ ಸ್ಥಿತಿಯನ್ನು ತಲುಪುತ್ತಾಳೆ? ಪುರುಷ ಕೇಂದ್ರಿತ ಸಮಾಜದಲ್ಲಿ ಪುರುಷ ಅವಲಂಬನೆ ಇಲ್ಲದೆ ಜೀವನ ನಡೆಸುವಂತಹ ಹೆಣ್ಣಿನ ಧೈರ್ಯವನ್ನು ಇವರ ಕಾವ್ಯಗಳ ಮೂಲಕ ಚರ್ಚಿಸಲಾಗಿದೆ.

ಬಹುಮುಖಿ ನೆಲೆಗಳನ್ನು ಪ್ರತಿಮಾದರಿಗಳ ನಿರ್ಮಾಣದಲ್ಲಿ ಮಹಿಳಾ ಸಂವೇದನೆ ಸ್ವ ಅಸ್ತಿತ್ವದ ಪ್ರಜ್ಞೆಯನ್ನು ಜಾಗೃತಗೊಳಿಸುವ, ಪುರುಷ ಹಿತಾಸಕ್ತಿಗಳು ಸ್ತ್ರೀ ಮಾದರಿಗಳ ಹೆಣ್ಣಿನ ಲೈಂಗಿಕ ಅಸ್ತಿತ್ವವನ್ನು ವೈಭವೀಕರಿಸಿ ಬದುಕನ್ನು ಗ್ರಹಿಸುವ ನೆಲೆಗಳನ್ನು ಇಲ್ಲಿ ಗುರುತಿಸಲಾಗಿದೆ. ಇಲ್ಲಿ ಪುರುಷ ಮತ್ತು ಪ್ರಭುತ್ವ ಹಿತಾಸಕ್ತಿಗಳನ್ನು ಯುದ್ಧ-ದಂಗೆಗಳಂತಹ ಹಿಂಸೆಯನ್ನು ಮಹಿಳಾ ಸಂವೇದನೆಗಳ ಅಡಿಯಲ್ಲಿ ಇಲ್ಲಿನ ಕವಿತೆಗಳು ವಿರೋಧಿಸುತ್ತವೆ. ಇವರ ಎಲ್ಲಾ ಕಾವ್ಯಗಳಲ್ಲಿ ಸ್ವಗತ ನಾಟಕೀಯ ಮಾದರಿಗಳು ವ್ಯಾಪಕವಾಗಿ ಪರಿಣಾಮಕಾರಿಯಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ಪ್ರತಿಯೊಂದು ಧೋರಣೆಯ ಹಿನ್ನೆಲೆಯಲ್ಲಿಯೂ ತಾತ್ವಿಕವಾದ ಕಾರಣವೊಂದು ಇರುತ್ತದೆಯೆಂದು ಗ್ರಹಿಸುವುದಾದರೆ ಸವಿತಾ ಅವರ ಕಾವ್ಯಗಳು ಇಂತಹ ವಿಶಿಷ್ಟ ಮಾದರಿಯಾಗಿವೆ.

ಮಹಿಳೆಯ ಕಲ್ಪನೆ, ಅನುಭವಗಳನ್ನು ಹೊರಹಾಕಲು ಮಹಿಳಾ ಕಾವ್ಯಕ್ಕೆ ಮಹತ್ವದ ಸ್ಥಾನವಿದೆ. ಶತ ಶತಮಾನಗಳಿಂದ ಪುರುಷ ಪ್ರಧಾನ ವ್ಯವಸ್ಥೆಯ ಬಿಗಿಹಿಡಿತದಲ್ಲಿ ತನ್ನ ತನವನ್ನು ವ್ಯಕ್ತಪಡಿಸಲು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಕಡೆಗಣಿಸಲ್ಪಟ್ಟಿರುವ ತನ್ನ ಸ್ವಂತ ಆಸ್ಮಿತೆಯನ್ನು ಶೋಧಿಸಿಕೊಳ್ಳುವುದೇ ಸವಿತಾ ಅವರ ಕಾವ್ಯದ ನಿಲುವಾಗಿದೆ. ಮಹಿಳೆಯ ಸಂಭಾಷಣೆಯನ್ನು ಇವರ ಕಾವ್ಯದಲ್ಲಿ ಮುಖಾಮುಖಿಯ ನೆಲೆಯಲ್ಲಿ ಚಿತ್ರಿಸಿದ್ದಾರೆ. ವಾತ್ಸಲ್ಯ, ಅಂತಃಕರಣ ಮತ್ತು ಧರ್ಮಗಳ ನಡುವಿನ ಘರ್ಷಣೆಯನ್ನು ಮತ್ತು ಮನುಷ್ಯನ ಇಚ್ಛಾಶಕ್ತಿಯ ಬಗೆಗೆ ನ್ಯಾಯ ಮತ್ತು ಒಳಿತಿನ ಗೆಲುವನ್ನು ಇಲ್ಲಿನ ಕಾವ್ಯಗಳ ಮೂಲಕ ಚರ್ಚಿಸಲಾಗಿದೆ. ಸವಿತಾ ನಾಗಭೂಷಣ ಅವರು ಪ್ರಶ್ನೆಯ ಮಾದರಿಯನ್ನು ತಾವೇ ಹಾಕಿಕೊಂಡು ತಾವೇ ಅದಕ್ಕೆ ಉತ್ತರಿಸುವಂತಹ ಮನೋಭಾವನೆಯನ್ನು ನಿರಾಕರಣೆಯ ನೆಲೆಯನ್ನು, ವ್ಯಂಗ್ಯದ ಮಾದರಿಯ ನೆಲೆಗಳನ್ನು ಇಲ್ಲಿನ ಕಾವ್ಯಗಳ ಮೂಲಕ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ಫಲಿತಗಳು:

೧. ಸವಿತಾ ನಾಗಭೂಷಣ ಅವರು ಸ್ತ್ರೀವಾದಿ ನೆಲೆಯಲ್ಲಿ ನಿಂತು ಕಾವ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದು, ಸಮಾಜದಲ್ಲಿ ಲಿಂಗತಾರತಮ್ಯದ ವಿರುದ್ಧ ತಮ್ಮ ನಿಲುವು ವ್ಯಕ್ತಪಡಿಸಿರುವುದನ್ನು ಇವರ ಬಹುತೇಕ ಕಾವ್ಯಗಳಲ್ಲಿ ಗುರುತಿಸಬಹುದಾಗಿದೆ.

೨. ಸವಿತಾ ನಾಗಭೂಷಣ ಅವರು ಕಾವ್ಯದ ಮೂಲಕ ಆಧ್ಯಾತ್ಮಕತೆಯನ್ನು ಪ್ರಸ್ತಾಪಿಸುತ್ತಲೇ ಸಾಮಾಜಿಕ ಬದುಕಿನಲ್ಲಿ ಮಹಿಳೆಯ ಶೋಷಣೆಯ ಸ್ವರೂಪವನ್ನು ಅನಾವರಣಗೊಳಿಸುತ್ತಾರೆ. ಹೀಗಾಗಿ ಇವರ ಕಾವ್ಯಗಳಲ್ಲಿ ಆಧ್ಯಾತ್ಮ ಹಾಗೂ ವರ್ತಮಾನದ ಸನ್ನಿವೇಶಗಳ ನಡುವೆ ಅಂತರ್ ಸಂಬಂಧವು ಕಂಡುಬರುತ್ತದೆ.

೩. ಸವಿತಾ ನಾಗಭೂಷಣ ಅವರು ಸ್ವಗತ ಮತ್ತು ನಾಟಕೀಯ ನೆಲೆಯಲ್ಲಿ ಕಾವ್ಯ ರಚನೆಗೆ ತೊಡಗಿದರೂ ಇಲ್ಲಿ ಮಹಿಳೆಯ ಸ್ಥಿತಿಗತಿ ಹಾಗೂ ಪುರುಷನ ಯಜಮಾನಿಕತೆಯ ನೆಲೆಗಳನ್ನು ವಾಸ್ತವ ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನಗಳು ಕಂಡುಬರುತ್ತವೆ. ನಾಟಕೀಯ ಸಂಭಾಷಣೆಯೊಳಗೆ ಸಮಾಜದ ವಾಸ್ತವಗಳನ್ನು ವಿಡಂಬನೆಗೆ ಗುರಿಪಡಿಸುವುದು ಇವರ ಕಾವ್ಯದ ತಂತ್ರವಾಗಿ ತಿಳಿದುಬರುತ್ತದೆ.

೪. ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಮಹಿಳಾ ಅಸ್ಮಿತೆಯ ನೆಲೆಗಳು ಪ್ರಮುಖವಾಗಿ ಕಂಡುಬರುತ್ತವೆ. ಇಲ್ಲಿ ಸಾಮಾಜಿಕ ಬದುಕಿನಲ್ಲಿ ಹೆಣ್ಣಿನ ಭಾವನೆಗಳು ಹಾಗೂ ಅವಳ ಸಂವೇದನೆಗಳನ್ನು ತಮ್ಮ ಕಾವ್ಯದಲ್ಲಿ ಪ್ರತಿಮಾತ್ಮಕ ನೆಲೆಯಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ.

೫. ಸವಿತಾ ನಾಗಭೂಷಣ ಅವರು ತಮ್ಮ ಕಾವ್ಯಗಳನ್ನು ಸ್ತ್ರೀವಾದಿ ಕೇಂದ್ರಿತ ನೆಲೆಯಿಂದ ಆರಂಭಿಸಿದರೂ ಸಮಾಜದಲ್ಲಿನ ದಮನಿತ ವರ್ಗಗಳ ಸಂವೇದನೆಗಳನ್ನು ಎತ್ತಿಹಿಡಿಯುವ ಮೂಲಕ ಸಾಮಾಜಿಕ ಅಸಮಾನತೆಯ ವಿರುದ್ಧ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಹೀಗಾಗಿ ಇವರ ಕಾವ್ಯಗಳಲ್ಲಿ ದಮನಿತರ ಪರವಾದ ತುಡಿತಗಳು ವ್ಯಕ್ತವಾಗುತ್ತವೆ.

೬. ಸವಿತಾ ನಾಗಭೂಷಣ ಅವರು ಪುರುಷ ಮತ್ತು ಮಹಿಳೆಯ ನಡುವೆ ಸಮಾಜವು ರೂಪಿಸಿರುವ ಅಸಮಾನತೆಯ ಗೆರೆಯನ್ನು ಅಳಿಸಿ ಹಾಕುವ ಆಶಯವೊತ್ತು ಕಾವ್ಯರಚನೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಹೀಗಾಗಿ ಇವರ ಬಹುತೇಕ ಕಾವ್ಯಗಳಲ್ಲಿ ಪುರುಷ ನಿರ್ಮಿತ ಧೋರಣೆಗಳ ಬಗ್ಗೆ ವಿರೋಧ ಕಂಡುಬರುತ್ತದೆ. ಪುರುಷ ನಿರ್ಮಿತ ಮೌಲ್ಯಗಳನ್ನು ಮೀರುವ ನೆಲೆಯಲ್ಲಿ ಇವರ ಬಹುತೇಕ ಕಾವ್ಯಗಳು ರಚನೆಯಾಗಿರುವುದು ಕಂಡುಬರುತ್ತದೆ.

೭. ಸವಿತಾ ನಾಗಭೂಷಣ ಅವರು ಪುರಾಣ ಹಾಗೂ ಚಾರಿತ್ರಿಕ ನೆಲೆಗಳನ್ನು ವರ್ತಮಾನದ ಸ್ತ್ರೀ ಸಂವೇದನೆಯೊಂದಿಗೆ ಬೆಸೆಯುವ ಮೂಲಕ ಪುರುಷನ ಯಜಮಾನಿಕೆಯೊಳಗೆ ಹೆಣ್ಣು ಬಂಧಿತವಾಗಿರುವ ಬಗೆಯನ್ನು ಗುರುತಿಸುವ ಪ್ರಯತ್ನ ಮಾಡುತ್ತಾರೆ. ಹಾಗೆಯೇ ಪುರಾಣದ ಗೊಡ್ಡು ಸಂಪ್ರದಾಯಗಳನ್ನು ಮೀರುವ ಬಗೆಯು ಇವರ ಕಾವ್ಯಗಳಲ್ಲಿ ಕಂಡುಬರುತ್ತದೆ.

೮. ಸವಿತಾ ನಾಗಭೂಷಣ ಅವರು ತಮ್ಮ ಕಾವ್ಯದಲ್ಲಿ ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳ ಮೇಲೆ ನಡೆಸುವ ಆರ್ಥಿಕ ದೌರ್ಜನ್ಯದ ಸ್ವರೂಪವನ್ನು ಭಾರತದಲ್ಲಿ ಕಂಡುಬರುವ ಪುರುಷ ವ್ಯವಸ್ಥೆಯು ಹೆಣ್ಣಿನ ಮೇಲೆ ನಡೆಸುವ ದೌರ್ಜನ್ಯಕ್ಕೆ ಹೋಲಿಸಿ ನೋಡುವಂತಹ ವಿಧಾನ ಅನುಸರಿಸುವುದು ಕಂಡುಬರುತ್ತದೆ.

೯. ಸವಿತಾ ನಾಗಭೂಷಣ ಅವರ ಕಾವ್ಯಗಳಲ್ಲಿ ಪ್ರಕೃತಿ ಮತ್ತು ಮನುಷ್ಯನ ಸಂಬಂಧಗಳ ಸೂಕ್ಷ್ಮತೆಗಳು ಕಂಡುಬರುತ್ತವೆ. ಪ್ರಕೃತಿ ಸಹಜವಾದ ಮಾನವ ಬದುಕಿನಲ್ಲಿ ಮೂಲಭೂತವಾದಿ ಮನುಸುಗಳು

ಸೃಷ್ಟಿಸುತ್ತಿರುವ ಗೊಡ್ಡು ಸಂಪ್ರದಾಯಗಳಿಂದ ಉಂಟಾಗಿರುವ ಅಸಮಾನತೆಯ ನೆಲೆಗಳನ್ನು ಇವರು ಎತ್ತಿಹಿಡಿಯುವುದು ತಿಳಿದುಬರುತ್ತದೆ.

೧೦. ಸವಿತಾ ನಾಗಭೂಷಣ ಅವರು ಸ್ತ್ರೀವಾದಿ ನೆಲೆಯಲ್ಲಿ ನಿಂತು ಸ್ತ್ರೀಪರವಾದ ನೆಲೆಯಲ್ಲಿ ಕಾವ್ಯರಚನೆಗೆ ಮುಂದಾಗುತ್ತಾರೆ. ಆದರೆ ವಾಸ್ತವ ಬದುಕಿನಲ್ಲಿ ಕಂಡುಬರುವ ಅಡ್ಡಿ–ಆತಂಕಗಳಿಂದ ಹೆಣ್ಣಿನ ಬದುಕಿನಲ್ಲಿ ಉಂಟಾಗುವ ಅಸಹಾಯಕತೆಗೆ ಶರಣಾಗಿ ಮೌನವಾಗುವ ಬಗೆಯೂ ಕೂಡ ಇವರ ಕಾವ್ಯಗಳಲ್ಲಿ ಕಂಡುಬರುತ್ತದೆ. ಹೀಗಾಗಿ ಇವರ ವಿಚಾರಗಳಲ್ಲಿ ಅವಳಿ ವೈರುಧ್ಯಗಳು ಗೋಚರವಾಗುತ್ತವೆ.

ಅನುಬಂಧಗಳು

ಪ್ರಾಥಮಿಕ ಆಕರಗಳು

೧. ಸವಿತಾ ನಾಗಭೂಷಣ, ಹೊಳೆ ಮಗಳು, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೬.

೨. ಸವಿತಾ ನಾಗಭೂಷಣ, ಆಕಾಶಮಲ್ಲಿಗೆ, ನೆಲಮನೆ ಪ್ರಕಾಶನ, ಬೆಂಗಳೂರು, ೨೦೦೦.

೩. ಸವಿತಾ ನಾಗಭೂಷಣ, ಜಾತ್ರೆಯಲ್ಲಿ ಶಿವ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೨.

೪. ಸವಿತಾ ನಾಗಭೂಷಣ, ಕಾಡುಲಿಲ್ಲಿ ಹೂವುಗಳು, ರೂಪ ಪ್ರಕಾಶನ, ಮೈಸೂರು, ೨೦೦೬.

೫. ಸವಿತಾ ನಾಗಭೂಷಣ, ದರುಶನ ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೯.

೬. ಸವಿತಾ ನಾಗಭೂಷಣ, ಹೂವ ಮನಸ್ಸಿನ ಹೋರಾಟಗಾರ ಹಾಗೂ ಇತರ ಲೇಖನಗಳು, ಲೋಕಿಯಾ ಪ್ರಕಾಶನ, ಬಳ್ಳಾರಿ, ೨೦೧೧

ಪೂರಕ ಆಕರಗಳು

೧. ಅನ್ನಪೂರ್ಣ ಹೆಚ್., ಆಧುನಿಕ ಮಹಿಳಾ ಕಾವ್ಯ ಅಭಿವ್ಯಕ್ತಿ ವಿನ್ಯಾಸಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫

೨. ಆಶಾದೇವಿ ಎಂ.ಎಸ್., ಸ್ತ್ರೀಮತವನುತ್ತರಿಸಲಾಗದೇ?, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬.

೩. ಡಾ. ಉಷಾರಾಣಿ ತೆಗ್ಗಿನಮಠ, ಮಹಿಳಾ ಸಾಹಿತ್ಯ, ಅಭಿವ್ಯಕ್ತಿ ಕ್ರಮದ ತಾತ್ವಿಕ ಸ್ವರೂಪ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಗೌರೀಶ ಕಾಯ್ಕಿಣಿ, ಕಾವ್ಯವೆಂದರೇನು? ಗೌರೀಶ ಕಾಯ್ಕಿಣಿ ಅವರ ಆಯ್ದ ಬರಹಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೬.

೫. ನಾಗಭೂಷಣಸ್ವಾಮಿ ಜಿ.ಎಲ್. ವಿಮರ್ಶೆಯ ಪರಿಭಾಷೆ, ಪರಿಸರ ಸಾಹಿತ್ಯ ಪ್ರಕಾಶನ, ೧೯೮೨, ಅಭಿನವ ಪ್ರಕಾಶನ.

೬. ಪ್ರಭಾವತಿ ಎಸ್.ವಿ., ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ, ೨೦೧೩.

೭. ಡಾ. ಎಚ್.ಎಸ್. ಶ್ರೀಮತಿ, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೮. ಬಂಡಾಯ ಕಾವ್ಯ, ಡಾ. ಉಪಲೀಕನಹಳ್ಳಿ, ಬಿ. ರಾಜಣ್ಣ ಶಕ್ತಿ ಪ್ರಿಂಟರ್ಸ್, ಆಂಡ್ ಪಬ್ಲಿಷನ್ಸ್, ಬೆಂಗಳೂರು.

೯. ರಾಘವೇಂದ್ರರಾವ್ ಎಚ್.ಎಸ್., ಕಣ್ಣಹನಿಗಳ ಕಾಣಿಕೆ, ಇಳಾ ಪ್ರಕಾಶನ, ಬೆಂಗಳೂರು, ೨೦೧೨.

೧೦. ವಿಮರ್ಶೆಯ ಸವಾಲು, ಡಾ. ಆರ್ಕೆ ಮಣಿಪಾಲ, ಸಂವಾದ ಪ್ರಕಾಶನ, ೨೦೦೬.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ